ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 4

ಜೂನ್ 24, 2007

ಬೆಲೆ ರೂ. 5.00





ರಾಷ್ಟ್ರಕಿನ್ನು ಮಹಿಳಾ ರಾಷ್ಟ್ರಾಧ್ಯಕ್ಷರೇ?



ಹೀರೋ ಸಚಿವನ ಉಸ್ತುವಾರಿಯಲ್ಲಿ ಜೀರೋ ಆದ ಜಿಲ್ಲೆ

ರೈತರ ಆತ್ಮಹತ್ಯೆಯೂ 'ಕುಮಾರ'ನ ರಾಜಿನಾಮೆ ಎಂಬ ಸಿನಿಮಾ ಕಥೆಯೂ


'ಅಂದದೂರು' ಬೆಂಗಳೂರು ಸೊರಗಿದ ಬದುಕಿಗೆ ಸೂರೊಂದು ನೀಡಿ

ಪೇಜ್ 11



ಎದೆಗುದಿಯ ಹೊತ್ತು ಬಂದರು ದಲಿತರು

ಕೌಟುಂಬಿಕ ಮೌಲ್ಯಗಳನ್ನು ಬಿತ್ತುವ



'ನಂ. 73 ಶಾಂತಿನಿವಾಸ'

ಇದ್ದದ್ದು ಇದ್ದಾಂಗ

ಮುಖ್ಯ ಕಾರ್ಯದರ್ಶಿ ಪಿ.ಬಿ.ಮಹಿಷಿ ಮತ್ತು ಅವರ ಆಯ್ಕೆಯ ಹಿರಿಯ ಅಧಿಕಾರಿಗಳ ಗುಂಪೊಂದು ಸೇರಿಕೊಂಡು ಸರ್ಕಾರಿ ಉದ್ಯಮಗಳ ಇಲಾಖೆಯಲ್ಲಿ ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆಸಿದ್ದಾರೆ..... ನನಗೆ ಈ ಅಧಿಕಾರಿಗಳಿಂದ ಜೀವ ಬೆದರಿಕೆಯಿದೆ.

- ವಿಜಯಕುಮಾರ್
ಐಎಎಸ್ ಅಧಿಕಾರಿ, ಮೈಸೂರು ಲ್ಯಾಂಪ್ಸ್ ನಿರ್ದೇಶಕರು

★

ಬಿಜೆಪಿಗೆ ಅಧಿಕಾರ ಹಸ್ತಾಂತರಿಸಲು ಇನ್ನೂ ನಾಲ್ಕು ತಿಂಗಳಿದೆ. ಈ ಅವಧಿಯಲ್ಲಿ ಬಿಜೆಪಿ ನಡವಳಿಕೆ ಬಹಳ ಮುಖ್ಯ. ರಾಜಧರ್ಮವನ್ನು ಬಿಜೆಪಿ ಪಾಲಿಸಬೇಕು. ಅದನ್ನು ಗಮನಿಸುತ್ತೇವೆ.

- ಹೆಚ್.ಡಿ. ದೇವೇಗೌಡ

★

'ಇಷ್ಟು ವರ್ಷಗಳವರೆಗೆ ವಿದ್ಯಾರ್ಥಿಗಳಿಗೆ ಮೋಸ ಮಾಡುತ್ತಲೇ ಬಂದಿದ್ದೀರಿ. ಇನ್ನು ಮುಂದೆ ನಿಮ್ಮದು ನಡೆಯೋದಿಲ್ಲ. ತಪ್ಪು ಮಾಡಿದ್ದೀರಿ, ಶಿಕ್ಷೆ ಅನುಭವಿಸಿ. ನಿಯಮ ಉಲ್ಲಂಘಿಸಿ ಸರ್ಕಾರಕ್ಕೂ ಮೋಸ ಮಾಡಿದ್ದೀರಿ. ನಿಮ್ಮ ಈ ಕ್ರಮವನ್ನು ಕೋರ್ಟ್ ಎಂದಿಗೂ ಸಹಿಸಲ್ಲ. 'ನಿಯಮವನ್ನು ಉಲ್ಲಂಘಿಸಿರುವ ನೀವು ಶಿಕ್ಷಣ ಇಲಾಖೆಯನ್ನೇ ಭ್ರಷ್ಟಾಚಾರಕ್ಕೆ ನೂಕಿದ್ದೀರಿ.

ಮಾಧ್ಯಮ ನೀತಿ ಉಲ್ಲಂಘಿಸಿದ ಖಾಸಗಿ ಶಾಲೆಗಳಿಗೆ **ಹೈಕೋರ್ಟ್ ಪೀಠದ ಎಚ್ಚರಿಕೆ**

★

'ಈ ಬಾರಿ ಸಾಲ ಮನ್ನಾ ಮಾಡಿರುವುದರಿಂದ ರಾಜ್ಯದಲ್ಲಿ ಹಲವಾರು ಸಹಕಾರ ಸಂಘಗಳು ಸಂಕಷ್ಟಕ್ಕೆ ಸಿಲುಕಿವೆ. ಈ ಬಾರಿ ರೈತರಿಗೆ ನೀಡುವ ಸಾಲದ ಪ್ರಮಾಣದಲ್ಲಿ ಭಾರಿ ಕಡಿತವಾಗುವುದು ನಿಶ್ಚಿತ. ಸರ್ಕಾರ ಸಾಲ ಮನ್ನಾ ಮಾಡಿತು. ಇದರಿಂದ ರೈತರಿಗೆ ತೊಂದರೆ ಆಗುತ್ತಿದೆ.

- ಜಿ.ಟಿ.ದೇವೇಗೌಡ ಸಹಕಾರ ಸಚಿವ

★

ಬಸವಣ್ಣನ ಹೆಸರನ್ನು ಇದೀಗ ಮಠಾಧೀಶರು ಸಹ ದುರುಪಯೋಗ ಮಾಡುತ್ತಿದ್ದಾರೆ. ಅವರ‍್ಯಾರಿಗೂ ಸತ್ಯ ಏನೆಂದು ಗೊತ್ತಿಲ್ಲ.

- ಪಾಟೀಲ ಪುಟ್ಟಪ್ಪ

★

'ಗುಡಿಸಲಿದ್ದಾಗಲೇ ಚೆನ್ನಾಗಿತ್ತು, ಸೂರು ಅಂತ ಒಂದಿತ್ತು. ಈಗ ನೋಡಿ ನಮ್ಮ ಸ್ಥಿತಿ. ರಾತ್ರಿ ಅಕ್ಕಪಕ್ಕದವರ ಮನೆಯಲ್ಲಿ ಮಲಗಬೇಕು. ಬೆಳಿಗ್ಗೆ ಕಟ್ಟುತ್ತಿರುವ ಮನೆ ಮುಂದೆ ಒಲೆ ಹಚ್ಚಬೇಕು'

ರಂಗಶೆಟ್ಟಿ
ಮುಖ್ಯಮಂತ್ರಿ ಗ್ರಾಮ ವಾಸ್ತವ್ಯಕ್ಕಾಗಿ ಚಾಮರಾಜನಗರದ ಹೊಸಮನೆ ಕಟ್ಟಲೆಂದು ಹಳೆ ಮನೆ ಕೆಡವಿಕೊಂಡವರು

ಮೊದಲನೆ ಸ್ವಾತಂತ್ರ್ಯ ಸಂಗ್ರಾಮಕ್ಕೆ 150 ವರ್ಷ

ಕೋಲಾರದಲ್ಲಿ ಜನೋತ್ಸವಕ್ಕೆ ಚಾಲನೆ

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೆ ಹಾಗೂ ಶಾಹೀದ್ ಭಗತ್‌ಸಿಂಗ್‌ರ ಜನ್ಮಶತಾಬ್ದಿ ಅಂಗವಾಗಿ ಎಸ್‌ಎಫ್‌ಐ, ಡಿವೈಎಫ್‌ಐ ಮತ್ತು ಎಐಡಿಬ್ಲ್ಯೂಎ ನೇತೃತ್ವದಲ್ಲಿ "ದೇಶಪ್ರೇಮಿ ಜನೋತ್ಸವ' ಶೀರ್ಷಿಕೆಯಡಿ ಕೋಲಾರ ಜಿಲ್ಲೆಯಾದ್ಯಂತ ನಾಲ್ಕು ತಿಂಗಳ ಕಾಲ ವಿವಿಧ ರೀತಿಯ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜೂನ್ 14ರಂದು ಕೋಲಾರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಈ ದೇಶಪ್ರೇಮಿ ಜನೋತ್ಸವ ಕಾರ್ಯಕ್ರಮ ಉದ್ಘಾಟನೆಯಾಯಿತು.

ಸ್ವಾತಂತ್ರ್ಯಕ್ಕಾಗಿ ಮಡಿದ ತ್ಯಾಗ ಬಲಿದಾನ ತಿಳಿಸಬೇಕಿದೆ

- ಜಿ.ಎಸ್.ಶಿವರುದ್ರಪ್ಪ

ನಾಳಿನ ಆಡಳಿತ ಸೂತ್ರ ಹಿಡಿಯಬೇಕಾದ ಯುವಜನತೆಗೆ ಮೌಲ್ಯಾಧಾರಿತ ಮಾರ್ಗದರ್ಶನ ಮಾಡಲಾಗದಷ್ಟು ಭ್ರಷ್ಟ ರಾಜಕೀಯ ವ್ಯವಸ್ಥೆ ದೇಶದಲ್ಲಿ ತುಂಬಿದೆ ಎಂದು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ವಿಷಾದ ವ್ಯಕ್ತಪಡಿಸಿದರು. ಶತಶತಮಾನಗಳಿಂದ ಕಾಪಾಡಿಕೊಂಡು ಬಂದ ಕೋಮುಸಾಮರಸ್ಯದ ಆಕೃತಿಗಳು ಧರ್ಮ ಮತ್ತು ರಾಜಕಾರಣದ ಅಪವಿತ್ರ ಮೈತ್ರಿಯಿಂದ ಭಗ್ನವಾಗುತ್ತಿವೆ. ವಿಜ್ಞಾನ ತಂತ್ರಜ್ಞಾನಗಳ ಪ್ರಗತಿಯ ನಡುವೆಯೂ ಎಷ್ಟೋ ಜಡ ಸಂಪ್ರದಾಯಗಳು ಮುಂದುವರೆಯುತ್ತಿರುವುದು, ಹೊಸದಾಗಿ ಹುಟ್ಟಿಕೊಳ್ಳುತ್ತಿರುವ ಮೂಢನಂಬಿಕೆಗಳು ದೇಶವನ್ನು ಅಲ್ಲೋಲಕಲ್ಲೋಲ ಮಾಡುತ್ತಿದ್ದರೆ ನವವಸಾಹತು ರೂಪದಲ್ಲಿ ವಾಣಿಜ್ಯ ಸಂಸ್ಕೃತಿಗಳ ನಿಯಂತ್ರಣ ಶಾಹಿ ಆರಂಭವಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿದರು. ಸ್ವಾತಂತ್ರ್ಯ ನಂತರ ಸಮಕಾಲೀನ ಜಗತ್ತು ಸಾಕಷ್ಟು ಮುಂದುವರೆದಿದ್ದರೂ ಅನೇಕ ಬಗೆಯ ತಲ್ಲಣಗಳಿಂದ ತುಂಬಿದೆ. ಈಗಿನ ಪೀಳಿಗೆಯ ಚರಿತ್ರೆಯ ಸಮರ್ಪಕ ಮಾಹಿತಿಯೂ ಇಲ್ಲವಾಗಿದೆ. ಸ್ವಾತಂತ್ರ್ಯಕ್ಕಾಗಿ ಮಾಡಿದ ತ್ಯಾಗ ಬಲಿದಾನಗಳನ್ನು ತಿಳಿಸುವ ಮೂಲಕ ಆರೋಗ್ಯ ಪೂರ್ಣ ದೇಶಪ್ರೇಮ ಬೆಳೆಸುವ ಅವಕಾಶಗಳೂ ಇಲ್ಲವಾಗಿವೆ. ಈ ಪ್ರಯತ್ನಗಳನ್ನು ಶಿಕ್ಷಣ ವ್ಯವಸ್ಥೆಯಲ್ಲೂ ಮಾಡಲಾಗುತ್ತಿಲ್ಲ. ಸ್ವಾತಂತ್ರ್ಯ ಸಂಗ್ರಾಮದ ಪರಿಚಯ ಮಾಡಿಕೊಡುವ ಮ್ಯೂಸಿಯಂಗಳನ್ನು ದೇಶವಿಡೀ ಸ್ಥಾಪಿಸಿ ಯುವಪೀಳಿಗೆಗೆ ಚರಿತ್ರೆಯ ದರ್ಶನ ಮಾಡಿಕೊಡಬೇಕು ಎಂದು ಶಿವರುದ್ರಪ್ಪ ಸಲಹೆ ನೀಡಿದರು.

1857ರ ಸ್ವಾತಂತ್ರ್ಯ ಹೋರಾಟ ರಾಷ್ಟ್ರೀಯ ಪ್ರತಿಭಟನೆಯೋ ಸಿಪಾಯಿ ದಂಗೆಯೊ ಎಂಬ ಬಗ್ಗೆ ಚಿಂತನೆ ನಡೆಯಬೇಕೆಂದು ಜಿಎಸ್‌ಎಸ್ ಹೇಳಿದರು. ಭಾರತದ ಚರಿತ್ರೆ ಬಗ್ಗೆ ಬ್ರಿಟಿಷ್ ಚರಿತ್ರಕಾರರಿಗಿಂತಲೂ ರಷ್ಯನ್ ಚರಿತ್ರಕಾರರು ಹೆಚ್ಚಿನ ತಿಳುವಳಿಕೆ ಪ್ರಕಟಿಸುತ್ತಾರೆ ಎಂಬುದು ರಾಮಮನೋಹರ್ ಲೋಹಿಯಾರ ಅಭಿಪ್ರಾಯವಾಗಿದೆ. ಅಂದಿನ ಬ್ರಿಟಿಷ್ ಸಂಸತ್ತಿನ ಪ್ರತಿಪಕ್ಷ ನಾಯಕರಾಗಿದ್ದ ಡ್ರೆಸೇಲಿಯಾ ಇದು ಕೇವಲ ಸೈನಿಕರ ಪ್ರತಿಭಟನೆಯಲ್ಲ, ರಾಷ್ಟ್ರೀಯ ಸ್ವರೂಪದ ಹೋರಾಟ ಎಂದು ವಿಶ್ಲೇಷಿಸಿರುವುದಾಗಿ ತಿಳಿಸಿದರು.



ಜಾಗತೀಕರಣದಿಂದ ಶೋಷಣೆ, ದಬ್ಬಾಳಿಕೆ ಮರುಕಳಿಸುತ್ತಿದೆ

- ಕೋ.ಚನ್ನಬಸಪ್ಪ

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕೋ. ಚೆನ್ನಬಸಪ್ಪ ಮಾತನಾಡಿ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮೊದಲು ಇದ್ದ ಶೋಷಣೆ-ದಬ್ಬಾಳಿಕೆಗಳ ಸ್ಥಿತಿ ಇಂದು ಜಾಗತೀಕರಣದಿಂದ ಮರುಕಳಿಸುತ್ತಿದೆ. ಬಹುಮುಖೀ ಸಂಸ್ಕೃತಿಯ ದೇಶವನ್ನು ಛಿದ್ರಗೊಳಿಸುವ ಪ್ರಯತ್ನಗಳನ್ನು ಬಾಬಾಬುಡನ್‌ಗಿರಿಯನ್ನು ದತ್ತಪೀಠಗೊಳಿಸುವ ಮತ್ತು ಹುಬ್ಬಳ್ಳಿ ಈದ್ಗಾ ಮೈದಾನವನ್ನು ಅಯೋಧ್ಯೆ ಮಾಡುವ ಮೂಲಕ ನಡೆಸಲಾಗುತ್ತಿದೆ ಎಂದು ತೀವ್ರವಾಗಿ ಟೀಕಿಸಿದರು.



ಜನೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರಕವಿ ಜಿಎಸ್ ಶಿವರುದ್ರಪ್ಪನವರು ಕೋಲಾರ ಜಿಲ್ಲೆಯಲ್ಲಿ 'ಜನಶಕ್ತಿ' ಕನ್ನಡ ವಾರಪತ್ರಿಕೆಯನ್ನು ಬಿಡುಗಡೆ ಮಾಡಿದರು.

ದೇಶದಲ್ಲಿ ಜಾಗತೀಕರಣ ಜಾರಿಗೊಳಿಸುತ್ತಿರುವ ಸಂದರ್ಭದಲ್ಲಿ ರೈತರಲ್ಲಿ ಆತ್ಮವಿಶ್ವಾಸ ಮೂಡಿಸುವುದು ಹೇಗೆ ಸಾಧ್ಯ? ರೈತರಿಗೆ ಆತ್ಮಹತ್ಯೆಯೊಂದೇ ಪರಿಹಾರವಾಗಿ ಕಾಣುತ್ತಿದೆ. ಮುಖ್ಯಮಂತ್ರಿ ಬಿ.ಟಿ. ಗೆ ಪ್ರೋತ್ಸಾಹ ನೀಡುತ್ತಿದ್ದರೆ ದೇಶೀ ಕೃಷಿ ರಂಗ ಎತ್ತ ಸಾಗೀತು, ಬಿ.ಟಿ. ಗೆ ಇಷ್ಟೊಂದು ಉತ್ತೇಜನ ಸರಿಯೇ" ಎಂದು ಪ್ರಶ್ನಿಸಿದರು. ಉಳ್ಳವರಿಗಷ್ಟೆ ಸ್ವಾತಂತ್ರ್ಯ ಬಂದಿದೆ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಗಳು ರೈತರ ಮತ್ತು ಬಡವರ ವಿರೋಧಿ ನೀತಿ ಅನುಸರಿಸುತ್ತಿವೆ ಎಂದು ಟೀಕಿಸಿದರು. ವಿಪ್ರೊ, ಇನ್ಫೋಸಿಸ್ ಕಂಪನಿಗಳಿಗೆ ಕೆಲಸಕ್ಕೆ ಹೋಗುವ ಸಿಬ್ಬಂದಿ ರಸ್ತೆ ಸರಿಯಿಲ್ಲ ಎಂದರೆ ಮುಖ್ಯಮಂತ್ರಿ ಫ್ಲೈಓವರ್ ನಿರ್ಮಾಣ ಮಾಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಎತ್ತಿನ ಬಂಡಿ ಓಡಾಡುವ ರಸ್ತೆಗಳು ಹೇಗಿದೆ ಎಂದು ನೋಡಲಿ ಎಂದರು. ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸರ್ಕಾರ 18 ಸಾವಿರ ಹೆಕ್ಟೇರ್ ಪ್ರದೇಶವನ್ನು ಸ್ವಾಧೀನ ಮಾಡಿಕೊಳ್ಳಲು ಮುಂದಾಗಿದೆ. ಅಭಿವೃದ್ಧಿಗೆ ನಾವು ವಿರೋಧವಲ್ಲ. ಆದರೆ ಅಭಿವೃದ್ಧಿ ಹೆಸರಿನಲ್ಲಿ ರೈತರು ಕೃಷಿ ಭೂಮಿ ಕಳೆದುಕೊಳ್ಳುವುದು ಬೇಕಿಲ್ಲ ಎಂದರು.

ಎರಡನೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಿದ್ಧರಾಗಬೇಕು

- ಜಿ.ವಿ.ಶ್ರೀರಾಮರೆಡ್ಡಿ

ದೀರ್ಘಕಾಲ ಚಳವಳಿ ಹೋರಾಟದಲ್ಲಿ ದೇಶ ಮಾಡಿದ ಸಾಧನೆ, ತ್ಯಾಗ, ಬಲಿದಾನ ನಮ್ಮ ಕಣ್ಣ ಮುಂದೆ ನುಚ್ಚು ನೂರಾಗುತ್ತಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯ ಭಾವ ನೆಲೆಸಿತ್ತು. ಇಂದು ಆ ಸ್ಥಾನದಲ್ಲಿ ಧರ್ಮದ ವಿಷಬೀಜ ಏಕತೆ ಮತ್ತು ಸಮಗ್ರತೆ ಒಡೆಯುವ ಕೆಲಸ ಮಾಡುತ್ತಿದೆ ಎಂದು ವಿಷಾಧಿಸಿದರು. ಸಾಮ್ರಾಜ್ಯಶಾಹಿಗಳು ಬುಲೆಟ್ ಬಳಸದೆ ನಮ್ಮ ನರನಾಡಿಗಳನ್ನು ಛಿದ್ರಗೊಳಿಸುತ್ತಾರೆ. ಭಗತ್ ಸಿಂಗ್ ರಂತಹ ಹೋರಾಟಗಾರರು ಮತ್ತೊಮ್ಮೆ ಹುಟ್ಟಿಬರಬೇಕು. ಎರಡನೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಿದ್ಧತೆ ಮಾಡಬೇಕೆಂದರು.

ವರದಿ : **ಅಪ್ಪು**

ದಿನಚರಿಯಿಂದ



ಬಡಗಲ ಮೋಡದ ನೆನಪು...

ವಾದ ವಿವಾದ ಜೀವಂತ ಸಮಾಜದ ಲಕ್ಷಣ. ಲೇಖಕನ ಕಲಾವಿದನ ಸೃಷ್ಟಿ ಸ್ವಾತಂತ್ರ್ಯದ ಪ್ರಶ್ನೆ ನಾಗರಿಕತೆಯಷ್ಟೇ ಹಳೆಯದು. ಎಲ್ಲ ದೇಶಗಳಲ್ಲೂ ಎಲ್ಲ ಕಾಲಗಳಲ್ಲೂ ಆ ಬಗೆಗೆ ಮಂಡನೆ ಖಂಡನೆಗಳಾಗಿವೆ.

ಆದರೆ ಈ ಪ್ರಶ್ನೆಯ ಅಂತಿಮ ಇತ್ಯರ್ಥ ಯಾವ ದೇಶದಲ್ಲಿಯೂ ಆಗಿಲ್ಲ. ಎಲ್ಲವೂ ತಾತ್ಕಾಲಿಕ ಇತ್ಯರ್ಥಗಳು, ಪ್ರಸ್ತುತ ಪರಿಸ್ಥಿತಿಗೆ ಯೋಗ್ಯವಾದ ಇತ್ಯರ್ಥಗಳು.

ಸ್ಪಷ್ಟವಾಗುವ ಒಂದು ವಿಷಯವೆಂದರೆ -ಇಂಥ ತಾತ್ವಿಕ ಘರ್ಷಣೆ ಯಾವುದೇ ಒಂದು ಪೀಳಿಗೆಯ ಇಲ್ಲವೆ ತಲೆಮಾರಿನ ಗುತ್ತಿಗೆಯಲ್ಲ. ನಿನ್ನೆಯ ಲೋಕ ನಮಗಿದನ್ನು ನೀಡಿತು. ನಾಳೆಯ ಲೋಕಕ್ಕೆ ನಾವಿದನ್ನು ನೀಡುತ್ತೇವೆ.



'ಆವರಣ' ಚೀಪ್ ಯಾಕೆ? ಸಬ್ಸಿಡಿ ಸಿಕ್ಕಿದೆಯೇ?

'ಆವರಣ' ದಲ್ಲಿ ಭೈರಪ್ಪನವರು ಸಿಕ್ಕಾಪಟ್ಟೆ ಸತ್ಯಗಳನ್ನು (?) ಹೇಳಿದ್ದಾರೆ. ಜೊತೆಗೆ ಈ ಕೆಳಕಂಡ ಅನುಮಾನಗಳ ಬಗ್ಗೆ ಸಹ ಸತ್ಯಗಳನ್ನು ಹೇಳಬಹುದೇ?

1. 'ಆವರಣ' ವನ್ನು ತಮ್ಮ ಕರಪತ್ರ/ಪ್ರಚಾರ ಸಾಮಗ್ರಿಯೆಂಬಂತೆ ಸಂಘ ಪರಿವಾರದವರು ಹಂಚುತ್ತಿರುವುದರ ಹಂಚಿಕೆ ಏನು?
2. ಪುಸ್ತಕ ಬಿಡುಗಡೆಯಾದ ದಿನದಿಂದಲೇ ಈ 'ಪುಸ್ತಕ ಬ್ಯಾನ್ ಆಗ್ಬೋದು' ಭೈರಪ್ಪನವರ ಜೀವಕ್ಕೆ ಅಪಾಯವಿದೆ. ಅಂತ ಪಿಸುಗುಟ್ಟುತ್ತಾ ಸಂಘ ಪರಿವಾರದವರು ರಿಯಾಯಿತಿ ದರದಲ್ಲಿ ಮಾರುತ್ತಿರುವುದೇಕೆ?
3. ಭೈರಪ್ಪನವರ ಈ ಹಿಂದಿನ ಕಾದಂಬರಿಗಳು ಇಷ್ಟು ಚೀಪ್ ಆಗಿರ್ಲಿಲ್ಲ. ಇದಕ್ಕೆ ಇಷ್ಟು ಚೀಪ್ ಆದ ಬೆಲೆ ಯಾಕೆ? ಯಾರಿಂದಲಾದರೂ ಸಬ್ಸಿಡಿ ದೊರೆಕಿದೆಯೇ?

ವಿ. ಶ್ರೀನಿವಾಸ್, ಶಿವಮೊಗ್ಗ

ಸಂಪಾದಕೀಯ...

ಮೇಲೋಪಚಾರದ ಮಾತುಗಳು

ಗ್ರಾಮ ವಾಸ್ತವ್ಯ ಮತ್ತು ರಾಜಧಾನಿಯ ಸಂವಾದಗಳಿಂದ ಸಮಸ್ಯೆಗಳನ್ನು ಬಗೆಹರಿಸಿಬಿಡಬಹುದು ಎನ್ನುವ ಭ್ರಮೆಯನ್ನು ಸೃಷ್ಟಿಸುವ ಪ್ರಯತ್ನಗಳು ನಡೆದಿರುವುದು ಶೋಚನೀಯ. ಸ್ವತ: ರಾಜ್ಯದ ಮುಖ್ಯಮಂತ್ರಿಗಳೇ ಇಂತಹ ಭ್ರಮೆಯಲ್ಲಿ ತೇಲುತ್ತಿರುವಂತೆ ಇತರರನ್ನೂ ತೇಲಿಸುವಂತೆ ಇಂದಿನ ಘಟನಾವಳಿಗಳಿಂದ ಭಾಸವಾಗುತ್ತದೆ.

ಆತ್ಮಹತ್ಯೆಗೀಡಾಗುತ್ತಲೇ ಇರುವ ರೈತರ ಸಮಸ್ಯೆಗಳನ್ನು ಆಲಿಸಿ ಪರಿಹಾರ ರೂಪಿಸಲೆಂದು ಬೆಂಗಳೂರಿನಲ್ಲಿ ನಡೆದ ಸಂವಾದ ಕಾರ್ಯಕ್ರಮ ಸಮಸ್ಯೆಗಳ ಮೂಲಕ್ಕೆ ಇಳಿಯದೇ, ಮೂಲಭೂತ ಪರಿಹಾರದ ಕ್ರಮಗಳನ್ನೂ ಪ್ರಕಟಿಸದೇ ಮಾಧ್ಯಮಗಳ ಸುದ್ದಿ ಮಾತ್ರವಾಗಿ ಹೋದದ್ದು ಸರ್ಕಾರದ ಪ್ರಕಟಿತ ಉದ್ದೇಶಗಳನ್ನೇ ಪ್ರಶ್ನಿಸುವಂತಾಗಿದೆ. ಶೋಭಾಲಂಕೃತ ವೇದಿಕೆಯಲ್ಲಿನ ಈ ಭಾಷಣ ಪ್ರದರ್ಶನಗಳು ಗ್ರಾಮವಾಸ್ತವ್ಯದಂತಹ ಸ್ಟಂಟ್ ರಾಜಕೀಯಕ್ಕೆ ಸೇರಿಸಲಾಗುವ ಮತ್ತೊಂದು ಹರಕಲು ಹಾಳೆ ಅಷ್ಟೆ.

ಮುಖ್ಯಮಂತ್ರಿ ಕುಮಾರಸ್ವಾಮಿಗಳು 39 ಗ್ರಾಮ ವಾಸ್ತವ್ಯಗಳನ್ನು ಮುಗಿಸಿದ್ದಾರೆ. ಅವರೆಂದಾದರೂ ಅಲ್ಲಿನ ಸಮಸ್ಯೆಗಳ ಪರಿಹಾರವಾದ ಬಗ್ಗೆ ಮತ್ತೆ ವಿಮರ್ಶೆ ನಡೆದಿದೆಯೇ? ತಿರುಗಿ ನೋಡಿದ್ದಾರೆಂಬುದೇ, ಇವರ ಭೇಟಿಯಿಂದ ಅಧಿಕಾರಿಗಳು ಕ್ರಾಂತಿಯನ್ನೇ ಮಾಡಿ (39 ದಲಿತರು ವಾಸಿಸುವ ಗುಡಿಸಲು ತೆಗೆದು ಮನೆ ಕಟ್ಟುವುದು ಇತ್ಯಾದಿ....)ದ್ದಾರೆಂದು ಮುಖ್ಯ ಮಂತ್ರಿಗಳಿಂದ ಪ್ರಶಂಸಿಸಲ್ಪಟ್ಟ ಬಡಗಲ ಮೋಳದಲ್ಲಿ ಅರ್ಧಂಬರ್ಧ ಕಟ್ಟಿದ ಮನೆಗಳಿಂದಾಗಿ ಮಳೆಗೆ ರಕ್ಷಣೆಯಿಲ್ಲದೇ ಬೀದಿಪಾಲಾಗಿ ಪರದಾಡುವ ಚಿತ್ರ ವಾಸ್ತವ್ಯಕ್ಕೆ ಹಿಡಿದ ಕನ್ನಡಿ.

ತಮ್ಮ ಬೆಂಬಲಿಗರನ್ನೇ ಅತ್ಯಧಿಕವಾಗಿ ಅಣಿನೆರೆಸಿ ಹೆಸರಿಗೆ ಮಾತ್ರ ರೈತ ಸಂಘಟನೆಗಳನ್ನು ಆಹ್ವಾನಿಸಿ ಬೆಂಗಳೂರಿನಲ್ಲಿ ರೈತರೊಂದಿಗೆ ಸಂವಾದ ನಡೆಸಿದ್ದು ಕೇವಲ ಒಂದು ವ್ಯವಸ್ಥಿತ ನಾಟಕವಾಗಿದೆ.

ಒಂದೆಡೆ ಬಹುರಾಷ್ಟ್ರೀಯ ಕಂಪನಿಗಳ ಬಾಯಿಗೆ ಕೃಷಿಯನ್ನೊಪ್ಪಿಸುವ ಕೃಷಿ ನೀತಿ, ಕೊರಳು ಕೊಯ್ಯುವ ಎ.ಪಿ.ಎಂ.ಸಿ ಕಾಯ್ದೆ; ಫಸಲಿಗೆ ಬೆಲೆ ಇಲ್ಲದೆ, ಸಾಲದ ಭಾಧೆಯನ್ನು ತಾಳದೇ ಹೊಸ ಸಾಲವೂ ಸಿಗದೇ ತಲ್ಲಣಿಸುತ್ತಿರುವ ಘೋರ ಪರಿಸ್ಥಿತಿ ಇವರಿಗೆ ಕಾಣುವುದಿಲ್ಲವೇ?

ರಾಜಧಾನಿಯಲ್ಲಿ ರೈತರ ಸಮಸ್ಯೆಗಳ ಬಗ್ಗೆ ಸಂವಾದ ನಡೆಸಿ ಪರಿಹಾರ ಹುಡುಕುವ ಒಂದು ಕಸರತ್ತಿನ ಬೆನ್ನಲ್ಲೇ 5 ಜನ ರೈತರು ಆತ್ಮಹತ್ಯೆಗೀಡಾದದ್ದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ. ಎಲ್ಲವೂ ಸರಿಯಾಗಿದ್ದರೆ ದಿನವೊಂದಕ್ಕೆ 4ರಿಂದ 5 ಧರಣಿ ಉಪವಾಸ ಸತ್ಯಾಗ್ರಹಗಳು ರಾಜಧಾನಿಯಲ್ಲಿಯೇ ಯಾಕೆ ನಡೆಯುತ್ತವೆ? ಧರಣಿ ನಿರತರು ತಮ್ಮನ್ನು ಕೇಳುವವರೇ ಇಲ್ಲವೆಂದು ವಿಷ ಕುಡಿದು ಅಹವಾಲು ಸಲ್ಲಿಸಬೇಕಾಗಿ ಬಂದಿರುವ ಈ ಸರ್ಕಾರ ಸಂವೇದನೆಗಳನ್ನೇ ಕಳೆದುಕೊಂಡಿರುವುದರ ದ್ಯೋತಕವಾಗಿದೆ. ಹೀಗೆ ಬಂದವರು ಮನವಿ ಸಲ್ಲಿಸುವಾಗ ಗದರುವ, ದೂಷಿಸುವ ಮುಖ್ಯಮಂತ್ರಿಗಳು ರೈತರ ಸಂವಾದದಿಂದ ಕಲಿಯುತ್ತಾರೆ ಎಂಬುದು ಅಸಾಧ್ಯವೇ ಸರಿ.


ಈ ಸಂವಾದದ ಬಳಿಕ ಪ್ರಕಟಿಸಲಾದ ಕ್ರಮ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡಿಸುವ ಮಾತುಗಳು, ಸಾಲಮನ್ನಾ, ಬಡ್ಡಿ ಬಗ್ಗೆ ಅದೇ ಹಳೆಯ ಮಾತುಗಳು, ಇವಾವುವೂ ಕೃಷಿ ಬಿಕ್ಕಟ್ಟನ್ನು ಕಡಿಮೆ ಮಾಡುವುದಿಲ್ಲ. ಈ ಮೇಲೋಪಚಾರದ ಪರಿಹಾರಗಳೇ ಇದನ್ನೊಂದು ಪ್ರಚಾರದ ಕಸರತ್ತು ಎಂದು ತೋರಿಸುತ್ತವೆ. ಕಳೆದ ಬಜೆಟ್‌ನಲ್ಲಿನ ಸಾಲ ಮನ್ನಾದ ಪ್ರಕಟನೆಯನ್ನೇ ಹಿಡಿದು ಬಿಜೆಪಿಯ ಯಡಿಯೂರಪ್ಪರವರು ರಾಜ್ಯದಾದ್ಯಂತ ಜಾಥಾ ನಡೆಸಿ ಅದನ್ನು ರಾಜಕೀಯ ಬಂಡವಾಳಕ್ಕೆ ಬಳಸಿಕೊಳ್ಳಲು ಯತ್ನಿಸಿದಂತೆ, ಈ ರೈತರ ಸಂವಾದವನ್ನು ಜೆಡಿ(ಎಸ್)-ಕುಮಾರಸ್ವಾಮಿ ಬಳಸಲು ಸ್ಪರ್ಧೆಗಿಳಿದಿದ್ದಾರೆಯೇ ಎಂಬ ಪ್ರಶ್ನೆಯೂ ಇದೆ.

ಜಾಗತೀಕರಣ, ಉದಾರೀಕರಣಗಳ ಜಾರಿಯ ತೀವ್ರತೆಯಿಂದಾಗಿ ಇತರೆ ಕ್ಷೇತ್ರಗಳಂತೆ ಕೃಷಿರಂಗವೂ ತೀವ್ರ ಬಿಕ್ಕಟ್ಟಿಗೆ ಒಳಗಾಗಿದೆ. ಒಂದೆಡೆ ಕೇಂದ್ರದ ಸರ್ಕಾರದ ನೀತಿಗಳನ್ನು ಹಿಮ್ಮೆಟ್ಟಿಸಲು ಹೋರಾಡುವುದರ ಜೊತೆಗೆ ಇರುವ ಪರಿಮಿತಿಗಳಲ್ಲಿಯೇ ಜನತೆಗೆ ಪರಿಹಾರ, ಆತ್ಮವಿಶ್ವಾಸ ತುಂಬುವ ಕಾರ್ಯದಲ್ಲಿ ರಾಜ್ಯಸರ್ಕಾರ ತೊಡಗಬೇಕಿತ್ತು. ಆದರೆ ಕೇಂದ್ರದಂತೆಯೇ ಜನವಿರೋಧಿ ಆರ್ಥಿಕ ನೀತಿಗಳನ್ನು ಜಾರಿಗೊಳಿಸುತ್ತಾ, ರೈತರ ಕೊರಳಿಗೆ ಉರುಳು ಬಿಗಿಯುತ್ತಾ, ಆದರೆ ಸಂವಾದ ಯೋಜನೆಗಳಂತಹ ಮಾತುಗಳಿಂದ ಮರುಳುಗೊಳಿಸುತ್ತಾ ಈ ಸರ್ಕಾರ ಹೊರಟಿದೆ. ಇದರೊಟ್ಟಿಗೆ ಅತ್ಯಂತ ಬಲ ಪ್ರತಿಗಾಮಿ ಬಿಜೆಪಿಯ ಬೆಂಬಲ, ಭಾಗಿತ್ವವೂ ಇರುವಾಗ ಜನರ ಪ್ರಶ್ನೆಗಳಿಗೆ ಪರಿಹಾರ ಕಾಣಲಾದೀತೆ? ಈ ರಾಜಕೀಯ ಅಂಶಗಳತ್ತ ಜನತೆ ಚಿಂತಿಸಬೇಕು. ಕ್ರಿಯಾಶೀಲವಾಗಬೇಕು.

ಕೃಷಿಯೊಂದು ಕರುಳ ಬಳ್ಳಿಯ ನಂಟು,
ಕಸುಬಲ್ಲ, ವಿದ್ಯೆಯೂ ಅಲ್ಲ


- ಸು.ರಂ.ಎಕ್ಕುಂಡಿ

ಈಗ ಮಾತನಾಡಬೇಕಾದ್ದು ಆತ್ಮಹತ್ಯೆಯ ಭಾಷೆಯಲ್ಲಲ್ಲ



ಆತ್ಮಹತ್ಯೆಯೆಂಬುದು ಇತ್ತೀಚಿಗೆ ಅನ್ಯಾಯ ಅತೃಪ್ತಿಯನ್ನು ಅಭಿವ್ಯಕ್ತಿಸುವ ಒಂದು ವಿಧಾನವೆಂಬಂತಾಗುತ್ತಿರುವುದು ದುರಂತವೇ ಸರಿ. ಆತ್ಮವಿಶ್ವಾಸ ಕಳೆದುಕೊಂಡವರು, ಸೆಣಸಲಾಗದೇ ಸೋತವರು ಹೀಗೆ ಸ್ವ ಹತ್ಯೆಗೆ ಮೊರೆ ಹೋಗುವುದರಿಂದ ಏನೂ ಪ್ರಯೋಜನವಿಲ್ಲ ಎಂಬುದನ್ನು ಅಷ್ಟಾಗಿ ಯೋಚಿಸಲಾಗುತ್ತಿಲ್ಲ.

ಈ ವಾರವೊಂದರಲ್ಲೇ ಹೋರಾಟನಿರತ ಎರಡು ಜನವಿಭಾಗಗಳ ಕೆಲವು ಕಾರ್ಯಕರ್ತರು ವಿಷ ಕುಡಿದು ಪ್ರತಿಭಟಿಸಿದರು. ಜಕ್ಕರಾಯನಕೆರೆಯಲ್ಲಿ (ಅದೊಂದು ಸೆರೆಮನೆಯಂತಿರುವ) ಮೂರು ದಿನಗಳಿಂದಲೂ ಆಮರಣ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ದಿನಗೂಲಿ ನೌಕರರನ್ನು ಕ್ಯಾರೇ ಎನ್ನುವವರಿಲ್ಲದೇ, ಮಂತ್ರಿ ಮಹೋದಯರ ಭೇಟಿಗೂ ಅವಕಾಶ ನೀಡದಿರುವಾಗ ಜೆಡಿ(ಎಸ್) ಮುಖ್ಯ ಕಚೇರಿ ಎದುರು ಇಬ್ಬರು ವಿಷ ಕುಡಿದರು. ಅಂದರೆ ಅಲ್ಲಿ ಸಭೆಗೆ ಬಂದ ಮುಖ್ಯಮಂತ್ರಿ ಮನವಿ ಸ್ವೀಕರಿಸಿರಲಿಲ್ಲ. ಅಧಿಕಾರಿಗಳೂ ಬಿಡಲಲ್ಲ. ಸಚಿವ ರೇವಣ್ಣನವರೂ ತಿರುಗಿ ನೋಡಲಿಲ್ಲ. ಕೊನೆಗೆ ಈ ಯತ್ನ ಎಂದು ನೌಕರರು ಹೇಳಿದ್ದಾರೆ. ಹಾಗೆಯೇ ಅರೆಕಾಲಿಕ ಉಪನ್ಯಾಸಕರನ್ನು ಖಾಯಂ ಮಾಡಬೇಕೆಂದು ಧರಣಿ ನಡೆಸುತ್ತಿದ್ದವರಲ್ಲೊಬ್ಬ ಫಿನಾಯಿಲ್ ಕುಡಿದು ಒದ್ದಾಡಿದ.



ಇಂತಹ ಪ್ರವೃತ್ತಿ ರಾಜ್ಯದ ಹಲವೆಡೆಗಳಲ್ಲಿಯೂ ಕಂಡುಬರುತ್ತಿದೆ. ಹೈಕೋರ್ಟ್ ಪೀಠ ಆಗದ್ದಕ್ಕೆ, ತಮ್ಮ ಬಹುದಿನಗಳ ಬೇಡಿಕೆ ಈಡೇರದಿದ್ದಕ್ಕೆ, ಧಾರವಾಡ, ಹುಬ್ಬಳ್ಳಿ, ಗುಲಬರ್ಗಾ ಮುಂತಾದ ಕಡೆ ಕೆಲವು ಯುವಜನರು ವಿಷ ಸೇವಿಸಿದ್ದರು. ಇಂತಹ ದಾರುಣ ಘಟನೆಗಳಿಂದ ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಸಮಸ್ಯೆ, ಸನ್ನಿವೇಶದ ಸಂಕಟಗಳನ್ನು ಅರ್ಥ ಮಾಡಿಕೊಂಡಿಲ್ಲ, ಆಳುವವರಿಗೆ ಅರ್ಥವಾಗುವುದೂ ಇಲ್ಲ. ಇಂತಹ ಪ್ರಸಂಗಗಳನ್ನು ಆತ್ಮಹತ್ಯೆ ಯತ್ನದ ಕೇಸ್ ಹಾಕಿ ಮುಗಿಸಿಬಿಡಲಾಗುತ್ತಿದೆ. ಇಂದಿನ ಬಹುತೇಕ ಸಮಸ್ಯೆಗಳಿಗೆ ಆಳುವ ವರ್ಗಗಳ ವಿನಾಶಕಾರಿ ನೀತಿಗಳೇ ಮುಖ್ಯ ಕಾರಣ ಎಂಬುದನ್ನು ಅರಿಯಬೇಕು. ಇಂತಹ ವ್ಯವಸ್ಥೆಯೊಂದನ್ನು ಬದಲಾಯಿಸುವವರೆಗೆ ಸಮಸ್ಯೆಗೆ ಪರಿಹಾರ ಕಾಣಲಾರೆವು ಎಂಬುದನ್ನು ಬಾಧಿತ ಸಮುದಾಯ ಕ್ರಿಯಾಶೀಲವಾಗಬೇಕು. ಪರಿಹರಿಸಬಹುದಾದ ಪ್ರಶ್ನೆಗಳಿಗೂ ಸ್ಪಂದಿಸದ ರಾಜಕೀಯ ವ್ಯವಸ್ಥೆಯ ವಿರುದ್ಧವೂ ಪ್ರಜಾಸತ್ತಾತ್ಮಕ ಹೋರಾಟ ತೀವ್ರಗೊಳಿಸಬೇಕು. ಹೀಗಾಗಿ ಎಲ್ಲಾ ಜನಸಮುದಾಯಗಳ ಐಕ್ಯ ಹೋರಾಟವೊಂದೇ ಪರಿಹಾರ ಪಡೆಯಲು ಹಾದಿಯಾಗಿದೆ. ಆದ್ದರಿಂದ ಇಂದು ಬೇಕಿರುವುದು ಹತಾಶೆಯ ಆತ್ಮಹತ್ಯೆಯಲ್ಲ. ಆತ್ಮವಿಶ್ವಾಸದ ಹೋರಾಟ.

ಕನ್ನಡ 'ನಿಮಿತ್ತ' ಮಾಡಿಕೊಂಡವರ ಕಥೆ

ಮಾಗಡಿ ರಸ್ತೆಯ ಆಟೋ ಚಾಲಕರೊಬ್ಬರು ಫೋನ್ ಮಾಡಿದ್ದರು. ಅವರ ಹತ್ರ ಹತ್ತಾರು ವಿಷಯಗಳಿದ್ದವು. ಹೇಳಕ್ಕೆ ತೊಡಗಿದ್ದು ಒಂದೇ ವಿಷಯ. 'ಈ ಕರ್ನಾಟಕ ರಕ್ಷಣಾ ವೇದಿಕೆ' ಅಂತಾ ಇದೆಯಲ್ಲಾ ಸಾರ್ ಅವರದ್ದು ಇತ್ತೀಚಿಗೆ ತೀರಾ ವ್ಯತ್ಯಾಸ ಆಗಿ ಹೋಗಿಬಿಟ್ಟಿದೆ'.

ಏನು ಅಂದಾಗ, '........ಅವರಿಗೆ ಕನ್ನಡ ಬೇಡವಾಗಿದೆ ಸಾರ್' ಹಾಗಾದ್ರೆ ಏನು ಬೇಕಾಗಿದೆ ಎಂದೆ. ಅವರಿಗೀಗ ಕನ್ನಡವೇ ಸತ್ಯ ಅಲ್ಲ ಸಾರ್. ಅದು ಬರೀ ನಿಮಿತ್ತ. ಬೇಕಾಗಿರುವುದು ಕಾಸು. ಹೋರಾಟ ಎಂಬುದು ನೆಪ ಅಷ್ಟೆ. ಅದು ಬೆದರಿಕೆ ಮಟ್ಟಕ್ಕೆ ಇಳಿದಿದೆ' ಎಂದು ಒಂದೇ ಉಸಿರಿನಲ್ಲಿ ಹಲವಾರು ನಿದರ್ಶನಗಳನ್ನು ಕೊಡತೊಡಗಿದ.

ಆಗ ನನಗೆ ನೆನಪಾದದ್ದು 'ಕನ್ನಡ ರಕ್ಷಣೆಗೆ ಇವರ್‍ಯಾಕೆ ಬೇಕ್ರಿ, ಕನ್ನಡದ ತಿಳುವಳಿಕೆ ಗಂಧಗಾಳಿ ಇಲ್ಲದ ಇವರಿಂದ ಕನ್ನಡದ ರಕ್ಷಣೆ ಸಾಧ್ಯವಿಲ್ಲ. ಇದು ಸ್ವಾರ್ಥ ಸಾಧನೆಗಳ ರಾಜಕೀಯ ವೇದಿಕೆ' ಎಂದು ಅತ್ಯಂತ ಖಾರವಾಗಿ, ನಿಷ್ಟುರತನದಿಂದ ಮಾತನಾಡಿದ್ದ ಖ್ಯಾತ ನಿರ್ದೇಶಕ, ನಾಟಕಕಾರ ಎಂ.ಎಸ್.ಸತ್ಯ ಅವರು.



ಈ ವೇದಿಕೆಗಳು ಈಗೀಗ ಸುದ್ದಿ ಮಾಧ್ಯಮಗಳಿಗೆ ಹೇಳಿಕೆ ನೀಡದ ದಿನಗಳಿಲ್ಲವೇನೋ ಎಂತಂತಹ ಸ್ಥಿತಿ ರಾಜಧಾನಿಯಲ್ಲಿ ಏರ್ಪಟ್ಟಿದೆ. ಅದು ಪೊಗದಸ್ತಾಗಿರುವ ಐ.ಟಿ., ಬಿ.ಟಿ. ಕಂಪನಿಗಳಿಂದ ಹಿಡಿದು, ಸಿನಿಮಾ ಪ್ರದರ್ಶನಗಳು, ನಿರ್ದೇಶಕರು, ಕಾರ್ಖಾನೆ, ಹೊಟೇಲು ಉದ್ಯಮ, ನೌಕರರು, ಅಣ್ಣಮ್ಮದೇವಿ ಹಬ್ಬ ಆಚರಣೆವರೆಗೂ ಚಟುವಟಿಕೆಗಳು ವಿಸ್ತಾರಗೊಂಡಿವೆ. ಬೆಳಗಾವಿ ಮಹಾರಾಷ್ಟ್ರ ಗಡಿವಿವಾದ ವಿಷಯದಲ್ಲಿ ಮೇಯರ್‌ರವರಿಗೆ ಮಸಿ ಬಳಿದು 'ಹಟ್ಯಾಕ್' ಮಾಡಿ (ಕ.ರ.ವೇದಿಕೆ ಅಧ್ಯಕ್ಷ ನಾರಾಯಣಗೌಡರ ಕಂಠ ಸಿರಿಯಿಂದ ಡೆಲಿವರಿ ಆಗಿದ್ದು) ಕನ್ನಡ ರಕ್ಷಕರೆಂಬಂತೆ ಹೀರೋಗಳಾಗಿದ್ದರು. ನಂತರವೂ ಅದೇ ಧಾಟಿಯಲ್ಲಿ ಮುಂದುವರಿದಿದ್ದರು (ಇದಕ್ಕೆ ಆ ಸರ್ಕಾರದ ಬೆಂಬಲವಿತ್ತು ಎಂಬುದು ಬೇರೆ ಮಾತು). ಘಟಕ ಸಂಘದ ಶಾಖೆಗಳನ್ನು ವಿಸ್ತರಿಸುವ ಕೆಲಸವೂ ನಡೆಯಿತು (ಘಟಕ ಆರಂಭಿಸಿದರೆ ಕೇಂದ್ರಸಮಿತಿ ಹಣ ಮತ್ತು ಕಲರ್ ಪೋಸ್ಟರ್ ಕೊಡುವುದಂತೆ......... ಹೀಗೆ ಏನೇನೋ ಕಥೆಗಳು ಅದಕ್ಕೆ ಎಲ್ಲಿಂದ ಇಷ್ಟು ಹಣ ಬಂತು ಎನ್ನುತ್ತೀರಾ?) ಆದರೆ ಕಾಲಕ್ರಮೇಣ ಒಳಜಗಳ ತಲೆದೋರಿ ನಾರಾಯಣಗೌಡರ ಬಣ, ಪ್ರವೀಣ್ ಶೆಟ್ಟಿ ಬಣಗಳೆಂದು ವಿಭಜನೆಯಾಗಿ ತಾವೇ ಒರಿಜಿನಲ್ ವೇದಿಕೆ ಎಂದು ಹೇಳಿಕೊಳ್ಳತೊಡಗಿದರು. ಈ ಕಿತ್ತಾಟ ಇತ್ತೀಚಿಗೆ ಬೆಂಗಳೂರಿನ ಬೀದಿಯ ಕಾಳಗವಾಗಿ ಬಡಿದಾಡಿಕೊಂಡರು.

'ಕನ್ನಡದ ರಕ್ಷಣೆಗಾಗಿ ಎಲ್ಲರೂ ಒಂದಾಗಿ ಹೋರಾಟಕ್ಕೆ ಮುಂದಾಗಿ' ಎಂದು ಹೇಳುತ್ತಿದ್ದವರು ಹೀಗೇಕೆ ಎರಡಾಗಿ ಬಡಿದಾಡಿಕೊಂಡರು. ಇಲ್ಲಿ ಇರೋದು "ಯಾರು 'ಫೀಲ್ಡ್'ನಲ್ಲಿ ಮೇಲುಗೈ ಪಡೆದಿರಬೇಕು ಮತ್ತು ಒಂದು ಗುಂಪು ಇನ್ನೊಂದು ಗುಂಪಿನ ವಿರುದ್ಧ ಮೇಲುಗೈ ಸಾಧಿಸಬೇಕು. ತಮಗೆ ಅವರದೇ ಬ್ರಾಂಡಿನವರು ಅಡ್ಡಬರಬಾರದು" ಎಂಬುದೇ ಆಗಿದೆ. ಅಂದರೆ ಅಕ್ರಮವಾಗಿ ಮಾಡಿದ ಹಲವಾರು ಲಕ್ಷಗಳ (ಕೆಲವರು ಕೋಟಿಗಳು ಎನ್ನುತ್ತಾರೆ) ಹಣದ ವ್ಯವಹಾರಗಳಿಂದಾಗಿ ರಕ್ಷಕರ ನಡುವೆ ಘರ್ಷಣೆ ತಲೆದೋರುತ್ತಿವೆ.

ಇತ್ತೀಚಿಗೆ ಲೀ ಮೆರಿಡಿನ್ ಹೋಟೆಲ್‌ನ ಕನ್ನಡ ಕಾರ್ಮಿಕರ ಹಿತಗಳನ್ನು ಮ್ಯಾನೇಜ್‌ಮೆಂಟ್ ರಕ್ಷಿಸುತ್ತಿಲ್ಲ ಎಂದು ಪ್ರತಿಭಟಿಸಿದ್ದು ಇದೆ. ಮ್ಯಾನೇಜ್‌ಮೆಂಟ್ ಕಾರ್ಮಿಕರ ವಿರೋಧಿ ಇರಬಹುದು. ಆದರೆ ಇನ್ನೊಂದು ಮಗ್ಗುಲಲ್ಲಿ ಕಾರ್ಮಿಕರನ್ನು ಕನ್ನಡದವರು, ಅನ್ಯ ಭಾಷಿಕರು ಎಂದು ಇವರೇ ವಿಂಗಡಿಸಿ ಒಡೆಯುವುದೂ ಇದೆ. ಇಡೀ ಕಾರ್ಮಿಕರೇ ಒಂದಾಗಿ ಮಾಲೀಕರ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಡಬೇಕಾಗಿರುವಲ್ಲಿ ವಿಭಜನೆ ತರುವುದು ಯಾರ ಹಿತವನ್ನು ಕಾಯುತ್ತದೆ? ಅಂತಿಮವಾಗಿ ಮಾಲೀಕರ ಹಿತವನ್ನಲ್ಲವೇ?


ಇನ್ನೊಂದು ವಿಶೇಷವೆಂದರೆ ಒಂದೊಂದು ಗುಂಪನ್ನು ಒಂದೊಂದು ಪಕ್ಷದವರು ಆಳುವ ಪಕ್ಷ, ವಿರೋಧ ಪಕ್ಷದವರೂ ಮನಸಾರೆ ಬಳಸುತ್ತಾರೆ. ಇಂತಹ ರಾಜಕೀಯ ರಕ್ಷಣೆಯೂ ರಕ್ಷಕರಿಗಿರಬೇಕು. ಮಾಲೀಕರಿಗೂ ಬೇಕು.

'ಹೇಳಬೇಕು ಅಂದ್ರೆ ಇನ್ನೂ ತುಂಬಾ ಇದೆ ಸಾರ್' ಎಂದ ಚಾಲಕಣ್ಣ, ಹೌದು ತುಂಬಾ ಇದೆ, ನಿಮ್ಮಲ್ಲಿ ಇರಬಹುದು. ಮತ್ತೊಮ್ಮೆ ಮಾತು ಮುಂದುವರಿಸಬಹುದು ನೀವೂ ಸಹ.....

ಜನಶಕ್ತಿ ಕನ್ನಡ ವಾರಪತ್ರಿಕೆ
ಜೂನ್ 24, 2007

1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

ಬಿಹಾರದಾದ್ಯಂತ ಭುಗಿಲೆದ್ದ ಕುವ್ವರ್ ಸಿಂಗ್ ಬಂಡಾಯ



■ ಸಿ.ಯತಿರಾಜು

ಇದು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂಬ ಬೃಹತ್ ಹೊತ್ತಿಗೆಯ ಒಂದು ಉಜ್ವಲ ಪುಟ

1857ರ ಜುಲೈ 25ರ ವೇಳೆಗೆ ದಾನಾಪುರದ 3 ರೆಜಿಮೆಂಟುಗಳು ಬಂಡಾಯ ಹೂಡಿದವು. ಮಾರನೇ ದಿನ ಪಡೆಗಳು ಅತ್ಯಂತ ಹಿರಿಯ ಸ್ವಾತಂತ್ರ್ಯ ಹೋರಾಟಗಾರನಾಗಿದ್ದ ಜಗದೀಶ್‌ಪುರದ ರಾಜನಾದ ಕುವ್ವರ್‌ಸಿಂಗ್ ಆರಂಭಿಸಿದ್ದ ಬಂಡಾಯುದ ಭಾಗವಾಗಲು ಶಹಾಬಾದ್‌ನ್ನು ತಲುಪಿದವು. ಕುವ್ವರ್‌ಸಿಂಗ್ ಆ ವೇಳಗಾಗಲೇ ಅಪಾರ ಅನುಯಾಯಿಗಳನ್ನು ಸೇರಿಸಿಕೊಂಡು ಅತ್ಯಂತ ಬಲಿಷ್ಠವಾದ ಬಂಡಾಯವನ್ನು ಹುಟ್ಟು ಹಾಕಿದ್ದ. ಅಮರ್‌ಸಿಂಗ್, ರೀತ್ ನಾರಾಯಣ್‌ಸಿಂಗ್, ನಿಶಾನ್‌ಸಿಂಗ್, ಜೈ ಕೃಷ್ಣಸಿಂಗ್, ಥಾಕೂರ್ ದಯಾಳ್‌ಸಿಂಗ್, ಬಿಶ್ವೇಶ್ವರ್ ಸಿಂಗ್ ಮುಂತಾದ ಸಮರ್ಥ ಸೇನಾನಿಗಳ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ಅತ್ಯಂತ ವೀರಾವೇಶದಿಂದ ಯುದ್ಧ ಮಾಡಲಾರಂಭಿಸಿದ್ದ. ಅನೇಕ ಜಮೀನ್ದಾರರು ಕುವ್ವರ್‌ಸಿಂಗ್‌ನನ್ನು ಬೆಂಬಲಿಸಿದರು. ಬಲಿಷ್ಠ ಜನಪ್ರಿಯ ಬೆಂಬಲದಿಂದ ಈ ಯುದ್ಧ ಅತ್ಯಂತ ವ್ಯಾಪಕವಾಗಿ ಬಿಹಾರದ ಉದ್ದಗಲಕ್ಕೂ ಹರಡಿತು. ಆದರೂ ದೊಡ್ಡ ಜಮೀನ್ದಾರರು ವಸಾಹತುಶಾಹಿ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠೆಯಿಂದ ನಡೆದುಕೊಂಡು ಕುವ್ವರ್‌ಸಿಂಗ್ ಮತ್ತವನ ಬೆಂಬಲಿಗ ಹೋರಾಟಗಾರರನ್ನು ಸದೆ ಬಡಿಯಲು ಬ್ರಿಟಿಷರಿಗೆ ಸಹಾಯ ಮಾಡಿದರು.



ಆದರೂ ಕುವ್ವರ್‌ಸಿಂಗ್ ಎದೆಗುಂದದೇ ತನ್ನ ಧಿರೋದಾತ್ತ ಹೋರಾಟವನ್ನು ಅತ್ಯಂತ ಉತ್ಸಾಹದಿಂದ ಮುಂದುವರೆಸಿದನು. ಬ್ರಿಟಿಷ್ ಪಡೆಗಳಿಗೆ ಸಿಂಹಸ್ವಪ್ನವಾಗಿ ಪರಿಣಮಿಸಿದನು. ಬ್ರಿಟಿಷರ ಅನ್ಯಾಯ, ಅಕ್ರಮ ಹಾಗೂ ಕ್ರೌರ್ಯಗಳಿಗೆ ಸರಿಯಾದ ಪೆಟ್ಟುಗಳನ್ನು ತನ್ನ ಯುದ್ಧ ತಂತ್ರಗಳಿಂದ ನೀಡಲಾರಂಭಿಸಿದ.

ದಾನಾಪುರದ ಬಂಡೆದ್ದ ಪಡೆ ಕುವ್ವರ್‌ಸಿಂಗ್‌ನ ಪಡೆಗಳನ್ನು ಸೇರಿಕೊಂಡು ಅವನ ಬಂಡಾಯಕ್ಕೆ ಆನೆ ಬಲವನ್ನು ತಂದಿತ್ತವು. ಜಗದೀಶಪುರದಿಂದ ದಂಡಯಾತ್ರೆ ಯನ್ನಾರಂಭಿದ. ಬಂಡಾಯ ಗಾರರ ಪಡೆ ಶಹಬಾದ್ ಜಿಲ್ಲೆಯ 'ಆರಾ' ನಗರದ ಬ್ರಿಟಿಷರ ಬೊಕ್ಕಸವನ್ನು ಲೂಟಿ ಮಾಡಿ ಕಛೇರಿಗಳನ್ನು ಧೂಳಿಪಟ ಮಾಡಿದರು. ಮದ್ದುಗುಂಡು ಶಸ್ತ್ರಾಸ್ತ್ರ ಹಾಗೂ ಆಹಾರ ಧಾನ್ಯಗಳನ್ನು ಲೂಟಿ ಮಾಡಿದರು. 'ಆರಾ' ದ ಕೋಟೆಯ ರಕ್ಷಣೆಗೆ ಸಿಖ್ ಸಿಪಾಯಿಗಳು ಬ್ರಿಟಿಷರೊಂದಿಗೆ ಅತ್ಯಂತ ಕಲಿತನದಿಂದ ಕಾದಾಡಿದರು. ಕ್ಯಾ.ಡನ್‌ಬಾರ್‌ನ ನೇತೃತ್ವದಲ್ಲಿ ಶೋನ್ ನದಿಯ ದಂಡೆಯಲ್ಲಿ ಅತ್ಯಂತ ಭೀಕರವಾದ ಕದನ ನಡೆಯಿತು. ಕುವ್ವರ್‌ಸಿಂಗ್‌ನ ಪಡೆಗಳು ಅತ್ಯಂತ ಚಾಣಾಕ್ಷತನದಿಂದ 'ಆರಾ' ದ ದಟ್ಟ ಕಾಡುಗಳಲ್ಲಿ ಅಡಗಿ ಕುಳಿತು ಡನ್‌ಬಾರ್‌ನ ಸೈನಿಕರ ಮೇಲೆ ಮಿಂಚಿನ ದಾಳಿ ನಡೆಸಿ ಅವನನ್ನೇ ಕೊಂದು ಹಾಕಿದರು. ಕುವ್ವರ್‌ಸಿಂಗ್‌ನ ಪಡೆಗಳು ಬ್ರಿಟಿಷರ ಸೈನ್ಯವನ್ನು ಚೆಂಡಾಡಿ ಪಲಾಯನ ಮಾಡುವಂತೆ ಮಾಡಲು ಯಶಸ್ವಿಯಾದವು. ಕ್ರಾಂತಿಕಾರಿಗಳನ್ನು ಮುಗಿಸಿ ಹಾಕಲು ಹೊರಟ್ಟಿದ್ದ 450 ಮಂದಿಯಲ್ಲಿ ಕೇವಲ 50 ಮಂದಿಯಷ್ಟು ಜನ ಜೀವ ಉಳಿಸಿ ಕೊಳ್ಳುವಲ್ಲಿ ಯಶಸ್ವಿಯಾಗಿದ್ದರು.

ಬೋಜ್‌ಪುರಿ ಬಂಡಾಯಗಾರರು ಜಿಯೋಧರ್‌ಸಿಂಗ್ ಮತ್ತು ಹೈದರ್ ಆಲಿ ಖಾನ್ ನೇತೃತ್ವದಲ್ಲಿ ಗಯಾ ಪ್ರದೇಶದಲ್ಲಿ ಬಂಡಾಯ ಹೂಡಿದರು. ಹಜಾರಿಬಾಗ್‌ನಲ್ಲಿ ಸಂತಾಲರು ಮತ್ತು ಕೆಲವು ಸ್ಥಳೀಯ ನಾಯಕರು ಬ್ರಿಟಿಷರ ವಿರುದ್ಧ ಚಳುವಳಿಯನ್ನು ಹೂಡಿದರು.



ಕುಂವರ್ ಸಿಂಗ್

ಚಿರು ಜಮೀನ್ದಾರರ ನೆರವಿನೊಂದಿಗೆ ನಿಲಾಂಬರ್ ಮತ್ತು ಪಿತಾಂಬರ್ ಪಲಮೌವ್ ಅನ್ನು ತಮ್ಮ ಬಂಡಾಯದ ಕೇಂದ್ರವನ್ನಾಗಿಸಿ ಕೊಂಡಿದ್ದರು. ಅರ್ಜುನ್‌ಸಿಂಗ್ ನೇತೃತ್ವದಲ್ಲಿ ಬಂಡೆದ್ದ ಸಿಪಾಯಿಗಳು ಕೋಲರು ಮತ್ತಿತರ ಗಿರಿಜನರೊಡಗೂಡಿ ಸಿಂಗ್‌ಭೂಮ್ ಅನ್ನು ಹೋರಾಟದ ಕಣವನ್ನಾಗಿಸಿಕೊಂಡರು. ಪಾಟ್ನಾದ ಬಂಡಾಯದಲ್ಲಿ ವಹಾಬಿಗಳು ಪ್ರಮುಖ ಪಾತ್ರ ವಹಿಸಿದರು. ಕುವ್ವರ್‌ಸಿಂಗ್ ಸ್ಥಳೀಯ ಸಾಮಂತರು ಹಾಗೂ ಜನಸಾಮಾನ್ಯರ ಬೆಂಬಲದೊಂದಿಗೆ ತನ್ನ ಹೋರಾಟವನ್ನು ಸ್ಥಳದಿಂದ ಸ್ಥಳಕ್ಕೆ ಬದಲಿಸುತ್ತಾ ವಿನೂತನ ರಣರಂಗ ತಂತ್ರದಿಂದ ಬ್ರಿಟಿಷರನ್ನು ಅವ್ಯಾಹತವಾಗಿ ಕಾಡಿದನು. ಅತ್ಯಂತ ನಿರ್ಣಾಯಕ ಹಂತದಲ್ಲಿ ಮೇಜರ್ 'ಐರ್' ಕುವ್ವರ್‌ಸಿಂಗ್‌ನ ಬಲಗಳನ್ನು ಬೀಜಿಗಂಜ್ ಸಮೀಪ ಆಗಸ್ಟ್ ಮೂರರಂದು ಸೋಲಿಸಿದನು. ಈ ಜನದಿಂದ ಬ್ರಿಟಿಷರು ಸ್ವಲ್ಪ ಉಸಿರು ಬಿಡುವಂತಾದರೂ ಕುವ್ವರ್‌ಸಿಂಗ್‌ನ ಹೋರಾಟ ಕೊನೆಯಾಗಲಿಲ್ಲ. ○

ಆಲೂಗಡ್ಡೆ ಬಿತ್ತನೆ ಬೀಜ ಮಾರಾಟ : ರೈತರೇ ಬಲಿಪಶು

ರೈತರ ಶೋಷಣೆಯ ಮತ್ತೊಂದು ಪರ್ವ ಹಾಸನದ ಎಪಿಎಂಸಿ ಮಾರುಕಟ್ಟೆಯಲ್ಲಿ ಕಾಣಬಹುದಾಗಿದೆ. ಪ್ರಸಕ್ತ ಮುಂಗಾರು ಪ್ರಾರಂಭದಿಂದ ಆಲೂಗಡ್ಡೆಗೆ ಬಿತ್ತನೆ ಬೀಜ ಮಾರಾಟ ನಡೆಯುತ್ತಿದ್ದು, ರೈತರಿಂದ ಹಲವು ಪ್ರತಿರೋಧಗಳನ್ನೆದುರಿಸಿಯೂ, ದಳ್ಳಾಳಿಗಳು ರಾಜಕೀಯ ಮುಖಂಡರೊಡನೆ ಶಾಮೀಲಾಗಿ ರೈತರನ್ನು ವಂಚಿಸುವ ಮತ್ತಷ್ಟು ದೋಚುವ ತಂತ್ರಗಾರಿಕೆಯನ್ನು ಮುಂದುವರೆಸುತ್ತಿದ್ದಾರೆ.

1300 ರೂ.ಗೆ ಮಾರಾಟವಾಗಬೇಕಿದ್ದ ಸ್ಥಳೀಯ ಬಿತ್ತನೆ ಬೀಜವನ್ನು 1700 ರೂ.ಗೆ ಮಾರಾಟ ಮಾಡಿ 1650 ರೂ.ಗಳಿಗೆ ಬಿಲ್ ಕೊಟ್ಟಿದ್ದರಿಂದ ಜೂನ್ 9 ರಂದು ರೈತರು ಪ್ರತಿಭಟನೆ ನಡೆಸಿದರು. ಪ್ರತಿದಿನ ಒಂದಿಲ್ಲೊಂದು ರೀತಿಯ ಪ್ರತಿಭಟನೆ ನಡೆಯುತ್ತಿರುವುದರಿಂದ ಅಕ್ರಮ ಲಾಭ ಕಡಿಮೆಯಾದ ವರ್ತಕರು ವ್ಯಾಪಾರ ನಿಲ್ಲಿಸುವ ಧಮಕಿ ಹಾಕಿದ್ದು ಆಯಿತು. ಮತ್ತೆ 10 ನೇ ಜೂನ್ ಭಾನುವಾರ ದರ ಹೆಚ್ಚಿಸಿದ್ದರಿಂದ ರೈತರು ವರ್ತಕರನ್ನು ಪ್ರಶ್ನಿಸಿದ್ದರು. ಈ ಸಮಯದಲ್ಲಿ ಹಮಾಲಿ ಕಾರ್ಮಿಕನೊಬ್ಬ ವರ್ತಕರ ಪರವಹಿಸಿ ರೈತನೊಬ್ಬನ ಮೇಲೆ ಕುರ್ಚಿಯಿಂದ ಥಳಿಸಿದ್ದು, ರೈತರು, ವರ್ತಕರು, ಹಮಾಲಿಗಳ ನಡುವೆ ಮಾರಾಮಾರಿ ನಡೆಯಿತು. ಒಂದು ಕಡೆ ವರ್ತಕರು, ಇನ್ನೊಂದೆಡೆ ಹಮಾಲಿಗಳು ಮತ್ತೊಂದು ಕಡೆ ರೈತರು ಧರಣಿ ಕುಳಿತು, ಪರಸ್ಪರ ಘೋಷಣೆ ಕೂಗುತ್ತಾ ದೊಂಬಿಯೆಬ್ಬಿಸಿದರು. ಇಡೀ ಬೆಂಗಳೂರು-ಮಂಗಳೂರು ಹೆದ್ದಾರಿಯ ಸಂಚಾರ ಹದಗೆಟ್ಟಾಗ ಪೋಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

ಇಷ್ಟೆಲ್ಲಾ ನಡೆಯುತ್ತಿರುವುದು ಏಕೆ? ಯಾರು ತಪ್ಪಿತಸ್ತರು? ಇಲ್ಲಿ ಸರ್ಕಾರ, ಜಿಲ್ಲಾಡಳಿತ ಜೀವಂತವಾಗಿದೆಯೇ? ಉತ್ತರ ಹುಡುಕಿ ಹೊರಟರೆ ದೊರೆತ ಮಾಹಿತಿಯಿದು.



ಆಲೂಗಡ್ಡೆ ಬಿತ್ತನೆ ಬೀಜಕ್ಕಾಗಿ ಕಾದು ನಿಂತಿರುವ ರೈತ ಬಂಧುಗಳು

ಬಿತ್ತನೆ ಆಲೂ ಮಾರಾಟ ವಿಷಯದಲ್ಲಿ ರೈತರು ಮತ್ತು ವರ್ತಕರ ನಡುವೆ ಮೇ 31ರಂದು ಜಟಾಪಟಿ ನಡೆದು ಒಂದು ಒಪ್ಪಂದಕ್ಕೆ ಬರಲಾಗಿದ್ದು ಅದರ ಪ್ರಕಾರ ಶೀತಲೀಕರಣ ಘಟಕದಲ್ಲಿ ದಾಸ್ತಾನು ಮಾಡಿರುವ ಆಲೂಗಡ್ಡೆ ಬಿತ್ತನೆ ಬೀಜವನ್ನು 1325 ರೂ.ಗಳಿಗೂ ಪಂಜಾಬ್‌ದಿಂದ ನೇರ ತರಿಸುವ ಆಲೂಗಡ್ಡೆಯನ್ನು ಹೆಚ್ಚಿಗೆ 100 ರೂ. ಸೇರಿಸಿಯೂ ಮಾರಾಟ ಮಾಡಬಹುದೆಂದಾಗಿತ್ತು. ಆದರೆ ಆ ತೀರ್ಮಾನವನ್ನು ಗಾಳಿಗೆ ತೂರಿ, ಬೆಂಗಳೂರು ಕರನ್ ಫಾರ್ಮ್‌ದಿಂದ ತಂದ ಆಲೂಗಡ್ಡೆಯನ್ನು 1500 ರೂ.ಗಳಿಗೂ, ಪಂಜಾಬ್‌ನಿಂದ ತಂದ ಆಲೂಗಡ್ಡೆಯನ್ನು 1670 ರೂ.ಗಳಿಗೂ ಮಾರಾಟ ಮಾಡಿದ್ದರು. ರೈತರ ಎಲ್ಲಾ ಪ್ರತಿರೋಧಗಳ ನಡುವೆ ಎಪಿಎಂಸಿ 1500 ರೂ.ಗಳಿಗೆ ಕ್ವಿಂಟಾಲ್ ಬಿತ್ತನೆ ಬೀಜ ನೀಡಬೇಕೆಂದು ತಿಳಿಸಿದೆ. ಆದರೆ ಈ ಎಚ್ಚರಿಕೆಗೆ ಕವಡೆ ಕಿಮ್ಮತ್ತಿಲ್ಲ.

ಮಠ ಮಾನ್ಯಗಳಿಗೆ ನೂರಾರು ಕೋಟಿ ಕೊಡುವ ಸರ್ಕಾರ, ಕೊಬ್ಬರಿ, ತೊಗರಿ, ಸೇಂಗಾ, ಹತ್ತಿ ಬೀಜಗಳಿಗೆ ಕೊಟ್ಟಂತೆ ಸಬ್ಸಿಡಿಯನ್ನು ಆಲೂಗಡ್ಡೆಗೂ ನೀಡಬೇಕೆಂದು ಕನ್ನಡ ಸೇನೆ, ಕರ್ನಾಟಕ ಜಿಲ್ಲಾಧ್ಯಕ್ಷ ಧರ್ಮರಾಜ ಕಡಗ ಕೇಳುತ್ತಾರೆ.

ರೈತರು ಬೀದಿಗಿಳಿಯಬೇಕು, ನಿಗಮ ಮಂಡಳಿ, ನೇರ ಮಾರಾಟ ನಡೆಸಬೇಕು. ಮಧ್ಯವರ್ತಿಗಳ ಕಪಿಮುಷ್ಟಿಯಿಂದ ರೈತರನ್ನು ಮುಕ್ತಿಗೊಳಿಸಬೇಕೆಂಬುದು ಇವರ ವಾದ 'ರೈತ ನೀನು ಎಚ್ಚೆತ್ತುಕೋ' ಘೋಷಣೆ ಮಾಡಿ ಹೋರಾಡುತ್ತಿರುವ ನಮಗೆ ವ್ಯಾಪಾರ ನಡೆಸಲಿ ನಾವು ಯಾವುದೇ ಗಲಾಟೆಯಿಲ್ಲದೆ ಮಾಡಿ ತೋರಿಸುತ್ತೇವೆ ಎಂಬುದು ಅವರ ಒತ್ತಾಯ.

ಜಿಲ್ಲಾ ಉಸ್ತುವಾರಿ ಸಚಿವರಾಗಲಿ, ತೋಟಗಾರಿಕಾ ಸಚಿವರಾಗಲಿ ಇತ್ತ ಗಮನಹರಿಸದೆ ಕಣ್ಮುಚ್ಚಿ ಕುಳಿತಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಗಮನಕ್ಕೆ ತಂದರೆ ಸಿ.ಎಂ. ಗಮನಕ್ಕೆ ತರುವುದಾಗಿ ಹೇಳಿ ಹೋದವರು ರೈತರಿಂದ ದೂರವೇ ಇದ್ದಾರೆ. ಡಿ.ಸಿ. ಇದಕ್ಕೂ ನಮಗೂ ಸಂಬಂಧವೇ ಇಲ್ಲವೆಂದು ಕೈ ತೊಳೆದು ಕೊಂಡಿದ್ದಾರೆ.

ಬೈಕ್ ರ್‍ಯಾಲಿ, ಅರೆಬೆತ್ತಲೆ ಮೆರವಣಿಗೆ ನಡೆದರೂ ಸರ್ಕಾರ ಅವೆಲ್ಲ ಮನರಂಜನೆಗೆ ಎಂದು ಭಾವಿಸಿದಂತಿದೆ. ಸರ್ಕಾರಕ್ಕೆ ತೆರಿಗೆ ವಂಚನೆ ಮಾಡಿ ನೇರ ಹಳ್ಳಿಗಳಲ್ಲೇ 1500-1900 ರೂ.ಗಳಿಗೆ ಮಾರಾಟ ಮಾಡುತ್ತಿದ್ದ ವ್ಯಾಪಾರಿಗಳನ್ನು ಲಾರಿಗಳ ಸಮೇತ ಹಿಡಿದುಕೊಟ್ಟರೂ ಅವು ಪವಾಡಸದೃಶವಾಗಿ ಮತ್ತೆ ಮಾಲೀಕರ ಬಳಿಯೇ ಇರುತ್ತವೆ. ಇದರ ಹಿಂದೆ ಯಾರಿದ್ದಾರೆ? ಸರ್ಕಾರಕ್ಕೆ ಇವೆಲ್ಲ ಗೊತ್ತಿಲ್ಲವೇ?

ಒಟ್ಟಿನಲ್ಲಿ ರೈತರಿಗೆ ಸರಿಯಾದ ಮಾರ್ಗ ಇನ್ನಷ್ಟೇ ತಿಳಿಯಬೇಕಿದೆ, ಸಮರ್ಥ ನಾಯಕತ್ವ ಬೇಕಿದೆ.

■ ಬಿ.ಆರ್.ರಾಜಕುಮಾರ್, ಹಾಸನ

'ಸೊರಗಿದ ಬದುಕಿಗೆ ಸೂರೊಂದ ನೀಡಿ' ಬೃಹತ್ ಹೋರಾಟಕ್ಕೆ ಕ್ಷಣ ಗಣನೆ

'ಬಡವರಿಗೆ ನಿವೇಶನ ಭೂಮಿ ಕೊಡಿ, ಭೂಮಿ ಹರಾಜು ಕೈಬಿಡಿ' ಎಂಬ ಹೋರಾಟ ಬೆಂಗಳೂರಿನಲ್ಲಿ ಗರಿಗೆದರಿದೆ. ಒಂದು ಬೃಹತ್ ಹೋರಾಟಕ್ಕೆ ತೀವ್ರ ಸಿದ್ದತೆಗಳು ನಡೆದಿವೆ.

"ಬಾಡಿಗೆ ಭಾರದಲಿ
ಬಾಗಿದೆ ಬೆನ್ನು
ಸೊರಗಿ ಸುಣ್ಣವಾಗಿಹೆವು
ಸೂರೊಂದ ನೀಡಿ...."

"28 ವರ್ಷದಿಂದ ಬೆಂಗಳೂರಲ್ಲಿ ವಾಸ ಆಗಿದ್ದೀವಿ ಸಾರ್, ಸ್ವಂತ ಮನೆ ಮಾಡ್ಕೋಬೇಕು ಅಂತ ಎಷ್ಟೇ ಪ್ರಯತ್ನ ಪಟ್ರೂ ಆಗ್ಲಿಲ್ಲ ಸಾರ್. 15 ವರ್ಷದ ಹಿಂದೆ ತಿಂಗಳಿಗೆ 125 ರೂಪಾಯಿ ಬಾಡ್ಗೆ ಇತ್ತು. ಈಗದು 2500 ರೂಪಾಯಿ ಆಗಿದೆ. ಆದ್ರೆ ನಮ್ ಆದಾಯ ಮಾತ್ರ ಹೆಚ್ಚಾಗಿಲ್ಲ, ಈಗ ಬದುಕು ನಡೆಸೋದೇ ಕಷ್ಟವಾಗಿದೆ ಸಾರ್, ಸ್ವಂತ ಮನೆ ಅನ್ನೋ ಆಸೆನೇ ಬಿಟ್ಟಿದ್ದೀವಿ, ನಮ್ಮಂತಹವರು ಸ್ವಂತ ಮನೆ ಬಗ್ಗೆ ಯೋಚನೆ ಮಾಡೋದು ಕೂಡ ತಪ್ಪು ಸಾರ್" ಇದು ತುಂಬಾ ವರ್ಷಗಳಿಂದ ಬೆಂಗಳೂರಲ್ಲಿ ವಾಸ ಆಗಿದ್ದು ಕನಿಷ್ಠ ಒಂದು ನಿವೇಶನ ಕೂಡ ತೆಗೆದುಕೊಳ್ಳಲಾಗದ ಅಸಹಾಯಕ ಕಾರ್ಮಿಕನ ಒಡಲುರಿ.

ನಿಜ..... ಒಂದು ಕಡೆ ಎಷ್ಟೇ ದುಡಿದರೂ ಒಂದು ಸೈಟು ಮಾಡಿಕೊಳ್ಳಲಾಗದ ಬಹುಸಂಖ್ಯಾತ ವಿಭಾಗ. ಮತ್ತೊಂದೆಡೆ ಸಾವಿರಾರು ಎಕರೆ ಸರ್ಕಾರಿ ಭೂಮಿ ಕೊಳ್ಳೆ ಹೊಡೆದ ಹಿಡಿಯಷ್ಟು ಅಪಾರ್ಟ್‌ಮೆಂಟ್ ದೊರೆಗಳು ಇನ್ನೊಂದು ಕಡೆ. ಸ್ಮಶಾನ, ಗೋಮಾಳ, ರಾಜಕಾಲುವೆ ಹೀಗೆ ಯಾವುದನ್ನೂ ಬಿಡದೆ ಮಹಲುಗಳ ನಿರ್ಮಿಸಿದವರಿಗೆ ಬ್ಯೂರೋಕ್ರಸಿಯ ಅಭಯ ಹಸ್ತ.

ದಿಢೀರನೆ ಎಗ್ಗಿಲ್ಲದೆ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಭೂಮಿಗೀಗ ಎಲ್ಲಿಲ್ಲದ ಬೆಲೆ. ಎಕರೆಗೆ 5 ಕೋಟಿ ಮುಟ್ಟಿದೆ. 20X30 ಸೈಟ್ ಕೂಡ 20ರಿಂದ 25 ಲಕ್ಷ ರೂ ಕಂಡಿದೆ. ಕೃಷಿ ಭೂಮಿಯಲ್ಲೀಗ ಸಿಮೆಂಟ್ ಕಟ್ಟಡಗಳ ದರ್ಬಾರೇ ದರ್ಬಾರು. ಇದಕ್ಕೆ ಕಡಿವಾಣವೆಂದು?

ಸರ್ಕಾರವೇನೋ ಸರ್ಕಾರಿ ಭೂಮಿ ಲಪಟಾಯಿಸಿದವರಿಂದ ವಶಪಡಿಸಿಕೊಳ್ಳುತ್ತಿದೆ ನಿಜ. ಆದರೆ ಹರಾಜೆಂಬ ಅಖಾಡದಲ್ಲಿ ಮತ್ತದೇ ಕಳ್ಳರಿಗೆ ಸರ್ಕಾರಿ ಭೂಮಿಯನ್ನು ಹಸ್ತಾಂತರಿಸುತ್ತಿದೆ. ಸರ್ಕಾರಿ ಭೂಮಿ ಹರಾಜು ಪ್ರಕ್ರಿಯೆಯನ್ನು ತಡೆಹಿಡಿಯಲು ಈಗಾಗಲೇ ಸಿಪಿಐ(ಎಂ) ಹಾಗೂ ಹಲವು ದಲಿತ ಸಂಘರ್ಷ ಸಮಿತಿಗಳು ಪ್ರಬಲವಾಗಿ ಹೋರಾಟಗಳನ್ನು ನಡೆಸಿವೆ. 24 ಗಂಟೆಗಳ ಹಗಲು ರಾತ್ರಿ ಧರಣಿ ನಡೆಸಿವೆ. ಇದರ ಮುಂದುವರೆದ ಭಾಗವಾಗಿ ಪ್ರಬಲವಾದ ಬೃಹತ್ ಚಳುವಳಿ ಕಟ್ಟುವ ಹಿನ್ನೆಲೆಯಾಗಿ ಮತ್ತೊಂದು ಹೋರಾಟದ ಕಹಳೆ ಊದಲು ಸಿ.ಪಿ.ಐ(ಎ) ಬೆಂಗಳೂರು ಜಿಲ್ಲಾ ಸಮಿತಿ ಸಿದ್ಧತೆ ನಡೆಸಿದೆ.

ಜೂನ್ 18 -19 ರ ಈ ಹೋರಾಟದಲ್ಲಿ ಸರಿಸುಮಾರು 25 ಸಾವಿರ ಜನರು ಸರ್ಕಾರಕ್ಕೆ ನಿವೇಶನಕ್ಕಾಗಿ ಅರ್ಜಿಗಳನ್ನು ಸಲ್ಲಿಸಲಿದ್ದಾರೆ. ಇದು ಇನ್ನಷ್ಟು ಹೆಚ್ಚಾಗಬಹುದು. ಆಟೋ ಚಾಲಕರಿಗೆ ಪ್ರತ್ಯೇಕವಾಗಿ ಆಟೋ ಚಾಲಕರ ನಗರ ನಿರ್ಮಾಣ ಮಾಡಲು ಒತ್ತಾಯಿಸಿ ಸಾವಿರಾರು ಸಂಖ್ಯೆಯಲ್ಲಿ ಚಾಲಕರು ಅರ್ಜಿಗಳನ್ನು ತುಂಬಿದ್ದಾರೆ. ವಿಭಾಗವಾರು ಸಮೂಹ ವಸತಿ ಯೋಜನೆ ಜಾರಿಗೆ ತರಬೇಕೆಂಬುದೂ ಇದೆ.

ಈಗಾಗಲೇ ಸುಮಾರು 200 ಹೋರಾಟ ಸಮಿತಿಗಳು ರಚನೆಯಾಗಿ ವ್ಯಾಪಕ ತಯಾರಿ ನಡೆಯುತ್ತಿದೆ. ಈ ಹೋರಾಟ ಸಮಿತಿಗಳ ಮೂಲಕ ಅರ್ಜಿಗಳನ್ನು ತುಂಬಿ ಜನರು ಹೋರಾಟದಲ್ಲಿ ಪಾಲ್ಗೊಳ್ಳುತ್ತಿ ದ್ದಾರೆ. ಜನತೆ ಅತ್ಯುತ್ಸಾಹದಿಂದ ಭಾವಹಿಸುತ್ತಿದ್ದಾರೆ.

ಮಹಿಳಾ ಕಾರ್ಯಕರ್ತರ ಉತ್ಸಾಹದ ಈ ಕೆಲಸ ನೋಡಿ ಬಿಜೆಪಿ ಮುಖಂಡರೊಬ್ಬರು ಹೇಳಿದ್ದು ಹೀಗೆ "ಮಹಾನಗರ ಪಾಲಿಕೆ ಮಹಿಳಾ ರಿಸರ್ವ್ ಆದ್ರೆ ಜೆ.ಎಂ.ಎಸ್‌ನವರಿಗೆ ಬಿಜೆಪಿಯಿಂದ ಟಿಕೇಟ್ ಕೊಡಿಸ್ತೀವಿ"

18 -19ರಂದು ಎರಡು ದಿನಗಳ ಕಾಲ ಹಗಲುರಾತ್ರಿ ಧರಣಿ ಕಾರ್ಯಕ್ರಮದಲ್ಲಿ 25,000ಕ್ಕೂ ಅಧಿಕ ಸಂಖ್ಯೆಯಲ್ಲಿ ಜನತೆ ಭಾಗವಹಿಸಲಿದ್ದು, ಇದು ಜನತೆಯ ಮೂಲಭೂತ ಪ್ರಶ್ನೆ ಮೇಲೆ ನಡೆಯುತ್ತಿರುವ ಅತ್ಯಂತ ಮಹತ್ವದ ಹೋರಾಟವಾಗಿ ಹೊರಹೊಮ್ಮಲಿದೆ.

ಹೋರಾಟದ ಸಿದ್ಧತೆಯ ಲ್ಲೊಂದು ಸುತ್ತು:

ಜಯನಗರ ವಲಯ : ಈಗಾಗಲೇ ನಿವೇಶನಕ್ಕಾಗಿ 4000 ವಸತಿಗಾಗಿ 1,000 ಅರ್ಜಿಗಳನ್ನು ಭರ್ತಿ ಮಾಡಿದ್ದಾರೆ. ಯಾರಬ್‌ನಗರ, ಮಾರೇನಹಳ್ಳಿ, ಕುಮಾರಸ್ವಾಮಿ ಲೇಔಟ್, ರಾಗಿಗುಡ್ಡ ಸ್ಲಂ, ಅಜಾದ್‌ನಗರ, ದೋಭಿಘಾಟ್, ಶಾಕಾಂಬರಿ ನಗರ ಇನ್ನೂ ಹಲವೆಡೆ ಜನ ಮುಗಿಬಿದ್ದು ಅರ್ಜಿಗಳನ್ನು ತುಂಬಿದ್ದಾರೆ. ಪ್ರತೀ ದಿನ ಮನೆ ಮನೆ ಪ್ರಚಾರ ಬಹಿರಂಗ ಸಭೆಯ ಮೂಲಕ ಈ ಹೋರಾಟ ಮಹತ್ವ ತಿಳಿಸಲು ಸಂಗಾತಿಗಳು ದುಡಿಯುತ್ತಿದ್ದಾರೆ. ಮುಖ್ಯವಾಗಿ ಜೆ.ಎಂ.ಎಸ್ ಹಾಗೂ ಎಆರ್‌ಡಿಯು ಸಂಗಾತಿಗಳು ಹಗಲು ರಾತ್ರಿ ಎನ್ನದೇ ಹೋರಾಟದ ಸಿದ್ಧತೆ ನಡೆಸಿದ್ದಾರೆ. ಕುಮಾರಸ್ವಾಮಿ ಲೇಔಟ್‌ನಲ್ಲಿ ಪಕ್ಷಾತೀತವಾಗಿ ಜೆ.ಎಂ.ಎಸ್ ನೇತೃತ್ವದಲ್ಲಿ ಕೆಲಸ ನಡೆಸಿದೆ.

ಕನಿಷ್ಟ 200 ಜನ ಈ ಪ್ರದೇಶದಿಂದ ಹೋರಾಟದಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಕಾರ್ಮಿಕ ಮುಖಂಡ ಕೆ.ಎನ್.ಉಮೇಶ್ ಹೇಳುತ್ತಾರೆ.

ಮಡಿವಾಳ ವಲಯ : ಶಾಂತಿನಗರ, ಆಡುಗೋಡಿ, ವಿಲ್ಸನ್‌ಗಾರ್ಡನ್, ಸುತ್ತಮುತ್ತಲ ಪ್ರದೇಶ, ಬೊಮ್ಮನಹಳ್ಳಿ, ಗಾರ್ವೆಪಾಳ್ಯ, ಕೂಡ್ಲುಗೇಟ್, ಲಕ್ಕಿ ಲೇಔಟ್, ಹೊಸೂರು ರಸ್ತೆ, ಎಲೆಕ್ಟ್ರಾನಿಕ್ ಸಿಟಿ, ಬನ್ನೇರುಘಟ್ಟ ರಸ್ತೆ, ಬಿಳೇಕಳ್ಳಿ ಸುತ್ತಮುತ್ತಲ ಪ್ರದೇಶ, ಕೋರಮಂಗಲ ಹೀಗೆ ಹಲವಾರು ಪ್ರದೇಶಗಳಲ್ಲಿ ವ್ಯಾಪಕ ತಯಾರಿ ನಡೆದಿದೆ. ಜನ ಸಾಲುಗಟ್ಟಿ ನಿಂತು ಅರ್ಜಿಗಳನ್ನು ತುಂಬುತ್ತಿದ್ದಾರೆ. ಈಗಾಗಲೇ 8,000 ಅರ್ಜಿಗಳನ್ನು ತುಂಬಲಾಗಿದೆ. ಎಲ್ಲೆಡೆ ಹೋರಾಟ ಸಮಿತಿಗಳನ್ನು ರಚಿಸಲಾಗಿದ್ದು, ಮನೆ ಮನೆ ಪ್ರಚಾರ ಭರದಿಂದ ಸಾಗಿದೆ, ಹಲವಾರು ಕಡೆ ಬಹಿರಂಗ ಸಭೆಗಳನ್ನು ಏರ್ಪಾಡು ಮಾಡಲಾಗಿದೆ. ಆಟೋ ಪ್ರಚಾರ ನಡೆಸಲಾಗಿದೆ. ಇದಲ್ಲದೆ ಸಿಐಟಿಯು ಕಾರ್ಮಿಕ ಸಂಘ ಇರುವ ಫ್ಯಾಕ್ಟರಿಗಳಲ್ಲಿ ಕಾರ್ಮಿಕರು ಅರ್ಜಿಗಳನ್ನು ತುಂಬಿದ್ದಾರೆ. ಸನ್‌ಸೆರಾ,

ಪುಟ 15 ಕ್ಕೆ



ಈ ಹೋರಾಟದ ಕುರಿತು ಬೆಂಗಳೂರು ಜಿಲ್ಲಾ ಸಿ.ಪಿ.ಐ(ಎಂ) ಕಾರ್ಯದರ್ಶಿ ಕೆ.ಪ್ರಕಾಶ್ ಹೀಗೆ ಹೇಳುತ್ತಾರೆ -

"ಸರ್ಕಾರಿ ಭೂಮಿ ಹರಾಜು ಮಾಡುವುದರ ಮೂಲಕ ಶ್ರೀಮಂತರು ಬಂಡವಾಳದಾರರಿಗೆ ಭೂಮಿಯನ್ನು ಹಸ್ತಾಂತರ ಮಾಡಲು ಸರ್ಕಾರ ಹೊರಟಿದೆ. ಈ ರೀತಿ ಸರ್ಕಾರಿ ಭೂಮಿ ವರ್ಗಾವಣೆ ಆದದ್ದೇ ಆದರೆ ಭವಿಷ್ಯದಲ್ಲಿ ಯಾವ ಸಾರ್ವಜನಿಕ ಉದ್ದೇಶಗಳಿಗಾಗಿಯೂ ಒಂದಿಷ್ಟೂ ಭೂಮಿ ಕೂಡ ಇರುವುದಿಲ್ಲ. ಹೀಗಾಗಿ ಮುಂದಿನ ಜನಾಂಗದ ಸಾಮುದಾಯಿಕ ಉದ್ದೇಶಗಳಿಗೆ ಭೂಮಿ ಇಲ್ಲದಂತೆ ಮಾಡುವ ಸರ್ಕಾರದ ಈ ಅಕ್ರಮ ನೀತಿಯ ವಿರುದ್ಧದ ಹೋರಾಟವಿದು".


"ಬೆಂಗಳೂರು ಸುತ್ತಮುತ್ತ ದುಡಿಯುವ ಜನ, ಕಾರ್ಮಿಕರು ಸ್ವಂತ ಮನೆ ಕಟ್ಟುವದನ್ನು ಯೋಚಿಸಲು ಸಾಧ್ಯವಿಲ್ಲ ಎಂಬಂತಾಗಿದೆ. ಭೂಮಿ ಬೆಲೆ ಗಗನ ಮುಟ್ಟಿದೆ. ಈ ಬಹುಸಂಖ್ಯಾತ ಬಡವರಿಗೆ ನಿವೇಶನ ಮತ್ತು ವಸತಿ ವ್ಯವಸ್ಥೆ ಮಾಡುವುದು ಸರ್ಕಾರದ ಜವಾಬ್ದಾರಿ ಆಗಬೇಕಿತ್ತು. ಆದರೆ ಸರ್ಕಾರ ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದೆ. ಹೀಗಾಗಿ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯು ಹರಾಜು ನಿಲ್ಲಿಸಬೇಕು ಮತ್ತು ಬಡವರಿಗೆ ನಿವೇಶನ ಕೊಡಬೇಕೆಂದು ಒತ್ತಾಯಿಸಿ ಈ ಹೋರಾಟ ನಡೆಸುತ್ತಿದೆ".

'ಭೂಮಿ ಪ್ರಶ್ನೆ: ಸದನದಲ್ಲಿನ್ನು ಚರ್ಚಿಸಿಲ್ಲ, ಹರಾಜು ಹಾಕುವುದು ತಪ್ಪು'

- ಜಿ.ವಿ.ಶ್ರೀರಾಮರೆಡ್ಡಿ

ಜನಶಕ್ತಿ : ಬೆಂಗಳೂರಿನ ಯಾವ ವಲಯದಲ್ಲಿ ಮುಖ್ಯವಾಗಿ ಭೂಮಿ ಕಬಳಿಕೆಯಾಗಿದೆ?

ಜಿವಿಎಸ್: ಭೂಮಿ ಕಬಳಿಕೆಯಾಗಿರುವುದು ರೆವಿನ್ಯೂ, ಅರಣ್ಯ, ಕೆರೆ ಅಂಗಳಗಳು ಮತ್ತು ಸರ್ಕಾರಿ ಭೂಮಿ, ವಿಶ್ವವಿದ್ಯಾಲಯ, ಆಸ್ಪತ್ರೆ, ಬಿ.ಡಿ.ಎ, ಕಾರ್ಪೋರೇಷನ್, ಶಿಕ್ಷಣ ಇಲಾಖೆ ಭೂ,ಇ.ಕೆಐಎಡಿಬಿ, ಇತ್ಯಾದಿ. ಕಬ್ಜಾ ಆಗಲು ಸಮಿತಿಯ ಮಧ್ಯಂತರ ವರದಿಯಂತೆ 13,686 ಎಕರೆ ಅಕ್ರಮವಾಗಿರುವುದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ.



ಇನ್ನೂ ತನಿಖೆ ನಡೆದಿದೆ. ಒಟ್ಟು ಅಂದಾಜಿನಂತೆ 30ರಿಂದ 35 ಸಾವಿರ ಎಕರೆ ಭೂಮಿ ಕಬಳಿಕೆ ಆಗಿದೆ ಎಂಬ ಅಂದಾಜಿದೆ.

ಇದು ಕೇವಲ ಬೆಂಗಳೂರು ನಗರ ಜಿಲ್ಲೆಯದ್ದು ಮಾತ್ರ. ಗ್ರಾಮಾಂತರ ಇನ್ನೂ ಸೇರಿಸಿಲ್ಲ ಈ ವ್ಯಾಪ್ತಿಯ ಭೂಮಿಯಲ್ಲಿ ಮುಖ್ಯವಾಗಿ ಕಂದಾಯ, ಅರಣ್ಯ ಭೂಮಿಯೇ ಅಧಿಕ

ಜನಶಕ್ತಿ : ಬೃಹತ್ ಭೂ ಕಬಳಿಕೆಯಲ್ಲಿ ಯಾರ್‍ಯಾರು ಮಾಡಿದ್ದಾರೆ ?

ಇಷ್ಟು ದೊಡ್ಡ ಪ್ರಮಾಣದ ಭೂ ಕಬಳಿಕೆಯಲ್ಲಿ ಅಧಿಕಾರಿಗಳು, ರಾಜಕೀಯ ನಾಯಕರು , ಭೂ ವ್ಯಾಪರಿಗಳು ಇಡೀ ಸರ್ಕಾರದ ಎಲ್ಲಾ ವಿಭಾಗಗಳಲ್ಲಿ ಶಾಮೀಲು ಆಗಿರುವುದು ಕಾಣುತ್ತದೆ. ಗ್ರಾಮ ಪಂಚಾಯತ್ ಕಾರ್ಯದರ್ಶಿಯಿಂದ ಹಿಡಿದು ಮೇಲ್ ಮಟ್ಟದ ವರೆಗೂ ಇದೆ.

ಈ ಭೂಮಿಯಲ್ಲಿ ರೆಸಾರ್ಟ್, ಅಪಾರ್ಟ್‌ಮೆಂಟ್, ಕಾರ್ಖಾನೆ, ಶಿಕ್ಷಣ ಸಂಸ್ಥೆ ಇತ್ಯಾದಿ ಮಾಡಿಕೊಂಡಿದ್ದು, ಮನೆ ಪ್ಲಾಟ್-ಅಪಾರ್ಟ್‌ಮೆಂಟ್‌ಗಳು ನೂರಾರು, ಅಂದಾಜು 600 ರಷ್ಟು ಕಬ್ಜಾ ಆದ ಜಾಗದಲ್ಲಿ ಕಟ್ಟಿದ್ದಾರೆ ಇದಕ್ಕೆ ಯಾರಿಂದಲೂ, ಯಾವುದರಿಂದಲು ಪರವಾನಗಿ ಅಥವಾ ಲೈಸೆನ್ಸ್ ತಗೊಂಡಿಲ್ಲ. ಆದರೆ ಇದಕ್ಕೆ ಸರ್ಕಾರ ಕೊಡುವ ರಸ್ತೆ ನೀರು, ವಿದ್ಯುತ್ ನಂತಹ ಮೂಲಭೂತ ಸೌಕರ್ಯಗಳನ್ನು ನೀಡಿದ್ದಾರೆ. ಇದು ಶಾಮಿಲಿಲ್ಲದೇ ಹೇಗೆಸಾಧ್ಯ ?

ದೊಡ್ಡ ಅಧಿಕಾರಗಳು, ಭೂದಂಧೆಗಾರರು ಅತ್ಯಧಿಕ ಬಡವರ-ಸಾಮಾನ್ಯರ ಸಂಖ್ಯೆ ತೀರಾ ಕಡಿಮೆ.

ಜನಶಕ್ತಿ: ತನಿಖೆ ನಡೆದಿರುವಾಗಲೇ ಗುರುತಿಸಲಾದ ಭೂಮಿಯನ್ನು ಹರಾಜು ಹಾಕುವುದು ಸರಿಯೇ ?

ಇಲ್ಲ. ಇದು ತಪ್ಪು, ಈ ಬಗ್ಗೆ ಹರಾಜು ಹಾಕುವುದು ಸಲ್ಲದು ಎಂದು ಆಕ್ಷೇಪ ವ್ಯಕ್ತಪಡಿಸಿ ಮಾನ್ಯ ವಿಧಾನ ಸಭಾಧ್ಯಕ್ಷರಿಗೆ ಮನವಿ ಕೊಟ್ಟಿದ್ದೇವೆ.

ಈ ಭೂಮಿಯನ್ನು ಮತ್ತೇ ಅಂತಹ ಭೂದಂಧೆಗಾರರಿಗ ಕೊಡುವು ದನ್ನು ವಿರೋಧಿಸಿದ್ದೇವೆ. ಹರಾಜು ತಡೆಯಲೇ ಬೇಕೆಂದು ಒತ್ತಾಯಿಸಿದ್ದೇವೆ. 19ರಂದು ಬೆಳಿಗ್ಗೆ 11 ಗಂಟೆಗೆ 'ಸ್ಪೀಕರ್‌ರವರ ಚಹಾ ಕೊಠಡಿ ಯಲ್ಲಿ ಮುಖ್ಯಮಂತ್ರಿಗಳು ಜೊತೆಗೆ ಸಮಿತಿಯ ಸದಸ್ಯರನ್ನು ಮುಖಾಮುಖಿ ಚರ್ಚೆಗೆ ಆಹ್ವಾನಿಸಿದ್ದಾರೆ.

ಜನಶಕ್ತಿ : ವಶಪಡಿಸಿಕೊಂಡ ಭೂಮಿಯನ್ನು ಏನು ಮಾಡಬೇಕು ?

ಇದನ್ನು ಸಾರ್ವಜನಿಕ ಉಪಯೋಗಕ್ಕೆ ಆಸ್ಪತ್ರೆ, ಶಾಲೆ, ಆಟದ ಮೈದಾನ, ಇತ್ಯಾದಿಗಳಿಗೆ ಮಾತ್ರ ಮೀಸಲಿರಬೇಕು ಬಡವರು ಕಟ್ಟಿಕೊಂಡ ಮನೆಗಳನ್ನು ಕೃಷಿ ಸಾಗುವಳಿ ಮಾಡುವ ರೈತರಿಗೆ ಕೊಡಬೇಕು. ಬಡಜನರಿಗೆ ಮನೆ ಕಲ್ಪಿಸಿಕೊಡಲು ನಿವೇಶನವಾಗಿಯೂ ನೀಡಬೇಕು ಇದನ್ನು ಶಾಸನ ಸಭೆಯಲ್ಲಿಯೂ ಹೊರಗೂ ಬೇಕು, ಇದನ್ನು ಶಾಸನ ಸಭೆಯಲ್ಲಿಯೂ ಹೊರಗೂ ಪ್ರತಿಪಾದಿಸುತ್ತಿದ್ದೇವೆ. ○



ಸದನ ಸಮಿತಿಯ ಪರಿಶೀಲನೆ

ನಮ್ಮ ಗಣಿ ಕುಳ ಶ್ರೀರಾಮುಲು ಅವರು ಗದಗ ಜಿಲ್ಲೆಗೆ ಉಸ್ತುವಾರಿ ಸಚಿವರಾದಾಗ ಜನತೆಗೆ ನೀಡಿದ ಭರವಸೆಗಳೆಲ್ಲಾ ಏನಾಗಿವೆ?



ಹೀರೋ ಸಚಿವನ ಉಸ್ತುವಾರಿಯಲ್ಲಿ ಜೀರೋ ಆಗುತ್ತಿರುವ ಗದಗ

ಆಗಸ್ಟ್ 14, 2006 ರಂದು ಗದಗ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಗಣಿ ಕುಳ, ರಾಜ್ಯ ಪ್ರವಾಸೋದ್ಯಮ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಮಂತ್ರಿ ಬಳ್ಳಾರಿಯ ಬಿ.ಶ್ರೀರಾಮುಲು ಅಧಿಕಾರ ಸ್ವೀಕರಿಸಿದ ಮರುದಿನ ಸ್ವಾತಂತ್ರ್ಯ ದಿನ ಧ್ವಜಾರೋಹಣ ಮಾಡಿ ಮಾತನಾಡಿದ್ದನ್ನು ಕೇಳಿ ಜಿಲ್ಲೆಯ ಜನ ಭಾರಿ ಭರವಸೆಯ ಭ್ರಮೆಗೆ ಒಳಗಾದರು.

'ನಾನು ಜಿಲ್ಲೆಯಲ್ಲೇ ಮನೆ ಮಾಡುತ್ತೇನೆ, ಜನತೆಯ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ನೀಡುವೆ, ಎಲ್ಲಾ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಕ್ಕೆ ಭೇಟಿ ಕೊಟ್ಟು ಗ್ರಾಮ ಸಭೆಗಳನ್ನು ನಡೆಸುತ್ತೇವೆ. ಹಿಂದುಳಿದ ಜಿಲ್ಲೆಯಾಗಿರುವ ಗದಗನ್ನು ವರ್ಷ ಒಪ್ಪತ್ತಿನಲ್ಲಿ ಅಭಿವೃದ್ಧಿ ಜಿಲ್ಲೆಯನ್ನಾಗಿ ಮಾಡುತ್ತೇನೆಂಬು ಘೋಷಣೆಗಳ ಮಹಾಪೂರವನ್ನೇ ಹರಿಸಿದರು, ಭಾರಿ ಪ್ರಚಾರ ಗಿಟ್ಟಿಸಿಕೊಂಡರು.

ನಿರಂತರ ಜಮೀನ್ದಾರಿ ಪಾಳೇಗಾರರ, ರಾಜಕೀಯ ಪಟ್ಟಭದ್ರರ ಕಪಿಮುಷ್ಟಿಯೊಳಗೆ ಸಿಲುಕಿ ನಲುಗುತ್ತಿರುವ, ಬದುಕಲು ಸಾಹಸಪಡುತ್ತಿರುವ ಜಿಲ್ಲೆಯ ಮುಗ್ಧ ಜನಕ್ಕೆ ಶ್ರೀರಾಮುಲು ಅವರ ಮಾತುಗಳು ಹೊಸ ಭರವಸೆಯನ್ನು ತಂದು ಕೊಟ್ಟವು.

ಆಗಿದ್ದೇನು?

ಆದರೆ, ಆಗಿದ್ದೇನು? ಅವರು ಮಾಡಿದ್ದೇನು? ಎಂಬಂಥ ಪ್ರಶ್ನೆಗಳು ಇದೀಗ ತೀವ್ರವಾಗಿ ಹುಟ್ಟಿಕೊಳ್ಳುತ್ತಿವೆ. ಉಸ್ತುವಾರಿ ಮಂತ್ರಿಗಳಿಗೆ ಜಿಲ್ಲೆಯಲ್ಲಿ ಮನೆಯೊಂದನ್ನು ಮಾಡಲು ಸುಮಾರು ಒಂದು ವರ್ಷ ಬೇಕಾಯಿತು. ಜನರ ಅಹವಾಲು ಕೇಳುವವರಿಲ್ಲ. ಜಿಲ್ಲೆಯ ಹಾಗೂ ಗ್ರಾಮೀಣ ಪ್ರದೇಶಗಳ ಜನ ಹಾಗೂ ಜಾನುವಾರುಗಳು ತೀವ್ರವಾದ ಕುಡಿಯುವ ನೀರಿನ ಅಭಾವ ಎದುರಿಸುತ್ತಿದ್ದಾರೆ. ಸತತ ಬಲಗಾಲ ಕ್ಕೀಡಾಗುತ್ತಿರುವ ಜಿಲ್ಲೆಯು ಈ ವರ್ಷವೂ ಬರಗಾಲ ಎದುರಿಸುವಂತಾಯಿತು. ಕೆಲಸವಿಲ್ಲದೇ ಜನ ದೂರದ ಮಂಗಳೂರು, ಬೆಂಗಳೂರು, ಗೋವಾ, ಕೇರಳ ಕಡೆ ಸಹಸ್ರಾರುಗಟ್ಟಲೇ ಗುಳೇ ಹೋದರು. ಗುಳೇ ಹೋದ ನಂತರದಲ್ಲಿ ಜಿಲ್ಲೆಯಲ್ಲಿ ಅಲ್ಪ ಸ್ವಲ್ಪ ಬರಪರಿಹಾರ ಕಾಮಗಾರಿ ನಡೆಸಲಾಯಿತಾದರೂ ಗುಳೇ ಹೋಗದ ಜನರಿಗಾದರೂ ಪೂರ್ಣ ಪ್ರಮಾಣದ ಕೆಲಸ ದೊರೆಯಲಿಲ್ಲ. ಅತ್ಯಾಧುನಿಕ ಯಂತ್ರಗಳನ್ನು ಹೊಂದಿರುವ ಮಾಲೀಕರೊಂದಿಗೆ ಶಾಮೀಲಾಗಿ ಯಂತ್ರಗಳಿಂದಲೇ ಕಾಮಗಾರಿ ಮಾಡಿಸಿ ಜನಪ್ರತಿನಿಧಿಗಳು, ಅಧಿಕಾರಿಗಳು ಲಕ್ಷಗಟ್ಟಲೇ ಹಣವನ್ನು ಬರ ಪರಿಹಾರ ಕಾಮಗಾರಿ ಹೆಸರಿನಲ್ಲಿ ತಿಂದು ಹಾಕಿದರು. ಸುಳ್ಳು ಕಾಮಗಾರಿಗಳನ್ನು ಕಾಗದಗಳಲ್ಲೇ ಸೃಷ್ಟಿಸಿ ಹಣ ಎತ್ತಿ ಹಾಕಲಾಯಿತು. ಜನ ಕೆಲಸ ಕಾಣದೇ ಕೃಶವಾದರೆ, ಜಾನುವಾರುಗಳು ಹೊಟ್ಟೆಗಿಲ್ಲದೇ ಸಾಯುವ ಪರಿಸ್ಥಿತಿ ನಿರ್ಮಾಣವಾಯಿತು. ರೈತ ಕಾರ್ಮಿಕ ಸಂಘಟನೆಗಳು, ಜನಪರ ಸಂಘಟನೆಗಳ ಹೋರಾಟದ ನಂತರದಲ್ಲಿ ಜಿಲ್ಲೆಯ ಮೂರ್‍ನಾಲ್ಕು ಕಡೆ ಗೋಶಾಲೆ ತೆರೆಯಲಾಯಿತಾದರೂ ಇವತ್ತಿಗೂ ಕೂಡ ಅವಕ್ಕೆ ಬೇಕಾದ ಮೂಲಭೂತ ಸೌಕರ್ಯ ಒದಗಿಸಲಾಗಿಲ್ಲ, ಅವು ಕಾಟಾಚಾರಕ್ಕೆಂಬಂತಾಗಿ ಅಲ್ಲಿಗೆ ಬಂದು ಸೇರಿದ ದನಕರುಗಳು ಸಾಯುತ್ತಿರುವುದು ಆಡಳಿತ ಯಂತ್ರಕ್ಕೆ ಹಿಡಿದ ಕನ್ನಡಿಯಾಗಿದೆ.

ರೇಷನ್ ಕಾರ್ಡಿಲ್ಲ

ಹೆಚ್ಚಾಗಿ ರೈತರು, ಕೃಷಿ ಕೂಲಿಕಾರರು, ನೇಕಾರರನ್ನೊಳಗೊಂಡ ಜಿಲ್ಲೆಯಲ್ಲಿ ಗದಗ ಬೆಟಗೇರಿ ಅವಳಿ ನಗರ ಸೇರಿದಂತೆ, ರೋಣ, ಶಿರಹಟ್ಟಿ, ನರಗುಂದ, ಮುಂಡರಗಿ ತಾಲ್ಲೂಕು ಪಟ್ಟಣಗಳು, ಗ್ರಾಮಾಂತರ ಪ್ರದೇಶಗಳು ಶಾಶ್ವತ ಕುಡಿಯುವ ನೀರಿನ ಯೋಜನೆಗಳಿಲ್ಲದೇ ಬೇಸಿಗೆ ಸಮಯದಲ್ಲಿ ನೀರು ಹುಡುಕಿಕೊಂಡು ತರಲು ದೂರ ದೂರ ಅಲೆದಾಡುವಂತಾಗಿದೆ. ಹೊಟ್ಟೆ ತುಂಬಿಸಿಕೊಳ್ಳಲು ರೇಷನ್ ಅಂಗಡಿಗಳನ್ನೇ ನಂಬಿಕೊಂಡಿರುವ ಬಹುತೇಕ ಜನತೆಗೆ ರೇಷನ್ ಕಾರ್ಡ್‌ಗಳೇ ಇಲ್ಲಿಯವರೆಗೂ ದೊರೆತಿಲ್ಲ. ದೊರೆತವರಿಗೆ ಸರ್ಕಾರ ಕೊಡುವ ಪ್ರಮಾಣ ಸಾಲುತ್ತಿಲ್ಲ.

ಗದಗ್‌ನ ಬೆಟಗೇರಿಯಲ್ಲಿ ನೀರಿನ ಸಮಸ್ಯೆ ವಿರುದ್ಧ ಸಾರ್ವಜನಿಕರ ಪ್ರತಿಭಟನೆ



ಅನಾರೋಗ್ಯಕ್ಕೀಡಾಗುವದು ಜನತೆಗೆ ಸಾಮಾನ್ಯವಾಗಿದೆ. ಅನಾರೋಗ್ಯವನ್ನು ಎದುರಿಸುವ ಬಡ ಜನ ಸರ್ಕಾರಿ ಆಸ್ಪತ್ರೆಗಳನ್ನೇ ನೆಚ್ಚಿಕೊಂಡಿದ್ದಾರೆ. ಆದರೆ ಸರ್ಕಾರಿ ಆಸ್ಪತ್ರೆಗಳು ವೈದ್ಯರ, ತಾಂತ್ರಿಕ ಸಿಬ್ಬಂದಿಗಳ, ಔಷಧಿಗಳ ಕೊರತೆಯಿಂದ ಬಳಲುತ್ತಿವೆ. ಬಂದ ಔಷಧಿಗಳು, ಉಪಚಾರಗಳು ಲಭಿಸಬೇಕಾದರೆ ವೈದ್ಯರ ಸಿಬ್ಬಂದಿಗಳ ಕೈ ಬೆಚ್ಚಗಗೆ ಮಾಡಬೇಕಾದಂತಹ ದುರಾವಸ್ಥೆ ಇಲ್ಲಿದೆ. ಕಳೆದ ವರ್ಷ ಚಿಕೂನ್ ಗುನ್ಯಾ ರೋಗಕ್ಕೆ ಜಿಲ್ಲೆಯ ಲಕ್ಷಾಂತರ ಜನ ಒಳಗಾದಾಗ ಸರ್ಕಾರದಿಂದ ಸಕಾಲಕ್ಕೆ, ಸೂಕ್ತ ಚಿಕಿತ್ಸೆ ದೊರೆಯದೇ, ಖಾಸಗಿ ದವಾಖಾನೆಗಳಲ್ಲಿ ಜನ ಸಾಲ ಸೋಲ ಮಾಡಿ ಚಿಕಿತ್ಸೆ ಪಡೆದುಕೊಂಡದ್ದನ್ನು ನೆನಸಿಕೊಂಡರೆ ಸರ್ಕಾರಕ್ಕೆ ಜನಾರೋಗ್ಯದ ಬಗ್ಗೆ ಎಷ್ಟೊಂದು ಕಾಳಜಿ ಇದೆ ಎಂಬುದು ಸ್ಪಷ್ಟವಾಗುತ್ತದೆ.



ನೇಕಾರರ ಬವಣೆ

ಗದಗ, ಬೆಟಗೇರಿ, ಗಜೇಂದ್ರಗಢ, ಮುಳಗುಂದ ಇತರೇ ಪ್ರದೇಶಗಳಲ್ಲಿ ಸಾವಿರಾರು ಕುಟುಂಬಗಳು ನೇಕಾರಿಕೆ ಅವಲಂಬಿಸಿಯೇ ಜೀವನ ಸಾಗಿಸುತ್ತಿದ್ದಾರೆ. ಕೈಮಗ್ಗ ನೇಕಾರರು ನೂಲು ಪೂರೈಕೆ ಕೊರತೆಯಿಂದ, ಪವರ್‌ಲೂಂ ನೇಕಾರರು ಮಾಲೀಕರು ಕಡಿಮೆ ಕೂಲಿ ನೀಡಿ ಶೋಷಣೆ ಮಾಡುತ್ತಿರುವುದರಿಂದ ಅವರೆಲ್ಲ ತೀವ್ರವಾದ ಸಂಕಷ್ಟಕ್ಕೀಡಾಗಿ ನೇಕಾರಿಕೆ ದಂಧೆಯನ್ನೇ ಬಿಡುವಂತಾಗಿದೆ, ಬಿಟ್ಟಿದ್ದಾರೆ. ಬದಲಾಗಿ ಇನ್ನಾವುದೇ ಉದ್ಯೋಗಕ್ಕಾಗಿ ಅಲೆದಾಡುತ್ತಿದ್ದಾರೆ. ಬೇರೆ ಕೆಲಸ ಮಾಡಿ ಗೊತ್ತಿಲ್ಲದ ನೇಕಾರರು ಅದರಲ್ಲೇ ಕೊಳೆಯುವಂತಾಗಿದೆ.

ಕಡೆಗಣನೆ

ಗ್ರಾಮಾಂತರ ಪ್ರದೇಶಗಳಿಗೆ ಸಾಗಬೇಕಾದರೆ ಇವತ್ತಿಗೂ ರಸ್ತೆಗಳಿಲ್ಲ. ವಿದ್ಯುತ್ ಪೂರೈಕೆ ದಿನಕ್ಕೆ 5 ರಿಂದ 6 ತಾಸು ನೀಡಿದರೆ ಅದೇ ಒಂದು ದೊಡ್ಡ ಸಾಧನೆ ಎಂಬಂತಾಗಿದೆ ಸರ್ಕಾರಕ್ಕೆ. ಅದಕ್ಕೆ ವ್ಯತಿರಿಕ್ತ ಅನ್ನುವಂತೆ ಗದಗ ಬೆಟಗೇರಿ ನಗರಕ್ಕೆ ಭಾರಿ ಪ್ರಮಾಣದ ವಿದ್ಯುತ್ ದೀಪಗಳನ್ನು ಅಳವಡಿಸಿ, ರಸ್ತೆ ಅಗಲೀಕರಣ ಮಾಡಿ ನಾವು ಅಭಿವೃದ್ಧಿ ಪಥದತ್ತ ಜಿಲ್ಲೆಯನ್ನು ಕೊಂಡೊಯ್ಯುತ್ತಿದ್ದೇವೆ ಎಂದು ಬಿಂಬಿಸುತ್ತಿರುವುದು ಮುಂಬರುವ ನಗರಸಭೆ ಪುರಸಭೆ ಚುನಾವಣೆಯಲ್ಲಿ ರಾಜಕೀಯ ಲಾಭ ಹೊಡೆಯಲು ಎಂಬುದು ಜನತೆಗೆ ಗೊತ್ತಾಗುತ್ತಿದೆ. ಬರೀ ಗದಗ ನಗರವನ್ನು ಕೇಂದ್ರಿಕರಿಸಿ, ಗ್ರಾಮಾಂತರ ಪ್ರದೇಶಗಳನ್ನು ಸಂಪೂರ್ಣ ಕಡೆಗಣಿಸಿರುವುದು ಸ್ಪಷ್ಟವಾಗಿದೆ. ತಿಂಗಳಿಗೊಂದರಂತೆ ಗದಗ ನಗರದಲ್ಲಿ ದೊಡ್ಡವರ ಮೂರ್ತಿ ಪ್ರತಿಷ್ಠಾಪನೆ ಮಾಡುವುದನ್ನೇ ತನ್ನ ಸಾಧನೆ ಎಂದು ಶ್ರೀರಾಮುಲು ಅಂದುಕೊಂಡು ಅಂಥ ಕೆಲಸ ಕಾರ್ಯದಲ್ಲೇ ತಮ್ಮನ್ನು ಹೆಚ್ಚು ತೊಡಗಿಸಿಕೊಂಡಿದ್ದಾರೆ.

ರಸ್ತೆ ಅಗಲೀಕರಣ ಕಾಮಗಾರಿಯಲ್ಲಿ ಡಬ್ಬಾ ಅಂಗಡಿಗಳನ್ನು ನೆಚ್ಚಿಕೊಂಡು ಜೀವನ ದೂಗಿಸುತ್ತಿದ್ದ ಸಾವಿರಾರು ಕುಟುಂಬಗಳು ಇದೀಗ ಬೀದಿ ಪಾಲಾಗಿ ಹೋರಾಟ ನಿರತರಾಗಿದ್ದಾರೆ. ಪರ್ಯಾಯ ಉದ್ಯೋಗದ ಭರವಸೆ ನೀಡಿ ಅವರ ಹೋರಾಟ ಮುರಿದ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಮಾತನ್ನು ನಂಬಿ ಹೋರಾಟ ನಿರತರು ಇಂಗು ತಿಂದ ಮಂಗನಂತಾಗಿದ್ದಾರೆ!

ಜಿಲ್ಲೆಯಲ್ಲಿ ದಲಿತರ ಮೇಲೆ ಜಾತಿ ಕೋಮಿನ ಪಟ್ಟಭದ್ರರು ನಿರಂತರವಾಗಿ ದೌರ್ಜನ್ಯಗಳನ್ನು ನಡೆಸಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ಪೃಶ್ಯತೆಯ ಹೀನ ಆಚರಣೆಗೆ ದಲಿತರು ಇವತ್ತಿಗೂ ಒಳಗಾಗಿ ಅಮಾನವೀಯವಾಗಿ ಬದುಕುತ್ತಿದ್ದಾರೆ. ಇದನ್ನು ತಡೆಯಲು, ಏನಂತಾ ನೋಡಲು ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಪುರುಸೊತ್ತಿಲ್ಲ.

ಮಳೆ ಬಂತು ಆದರೆ...

ಇತ್ತೀಚೆಗೆ ಬಿದ್ದ ಮಳೆಯಿಂದ ಸಮಾಧಾನಗೊಂಡ ರೈತ ಮುಂಗಾರು. ಬಿತ್ತನೆಗೆಂದು ಹೊಲ ಹದಗೊಳಿಸಲು ಜಾನುವಾರುಗಳ ಕೊರತೆ ಅನುಭವಿಸುತ್ತಿದ್ದಾರೆ. ಬರಗಾಲದ ಪರಿಸ್ಥಿತಿಯಿಂದ ಇದ್ದ ಜಾನುವಾರುಗಳನ್ನು ಮಾರಿಕೊಂಡು ಕೈ ಬರಿದಾಗಿಸಿಕೊಂಡು ದಿಕ್ಕುತೋಚದಂತಾಗಿ, ಸಾಹುಕಾರರ ಟ್ರಾಕ್ಟರ್‌ನಿಂದ ಹದಗೊಳಿಸಿಕೊಳ್ಳುವ ಪರಿಸ್ಥಿತಿಯುಂಟಾಗಿ, ರೈತ ದುಡ್ಡಿಲ್ಲದೇ ಕಂಗಾಲಾಗಿದ್ದಾನೆ. ಬೆಳೆ ವಿಮಾ ಯೋಜನೆಯ ಹಣ ಇನ್ನೂ ಕೈ ಸೇರಿಲ್ಲ. ಬೀಜ ಗೊಬ್ಬರಕ್ಕಾಗಿ ದಾರಿ ಹುಡುಕುತ್ತಿದ್ದಾರೆ. ಶೈಕ್ಷಣಿಕ ಸಾಲು ಆರಂಭಗೊಂಡು ಮಕ್ಕಳ ಶೈಕ್ಷಣಿಕ ಭವಿಷ್ಯ ನೆನಪಿಸಿಕೊಂಡು ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳುವಂತಾಗಿದೆ.

ಜಿಲ್ಲೆಯ ಜನ ನಿತ್ಯ ನಿರಂತರ ಇಷ್ಟೆಲ್ಲ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಉಸ್ತುವಾರಿ ಮಂತ್ರಿಗಳು ಇದೀಗ ಗದಗ ಜಿಲ್ಲೆಗೆ ಬರುವುದನ್ನೇ ನಿಲ್ಲಿಸಿದ್ದಾರೆ. ಮುಖ್ಯಮಂತ್ರಿ ಉಪಮುಖ್ಯಮಂತ್ರಿಗಳ ಪ್ರವಾಸ ಕಾರ್ಯಕ್ರಮ ಸಂದರ್ಭದಲ್ಲಿ ಮಾತ್ರ ಬಂದು ಸೇರಿದ ಜನರೆದುರು ಅಧಿಕಾರಿಗಳನ್ನು ಬೈದು, ತಮ್ಮ ವಿಫಲತೆಗಳನ್ನು ಮುಚ್ಚಿಕೊಳ್ಳುವ ಹರಸಾಹಸ ಮಾಡುತ್ತಿದ್ದಾರೆ. ಹಿಂದೆ ತಾವೆ ಹೇಳಿದ ಮಾತುಗಳನ್ನು ಮರೆ ಮಾಚುತ್ತಾ ಬಳ್ಳಾರಿಯ ಗಣಿ ದಂಧೆಯಲ್ಲಿ, ನಾಡಿನ ಸಂಪತ್ತಿನ ಅಕ್ರಮ ಲೂಟಿಯಲ್ಲೇ ತಮ್ಮನ್ನು ಹೆಚ್ಚು ತೊಡಗಿಸಿಕೊಳ್ಳುತ್ತಿರುವುದು ಜಿಲ್ಲೆಯ ಜನಕ್ಕೆ ಗೊತ್ತಾಗುವುದಿಲ್ಲವೆಂದು ಅವರು ಭಾವಿಸಿದಂತಿದೆ. ಸಹಾಯ ಬಯಸಿ ಬಂದ ವ್ಯಕ್ತಿಗಳಿಗೆ ಅಕ್ರಮ ಗಣಿಗಾರಿಕೆಯಲ್ಲಿ ಕೊಳ್ಳೆ ಹೊಡೆದ ಕೋಟ್ಯಾಂತರ ರೂಪಾಯಿ ದುಡ್ಡಿನಲ್ಲಿ ಸಾವಿರಗಟ್ಟಲೇ ಹಣ ನೀಡಿ ದಾನಶೂರ ಕರ್ಣನಂತೆ, ಬಡವರ ಬಂಧು ಎಂಬಂತೆ ಪ್ರಚಾರ ಗಿಟ್ಟಿಸಿಕೊಳ್ಳುವುದು ಇದೀಗ ಜನಕ್ಕೆ ಗೊತ್ತಾಗುತ್ತಿದೆ ಎಂಬುದನ್ನು ಶ್ರೀರಾಮುಲು ಮರೆಯಬಾರದು.

ಜಿಲ್ಲೆಯಲ್ಲಿ ಆಗಬೇಕಾದ ಕೆಲಸ ಬೇಕಾದಷ್ಟಿವೆ. ಕಳಸ ಬಂಡೂರಿ, ಸಿಂಗಟಾಲೂರು, ಹುಲಿಗುಡ್ಡ ಏತ ನೀರಾವರಿ, ಇಟಗಿ ಸಾಸಲವಾಡ ಏತ ನೀರಾವರಿ, ಮಲಪ್ರಭಾ ಎಡದಂಡೆ ಕಾಲುವೆ ದುರಸ್ಥಿಗೊಳಿಸುವುದು ಹೀಗೆ. ಅಪೂರ್ಣ ಯೋಜನೆ ಪೂರ್ಣಗೊಳಿಸಿದರೆ ಕೊಂಚವಾದರೂ ಜನರ ಬದುಕು ಹಸನಾಗುತ್ತದೆ. ಕೆಟ್ಟಿರುವ, ಒಡೆದುಹೋಗಿರುವ ಕಾಲುವೆ ಸರಿಪಡಿಸಿದರೆ ಜನ ಎಷ್ಟೋ ನಿಟ್ಟುಸಿರು ಬಿಡುವಂತಾಗುತ್ತದೆ. ಆದರೆ ನಮ್ಮ ಸಚಿವರಿಗೆ, ಸರ್ಕಾರಕ್ಕೆ ಇವೆಲ್ಲಾ ಆಗಬೇಕೆನ್ನಿಸುವುದು ಯಾವಾಗ ಎಂಬ ಪ್ರಶ್ನೆ ಎದುರಾಗಿದೆ.

ನಾಡಿನ ಸಂಪತ್ತನ್ನು ಲೂಟಿ ಹೊಡೆದು, ಕೋಟ್ಯಾಂತರ ರೂಪಾಯಿ ಹಣ, ಆಸ್ತಿ ಸಂಪಾದಿಸಿರುವ ಬಿಜೆಪಿಯ ಬಿ.ಶ್ರೀರಾಮುಲು ರಾಜಕೀಯಕ್ಕೆ ಧುಮಿಕಿ ಶಾಸಕರಾಗಿದ್ದು, ಸಚಿವರಾಗಿದ್ದು ತಾವು ತನ್ನ ಧಣಿಗಳು ಮಾಡಿಕೊಂಡಿರುವ ಅಕ್ರಮ ಸಂಪತ್ತಿನ ರಕ್ಷಣೆಗೆಂಬುದು ಸತ್ಯ. ಇಂಥವರಿಂದ ಜನ ನಾಡು ಅಭಿವೃದ್ಧಿ ಬಯಸುವುದು ಮೂರ್ಖತನವಾಗುತ್ತದೆ.

ಗದಗ ಜಿಲ್ಲೆಯ ದುಡಿಯುವ ಜನ ಒಂದಾಗಿ ಸಂಘಟಿತ ಹೋರಾಟಕ್ಕಿಳಿಯದೇ, ರಾಜಕೀಯ ಪ್ರಜ್ಞೆ ಹೆಚ್ಚಿಸಿಕೊಳ್ಳದೇ ದಾರಿಯಿಲ್ಲ ಎಂಬುದನ್ನು ಆದಷ್ಟು ಬೇಗ ಅರಿತುಕೊಳ್ಳುವುದು ಒಳಿತು.

■ ರವೀಂದ್ರ ಹೊನವಾಡ, ಗದಗ

ರಾಷ್ಟ್ರಾಧ್ಯಕ್ಷರ ಸ್ಥಾನಕ್ಕೆ ಮಹಿಳಾ ಅಭ್ಯರ್ಥಿ

ರಾಷ್ಟ್ರಪತಿ ಚುನಾವಣೆಯಲ್ಲಿ ಯುಪಿಎ - ಎಡಪಕ್ಷಗಳ ಅಭ್ಯರ್ಥಿಯಾಗಿ ಪ್ರತಿಭಾ ಪಾಟೀಲ್ ಸ್ಪರ್ಧೆಯಲ್ಲಿದ್ದಾರೆ. ಮಹಿಳಾ ಸಬಲೀಕರಣದ ಬಗ್ಗೆ ಉದ್ದುದ್ದ ಮಾತನಾಡುವ ಬಿಜೆಪಿ ಎಂದಿನಂತೆ ತನ್ನ ಚಾಳಿ ತೋರಿಸುತ್ತಿದೆ.

ಸಾಧಾರಣ 2 ತಿಂಗಳಿಗೂ ಹೆಚ್ಚು ಕಾಲ ತೀವ್ರ ಊಹಾಪೋಹಗಳಿಗೆ ಕಾರಣವಾಗಿದ್ದ ರಾಷ್ಟ್ರಪತಿ ಚುನಾವಣಾ ಅಭ್ಯರ್ಥಿ ಆಯ್ಕೆಗೆ ಈಗ ಅಂತಿಮ ತೆರೆಬಿದ್ದಿದೆ. ಯುಪಿಎ ಮತ್ತು ಎಡಪಕ್ಷಗಳ ಒಮ್ಮತ್ರದ ಅಭ್ಯರ್ಥಿಯಾಗಿ ರಾಜಸ್ಥಾನದ ರಾಜ್ಯಪಾಲರಾದ ಪ್ರತಿಭಾ ಪಾಟೀಲ್‌ಯವರ ಹೆಸರು ಪ್ರಕಟವಾಗಿದೆ. ಹೇಗಾದರೂ ಮಾಡಿ ಕಲಾಂ ಅವರನ್ನೇ ಕುರ್ಚಿಯಲ್ಲಿ ಕೂರಿಸಬೇಕು ಇಲ್ಲವಾದಲ್ಲಿ ಬೈರೋಂ ಸಿಂಗ್ ಶೇಖಾವತ್ ಅವರಾದರೆ ಇನ್ನೂ ಒಳ್ಳೆಯದು ಎಂದು ಕನಸು ಕಾಣುತ್ತಿದ್ದ ಬಿಜೆಪಿ ಕೂಟಕ್ಕೆ ಪ್ರತಿಭಾ ಪಾಟೀಲ್ ಅಭ್ಯರ್ಥಿಯಾದುದು ಲೆಕ್ಕಾಚಾರ ತಲೆಕೆಳಗಾದಂತಾಗಿದೆ.

ರಾಷ್ಟ್ರಪತಿ ಚುನಾವಣೆ, ಎರಡು ಬಣಗಳ ನಡುವಿನ ಆಯ್ಕೆ ಅಲ್ಲ. ಎರಡು ಸಿದ್ಧಾಂತಗಳನ್ನು ನುಡುವಿನ ಪ್ರಶ್ನೆ ಇದರಲ್ಲಿ ಅಡಗಿತ್ತು: ಒಂದು, ಸಂವಿಧಾನದ ಆಶಯವಾದ ಜಾತ್ಯಾತೀತ ತತ್ವವನ್ನು ಎತ್ತಿ ಹಿಡಿಯುವುದಾದರೆ, ಇನ್ನೊಂದು ಅದಕ್ಕೆ ವಿರುದ್ಧವಾದುದು, ಕೋಮುವಾದಿ ಅಜೆಂಡಾವನ್ನು ಮುಂದುವರಿಸುವುದು. ಐದು ವರ್ಷಗಳ ಹಿಂದೆ ಅಬ್ದುಲ್ ಕಲಾಂ ಅವರ ಹೆಸರನ್ನು ಬಿಜೆಪಿ ನೇತೃತ್ವದ ಎನ್.ಡಿ.ಎ ಹೆಸರಿಸಿದಾಗ, ಕಾಂಗ್ರೆಸ್ ಅವರನ್ನು ಬೆಂಬಲಿಸಿತ್ತು. ಆದರೆ ಎಡಪಕ್ಷಗಳು, ಲಕ್ಷ್ಮಿ ಸೆಹಗಲ್ ಅವರನ್ನು ಕಣಕ್ಕಿಳಿಸಿದ್ದವು. ಕಾಂಗ್ರೆಸ್ ಒಂದು ಜಾತ್ಯಾತೀತ ಪಕ್ಷವಾದರೂ, ಕೋಮುವಾದವನ್ನು ಎದುರಿಸಬೇಕೆಂಬ ಛಲ, ದೃಢತೆಯಿಲ್ಲ.

ತಾತ್ವಿಕ ಹೋರಾಟ

ಲಕ್ಷ್ಮಿ ಸೆಹಗಲ್ ಗೆಲ್ಲುವುದು ಸಾಧ್ಯವಿಲ್ಲ ಎಂದು ಎಡಪಕ್ಷಗಳಿಗೆ ತಿಳಿದಿತ್ತು. ಆದರೆ ರಾಷ್ಟ್ರಪತಿ ಹುದ್ದೆಯ ಮಹತ್ವ, ಕೋಮುವಾದದ ಅಪಾಯ, ಪ್ರಭುತ್ವದ ಎಲ್ಲಾ ಅಂಗಗಳಲ್ಲಿ ತನ್ನ ಕಬಂಧ ಬಾಹುಗಳನ್ನು ಚಾಚುವ ಪ್ರಯತ್ನ ಇದನ್ನು ಜನರಿಗೆ ವಿವರಿಸುವುದು ಅಗತ್ಯವಿತ್ತು. ಆದ್ದರಿಂದ ಚುನಾವಣೆಯ ಹಿಂದೆ ಅಡಗಿರುವ ಮಹತ್ವವನ್ನು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳಲಾಗಿತ್ತು.

ಆದರೆ ಇಂದಿನ ಪರಿಸ್ಥಿತಿ ಬೇರೆ. ಕೋಮುವಾದಿಗಳು ಅಧಿಕಾರದಲ್ಲಿ ಇಲ್ಲದಿದ್ದರೂ ಒಂದೇ ಒಂದು ಚಿಕ್ಕ ಅವಕಾಶ ಸಿಕ್ಕರೂ ಬಳಸಿಕೊಳ್ಳಬೇಕೆಂಬ ಹಂಬಲದಲ್ಲಿದ್ದಾರೆ. ಇನ್ನೊಂದು ಮಹತ್ವದ ಸಂಗತಿಯೇನೆಂದರೆ 40ರಿಂದ 50ರ ದಶಕದಲ್ಲಿ ಹೆಚ್ಚು ಕಡಿಮೆ ಭಾರತ



ದೇಶದೊಂದಿಗೆ ವಿಮೋಚನೆಗೊಂಡ ದೇಶಗಳಲ್ಲಿ ಇದೀಗ ಚುನಾಯಿತ ಪ್ರಜಾಪ್ರಭುತ್ವದ ಅಂಶಗಳು ಶಿಥಿಲಗೊಂಡು ಸರ್ವಾಧಿಕಾರವು ತಲೆಯೆತ್ತಿದೆ. ಇಂದಿನ ಪಾಕಿಸ್ತಾನ, ಹಿಂದಿನ ನೇಪಾಳ ರಾಷ್ಟ್ರಗಳು ನೇರ ಉದಾಹರಣೆಯಾದರೆ, ಬಾಂಗ್ಲಾದೇಶದಲ್ಲಿ ಇಂದು ನಡೆಯುತ್ತಿರುವ ಘಟನೆಗಳು ಕಳವಳಕಾರಿಯಾಗಿವೆ.

ಅರ್ಹತೆ ಏನು?

ಆದ್ದರಿಂದ ಇಂದಿನ ಕ್ಲಿಷ್ಟ ಕಾಲದಲ್ಲಿ ರಾಷ್ಟ್ರಪತಿ ಹುದ್ದೆ ಅಲಂಕರಿಸಬೇಕಾದವರೆ ಅರ್ಹರೇ ಆಗಿರಬೇಕು. ಎಡಪಕ್ಷಗಳು ಬಹಳ ಹಿಂದಿನಿಂದಲೂ ಹೇಳುತ್ತಾ ಬಂದಿರುವಂತೆ, ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸುವ ವ್ಯಕ್ತಿ ಕನಿಷ್ಠ ಈ ಮೂರು ಅರ್ಹತೆಗಳನ್ನು ಹೊಂದಿರಬೇಕು.

1. ದೇಶದ ರಾಜಕೀಯ ವ್ಯವಸ್ಥೆಯ ಕಾರ್ಯ ನಿರ್ವಹಣೆಯ ಬಗ್ಗೆ ಆಳವಾದ ಅರಿವು.

2. ಪ್ರಭುತ್ವದ ಮೂರು ಅಂಗಗಳಾದ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳ ನಡುವಿನ ಸಂಬಂಧದ ಬಗ್ಗೆ ಸ್ಪಷ್ಟವಾದ ತಿಳುವಳಿಕೆ.

3.ಸಂವಿಧಾನದ ಧರ್ಮನಿರಪೇಕ್ಷ ಸಿದ್ಧಾಂತಗಳನ್ನು ಎತ್ತಿಹಿಡಿಯಬಲ್ಲ ಜಾತ್ಯಾತೀತ ನಿಲುವು.

ಆದ್ದರಿಂದಲೇ ಎಡಪಕ್ಷಗಳು 5 ವರ್ಷಗಳ ಹಿಂದೆ ಲಕ್ಷ್ಮಿ ಸೆಹಗಲ್ ಅವರನ್ನು ಕಣಕ್ಕಿಳಿಸಿದ್ದವು.

ರಾಷ್ಟ್ರಪತಿ ಅಭ್ಯರ್ಥಿಯಾಗಿ ಪ್ರಣಬ್ ಮುಖರ್ಜಿ, ಸೋಮನಾಥ ಚಟರ್ಜಿ, ಶಿವರಾಜ ಪಾಟೀಲ್, ಕರಣ್‌ಸಿಂಗ್ ಭೈರೋಂ ಸಿಂಗ್ ಶೇಖಾವತ್ ಮೊದಲಾದ ಹೆಸರುಗಳು ಕೇಳಿಬಂದವು. ಪ್ರಣಬ್ ಮುಖರ್ಜಿಯವರನ್ನು ಸರಕಾರದಿಂದ ಬಿಟ್ಟುಕೊಡಲು ಸಾಧ್ಯವಿಲ್ಲ ಎಂದು ಹೇಳಿದ ಕಾಂಗ್ರೆಸ್, ಶಿವರಾಜ್ ಪಾಟೀಲ್ ಹಾಗೂ ಕರಣ್‌ಸಿಂಗ್ ಅವರ ಹೆಸರನ್ನು ಮುಂದುಮಾಡಿತು. ಗೃಹಮಂತ್ರಿಯಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡದ ಶಿವರಾಜ್ ಪಾಟೀಲ್ ಮತ್ತು ರಾಜಮನೆತನದ ಹಿನ್ನೆಲೆಯಿಂದ ಬಂದ ಕರಣ್‌ಸಿಂಗ್ ಅವರ ಅಭ್ಯರ್ಥಿತನವನ್ನು ಎಡಪಕ್ಷಗಳು ವಿರೋಧಿಸಿದವು. ಇವರು ಕೋಮುವಾದಿಗಳ ವಿರುದ್ಧ ಗಟ್ಟಿಯಾಗಿ ನಿಲ್ಲಬಲ್ಲರೇ ಎಂಬುದು ಕೂಡಾ ಪ್ರಶ್ನಾರ್ಹವಾಗಿತ್ತು.

ಆ ಹಿನ್ನೆಲೆಯಲ್ಲಿ ಪ್ರತಿಭಾ ಪಾಟೀಲ್ ಅವರ ಆಯ್ಕೆ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ನಿಲುವನ್ನು ಎತ್ತಿಹಿಡಿಯುವಲ್ಲಿ ಸರಿಯಾದ ಹೆಜ್ಜೆ. ರಾಜಸ್ಥಾನದ ರಾಜ್ಯಪಾಲೆಯಾಗಿರುವ ಅವರು ಅಲ್ಲಿನ ಕೋಮುವಾದಿ ಬಿಜೆಪಿ ಸರಕಾರ ಮತಾಂತರ ನಿಷೇಧ ಕಾಯಿದೆಯನ್ನು ತಂದಾಗ ಅದನ್ನು ವಾಪಾಸು ಮಾಡಿದರು. ಅಂದರೆ ಜಾತ್ಯಾತೀತ ನೆಲೆಗಟ್ಟಿನ, ಸಂಸದೀಯ ಪ್ರಜಾಪ್ರಭುತ್ವದ ಒಳಹರಹುಗಳನ್ನು ತಿಳಿದಿರುವ ಪ್ರತಿಭಾ ಪಾಟೀಲ್ ರಾಷ್ಟ್ರಪತಿ ಅಭ್ಯರ್ಥಿಯಾಗಿ ಯುಪಿಎ ಎಡಪಕ್ಷಗಳ ವತಿಯಿಂದ ಆಯ್ಕೆಯಾಗಿದ್ದಾರೆ. ಇದು ಸ್ವಾಗತಾರ್ಹ.

ಪ್ರಥಮ ಬಾರಿಗೆ

ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ಸ್ವಾತಂತ್ರ್ಯ ದಿನಾಚರಣೆಯ 60ನೇ ವರ್ಷದಲ್ಲಿ ಪ್ರಪ್ರಥಮ ಬಾರಿಗೆ ಮಹಿಳೆಯೊಬ್ಬರು ರಾಷ್ಟ್ರಪತಿಯಾಗಬಹುದಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಕೇವಲ ಮಹಿಳೆಯರಿಗೆ ಮಾತ್ರವಲ್ಲದೆ, ಸಾಮಾಜಿಕ ಸಮಾನತೆ, ಲಿಂಗ ಸಮಾನತೆಯ ಆಶಯ ಹೊಂದಿರುವವರೆಲ್ಲರಿಗೂ ಸಂತಸ ನೀಡುವ ಸಂಗತಿ.

ಅವರೊಂದಿಗೆ ಸಂಪರ್ಕವಿದ್ದರೆ...

ಅದೇ ಸಂದರ್ಭದಲ್ಲಿ ಬೈರೋಂ ಸಿಂಗ್ ಶೇಖಾವತ್ ಅವರನ್ನು ಕಣಕ್ಕಿಳಿಸಲು ಬಿಜೆಪಿ ಹೆಚ್ಚು ಕಡಿಮೆ ನಿರ್ಧರಿಸಿದೆ. ಆರ್.ಎಸ್.ಎಸ್.ನ ಸಕ್ರಿಯ ಕಾರ್ಯಕರ್ತರಾಗಿದ್ದ ಶೇಖಾವತ್ ಉಪರಾಷ್ಟ್ರಪತಿಯಾಗಿ ಆಯ್ಕೆಯಾದುದು ಬಿಜೆಪಿ ಅಧಿಕಾರದ ಅವಧಿಯಲ್ಲಿ. ರಾಷ್ಟ್ರಪತಿ ಚುನಾವಣೆಯ ಹಿನ್ನೆಲೆಯಲ್ಲಿ ಅವರು ಹಲವಾರು ರಾಜಕೀಯ ಪಕ್ಷಗಳ ನಾಯಕರನ್ನು ಭೇಟಿಯಾಗಿದ್ದರು. ಕಮ್ಯೂನಿಸ್ಟ್ ನಾಯಕ ಜ್ಯೋತಿ ಬಸುರವರನ್ನು ಭೇಟಿಯಾಗಿದ್ದ ಸಂದರ್ಭದಲ್ಲಿ ಕೋಮುವಾದಿಗಳೊಂದಿಗೆ ಸಂಪರ್ಕ ಹೊಂದಿದವರಿಗೆ ಬೆಂಬಲ ನೀಡುವ ಪ್ರಶ್ನೆಯೇ ಇಲ್ಲ ಎಂದು ಜ್ಯೋತಿ ಬಸುರವರು ಹೇಳಿದ್ದಾಗಿ ವರದಿಯಾಗಿದೆ.

ಪ್ರತಿಭಾ ಪಾಟೀಲ್ ಅವಿರೋಧವಾಗಿ ಆಯ್ಕೆಯಾದರೆ ಮಹಿಳೆಯೊಬ್ಬರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡಲು ಎಲ್ಲ ರಾಜಕೀಯ ಪಕ್ಷಗಳು ಒಂದಾಗಿವೆ ಎಂಬ ಸಂದೇಶವನ್ನು ನೀಡಿದಂತಾಗುತ್ತದೆ. ಇಲ್ಲವಾದಲ್ಲಿ ಎರಡು ಸಿದ್ಧಾಂತಗಳ ಕುರಿತು ಚರ್ಚೆ ಜನರ ನಡುವೆ ಹೋಗುತ್ತದೆ.

ಆಂಧ್ರ ಪ್ರದೇಶ

ಆಂಧ್ರದಾದ್ಯಂತ ದಿನೇ ದಿನೇ ತೀವ್ರಗೊಳ್ಳುತ್ತಿರುವ ಭೂಮಿ ಹೋರಾಟವನ್ನು ದಮನ ಮಾಡಲು ರಾಜ್ಯ ಸರ್ಕಾರ ಟೊಂಕ ಕಟ್ಟಿ ನಿಂತಿದೆ.

ದಮನವನ್ನೂ ಲೆಕ್ಕಿಸದೆ ಭೂ ಹೋರಾಟ ಹರಡುತ್ತಿದೆ

ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷ ಕಳೆದ ಚುನಾವಣೆಗಳ ವೇಳೆ ನಗರದ ಬಡವರಿಗೆ ಮನೆ ನಿವೇಶನ ಮತ್ತು ಗ್ರಾಮೀಣ ಬಡವರಿಗೆ ಸಾಗುವಳಿಯೋಗ್ಯ ಭೂಮಿ ಒದಗಿಸುವುದಾಗಿ ವಚನ ನೀಡಿತ್ತು, ಆದರೆ ಗೆದ್ದು ಬಂದ ಮೇಲೆ ಕಾಂಗ್ರೆಸ್ ಸರಕಾರ ಈ ಬಗ್ಗೆ ಇದುವರೆಗೂ ಚಕಾರವೆತ್ತಿಲ್ಲ. ಬೇಸರಗೊಂಡ ಬಡಜನ ಈಗ ಪ್ರತಿಭಟನೆಗಿಳಿದಿದ್ದಾರೆ. 195 ಸಾಮೂಹಿಕ ಸಂಘಟನೆಗಳು ಒಂದೂವರೆ ತಿಂಗಳಿಂದ ನಡೆಸುತ್ತಿರುವ ಭೂಹೋರಾಟ(ಜನಶಕ್ತಿ, ಜೂನ್ 10, 2007 ನೋಡಿ) ಈಗ 90ಪಟ್ಟಣಗಳಿಗೆ ಮತ್ತು 712 ಗ್ರಾಮೀಣ ಕೇಂದ್ರಗಳಿಗೆ ಹರಡಿದೆ.



ಸಾವಿರಾರು ಜನ ಇದರಲ್ಲಿ ಭಾಗವಹಿಸುತ್ತಿದ್ದಾರೆ; ಅದನ್ನು ಬೆಂಬಲಿಸುತ್ತಿರುವವರ ಸಂಖ್ಯೆ ದಿನೇ-ದಿನೇ ಹೆಚ್ಚುತ್ತಿದೆ.

ಇದನ್ನು ಕಂಡು ಕಾಂಗ್ರೆಸ್ ಸರಕಾರ ವಚನ ಪಾಲಿಸಲು ಮುಂದಾಗುವ ಬದಲು ಹೋರಾಟಗಾರರ ಮೇಲೆ ಹೆಚ್ಚೆಚ್ಚು ದಮನ ಹರಿಯಬಿಡಲಾರಂಭಿಸಿದೆ. ಇದುವರೆಗೆ 2500ಕ್ಕೂ ಹೆಚ್ಚು ಜನಗಳನ್ನು ಬಂಧಿಸಿದೆ, 116 ಜನ ಇನ್ನೂ ಜೈಲಿನಲ್ಲೇ ಇದ್ದಾರೆ. ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಹಲವೆಡೆ ಲಾಠೀಪ್ರಹಾರಗಳು ನಡೆದಿವೆ. ಹೋರಾಟದ ಮುಖಂಡರ ಮೇಲೆ ಸುಳ್ಳು ಕೇಸುಗಳನ್ನು ಹಾಕಲಾಗುತ್ತಿದೆ. ಅನಂತಪುರ, ನಿಜಾಮಬಾದ್ ಮುಂತಾದೆಡೆ ಮಹಿಳಾ ಪ್ರತಿಭಟನೆಕಾರರೊಡನೆ ಪೋಲೀಸರ ವರ್ತನೆ ಖಂಡನೆಗೊಳಗಾಗಿದೆ.

ದಮನದ ಮೂಲಕ ಹೋರಾಟವನ್ನು ಬಗ್ಗುಬಡಿಯಲಾಗದ ಕಾಂಗ್ರೆಸ್ ಸರಕಾರ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ವಿರುದ್ಧ ಅಪಪ್ರಚಾರ ನಡೆಸಿ ಅದನ್ನು ದಿಕ್ಕು ತಪ್ಪಿಸುವ ಪ್ರಯತ್ನಕ್ಕೂ ಇಳಿದಿದೆ.


ರಾಜ್ಯ ಕಾಂಗ್ರೆಸ್ ಸರಕಾರ ತಕ್ಷಣವೇ ತನ್ನ ದಮನವನ್ನು ನಿಲ್ಲಿಸಿ ತನ್ನ ಚುನಾವಣಾ ಭರವಸೆಯಂತೆ ಬಡವರಿಗೆ ಮನೆ ನಿವೇಶನ ಮತ್ತು ಸಾಗುವಳಿಯೋಗ್ಯ ಭೂಮಿ ಒದಗಿಸಲು ಕ್ರಮ ಕೈಗೊಳ್ಳಬೇಕು, ರಂಗರಾವ್ ಸಮಿತಿಯ ಶಿಫಾರಸಿನಂತೆ ಭೂಮಿಯನ್ನು ಬಡವರಿಗೆ ವಹಿಸಿಕೊಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಿಸಿದೆ.

■ ಕೆ.ವಿ.



ಜನಶಕ್ತಿ ಕನ್ನಡ ವಾರಪತ್ರಿಕೆ
ಜೂನ್ 24, 2007

ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳು ಪ್ರತಿದಿನವೂ ಎಂಬಂತೆ ಅವ್ಯಾಹತವಾಗಿ ಜರುಗುತ್ತಾಲೇ ಇವೆ. ಮುಖ್ಯಮಂತ್ರಿಯವರು ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ರೈತರನ್ನು ಆಹ್ವಾನಿಸಿ ಇಡೀ ದಿನ ಚರ್ಚೆ ನಡೆಸುತ್ತಿರುವಾಗಲೇ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 5 ಜನ ರೈತರ ಆತ್ಮಹತ್ಯೆಯ ಪ್ರಸಂಗಗಳು ವರದಿಯಾಗಿವೆ. ಹೀಗೆ ನಿರಂತರ ಆತ್ಮಹತ್ಯೆಗಳು ಜರುಗುತ್ತಲೇ ಇರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು 'ನಮ್ಮ ಸರ್ಕಾರ ಅನೇಕ ರೈತ ಪರ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆದ್ದರಿಂದ ಆತ್ಮಹತ್ಯೆಗಳಲ್ಲ. ರಾಜೀನಾಮೆಯ ಮಾತಿಗೆ ಕಾರಣ ಏನಿರಬಹುದು ಎಂಬ ದೇವೇಗೌಡರ ಕುಟುಂಬದ ಒಳಗಡೆಯ ರಾಜಕಾರಣ, ಬಿಜೆಪಿಗೆ ಅಧಿಕಾರ ಹಸ್ತಾಂತರಿಸಬೇಕಾದ ಒಪ್ಪಂದದಿಂದ ತಪ್ಪಿಸಿಕೊಳ್ಳುವ ಮಾರ್ಗ ಹುಡುಕಾಟ, ಹೀಗೆ ಕಾರಣ ಏನೇ ಇರಲಿ ರೈತರ ಆತ್ಮಹತ್ಯೆಯ ನೆಪ ಹೂಡಿ ರಾಜೀನಾಮೆ ನೀಡಿ ರೈತರ ಅನುಕಂಪ ಗಳಿಸಿ ಒಂದು ರೀತಿಯ ಹೀರೋ ಆಗಬಹುದು ಎಂದು ಕುಮಾರಸ್ವಾಮಿಯವರು ಭ್ರಮಿಸಿದಂತಿದೆ. ರೈತರಿಗಾಗಿ ನಾನು ಅಷ್ಟೊಂದು ಮಾಡಿದೆ ಇಷ್ಟೊಂದು ಮಾಡಿದೆ



ರೈತರ ಆತ್ಮಹತ್ಯೆಯೂ ಕುಮಾರಸ್ವಾಮಿಯವರ ರಾಜಿನಾಮೆ ಎಂಬ ಪ್ಲಾಪ್ ಸಿನಿಮಾ ಕಥೆಯೂ



ಜಿ.ಎನ್.ನಾಗರಾಜ್


ಆತ್ಮಹತ್ಯೆ ಮಾಡಿಕೊಳ್ಳಬೇಡಿ' ಎಂದು ಮನವಿ ಮಾಡಿದರು. ಅನಂತರವೂ ರೈತರ ಆತ್ಮಹತ್ಯೆ ಗಳು ಘಟಿಸುತ್ತಿರುವ ಹಿನ್ನೆಲೆಯಲ್ಲಿ ಆತ್ಮಹತ್ಯೆಗಳು ಮತ್ತು ಮುಂದುವರೆದರೆ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ನೀಡುತ್ತೇನೆಂದೂ ಪದೇ ಪದೇ ಹೇಳಿದರು. ಮುಖ್ಯಮಂತ್ರಿಗಳ ರಾಜಿನಾಮೆ ಆತ್ಮಹತ್ಯೆಗಳನ್ನು ನಿಲ್ಲಿಸಲು ಹೇಗೆ ನೆರವಾಗಬಹುದು ಎಂಬುದನ್ನು ಅವರೇ ಬಲ್ಲರು! ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ದೂಡಲ್ಪಟ್ಟ ಯಾವ ರೈತನಾದರೂ-ಅಯ್ಯೋ ಮುಖ್ಯಮಂತ್ರಿಗಳು ರಾಜೀನಾಮೆ ನೀಡುತ್ತಾರಂತಲ್ಲ. ಅಂತಹ ಮುಖ್ಯಮಂತ್ರಿಗಳನ್ನು ಕಳೆದುಕೊಳ್ಳಬಾರದು. ಆದ್ದರಿಂದ ನಾನು ಆತ್ಮಹತ್ಯೆ ಮಾಡಿಕೊಳ್ಳಬಾರದು ಎಂದು ಯೋಚಿಸಲು ಸಾಧ್ಯವೇ? ಸರ್ಕಾರದ ನೀತಿಗಳು ಮೂಲವಾಗಿ ಅವರ ಕೃಷಿ ನೀತಿಯೇ ಅವರನ್ನು ಆತ್ಮಹತ್ಯೆಗೆ ದೂಡುತ್ತಿರುವಾಗ ಮುಖ್ಯಮಂತ್ರಿಗಳ ರಾಜೀನಾಮೆ ಅಂತಹ ರೈತರ ಸಂಕಟಗಳಿಗೆ ಏನಾದರೂ ಪರಿಹಾರ ಒದಗಿಸಲು ಸಾಧ್ಯವೇ? ಮುಖ್ಯಮಂತ್ರಿಯಾಗಿ ಮುಂದುವರೆದು ಆತ್ಮಹತ್ಯೆಗೆ ಕಾರಣವಾದ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಿದರೆ ಸದ್ಯಕ್ಕಿಲ್ಲದಿದ್ದರೂ ಮುಂದಾಕ್ಕಾದರೂ ಆತ್ಮಹತ್ಯೆಗಳು ನಿಲ್ಲಬಹುದು. ರಾಜೀನಾಮೆ ನೀಡದರೆ ಆತ್ಮಹತ್ಯೆಗಳು ನಿಲ್ಲುವಂತಹ ಪರಿಸ್ಥಿತಿ ಉಂಟಾಗುತ್ತದೆಯೇ? ಹೀಗೆ ಆತ್ಮಹತ್ಯೆಗೂ ರಾಜೀನಾಮೆಗೂ ಅರ್ಥಾತ್ ಸಂಬಂಧವಿಲ್ಲವೆಂದ ಮೇಲೆ ರಾಜೀನಾಮೆ ಘೋಷಣೆ ಹಿನ್ನೆಲೆ ಬೇರೆ ಏನಾದರೂ ಇರಬಹುದೆಂದೇ ಹೊರತು ಯಾರು ಮಾಡದೇ ಇರುವುದನ್ನೆಲ್ಲಾ ಮಾಡಿದೆ ಎಂದೆಲ್ಲಾ ಕೊಚ್ಚಿಕೊಂಡು ತಿರುಗಾಡಿದರೆ ರೈತರು ತಮ್ಮ ಬುಟ್ಟಿಗೆ ಬೀಳುವರೆಂದು ಕುಮಾರಸ್ವಾಮಿಯವರು ಭಾವಿಸಿದಂತಿದೆ. ಸಿನಿಮಾ ತಯಾರಕರಾಗಿದ್ದವರಿಗೆ ಇಂತಹ ಸಿನಿಮೀಯ ಯೋಜನೆಗಳಲ್ಲದೆ ಮತ್ತೆ ಬೇರೇನು ಹೊಳೆಯುತ್ತದೆ. ಅವರ ಹಿಂದೆ ಅವರಂತಹವರೇ ಒಬ್ಬರು ಕರ್ನಾಟಕದ ಮುಖ್ಯಮಂತ್ರಿ ಇದೇರೀತಿ ಕೊಚ್ಚಿಕೊಳ್ಳುತ್ತಿದ್ದವರನ್ನು (ಈಗಲೂ ಅವರು ಅದೇ ಜಪ ಮಾಡುತ್ತಿದ್ದಾರೆ ಪಾಪ!) ರಾಜ್ಯದ ರೈತಾಪಿ ಜನತೆ ರಾಜಕೀಯ ಆತ್ಮಹತ್ಯೆಗೆ ದೂಡಿದ್ದಾರೆ. ಮಹಾರಾಷ್ಟ್ರದ ರಾಜ್ಯಪಾಲರಾಗಿರುವ ಅವರು ಸಕ್ರಿಯ ರಾಜಕಾರಣಕ್ಕೆ ಮರಳಬೇಕೆಂದು ಮತ್ತೆ ಮತ್ತೆ ಪ್ರಯತ್ನಿಸಿದರೂ ಸಾಧ್ಯವಾಗುತ್ತಿಲ್ಲ. ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳ ಸರಣಿ ಆರಂಭವಾಗಿದ್ದೇ ರೈತರ ಮಕ್ಕಳಾದ ಅವರ ಕಾಲದಲ್ಲಿ.

ಇಬ್ಬರದೂ ಒಂದೇ ಚಿತ್ರಕಥೆ. ಒಂದು ಕೈಯಿಂದ ರೈತರನ್ನು ಆತ್ಮಹತ್ಯೆಗೆ ದೂಡುವುದು, ಮತ್ತೊಂದು ಕೈಯಿಂದ ಅವರನ್ನು ಹಿಡಿದೆಳೆಯಲು ಪ್ರಯತ್ನಿಸುತ್ತಿದ್ದೇವೆಂಬ ಸೋಗು ಹಾಕುವುದು. ಅವರದು ಕಾಂಗ್ರೆಸ್ ಪಕ್ಷ. ಇವರದು ಜನತಾದಳ. ಆದರೂ ಅದೇ ಚಿತ್ರಕಥೆಯಲ್ಲಿ ಅದೇ ಮಸಾಲೆ, ಅದೇ ಫಾರ್ಮುಲಾ. ಆ ಮುಖ್ಯಮಂತ್ರಿ ಮಾಡಿದ ಆ ಚಿತ್ರವನ್ನು ಪ್ಲಾಪ್ ಮಾಡಿದ ಜನತೆ ಈ ಮುಖ್ಯಮಂತ್ರಿಯವರ ಚಿತ್ರವನ್ನು ಫ್ಲಾಪ್ ಮಾಡಲು ಕಾಯುತ್ತಿದ್ದಾರೆ.

'ಮಗನೇ ಪ್ರಧಾನಮಂತ್ರಿಯ ಮಗನಾಗಿ ಆತ್ಮಹತ್ಯೆಯ ಮಾತಾಡುವುದು ತರವೇ'

ಎಸ್.ಎಂ.ಕೃಷ್ಣ ಹಾಗೂ ಕುಮಾರಸ್ವಾಮಿಯವರ ಸಿನಿಮಾಗಳು ಒಂದೇ ಆದರೂ ಒಗ್ಗರಣೇ ಮಾತ್ರ ರವಷ್ಟು ಬ್ಯಾರೆ. ನಟರು ಬೇರೆ ಎಂದ ಮೇಲೆ ಅವರವರ ನಟನೆಯ ಕೌಶಲ್ಯದಲ್ಲಿ ಸ್ವಲ್ಪವೂ ವ್ಯತ್ಯಾಸವಿರದಿದ್ದರೆ ಹ್ಯಾಗೆ.

ಇನ್ನು ಮುಂದೆ ಆತ್ಮಹತ್ಯೆಗಳಾದರೆ ರಾಜೀನಾಮೆ ಕೊಟ್ಟೇ ಬಿಡುತ್ತೇನೆ ಎಂದು ಡೈಲಾಗ್ ಹೊಡೆದ ಕುಮಾರಸ್ವಾಮಿಯವರು ರಾಜೀನಾಮೆಯನ್ನೇನೂ ಕೊಡಲಿಲ್ಲ. ಅವರ ಅಪ್ಪಾಜಿಯವರು 'ಕುಮಾರ, ಒಬ್ಬ ಮಾಜಿ ಪ್ರಧಾನಿಯ ಮಗನಾಗಿ ಆತ್ಮಹತ್ಯೆಯ ಮಾತನ್ನಾಡುವುದು ಶೋಭಿಸುವುದೇ? ಛೀ! ಛೀ!! ಅಲ್ಲ ತಗಿ' ಎಂಬ ಡೈಲಾಗ್‌ನ್ನು ಇಡೀ ಕರ್ನಾಟಕದ ಜನರೇ ತಮ್ಮ ತಮ್ಮ ಮನೆಗಳನ್ನೇ ಥಿಯೇಟರ್ ಮಾಡಿಕೊಂಡು ಕುಂತು ನೋಡುತ್ತಿದ್ದ ಟಿ.ವಿ. ಎಂಬ ಪರದೆಯ ಮೇಲೆ ಹೊಡೆಯಲಾಗಿ ಕುಮಾರಸ್ವಾಮಿಯವರು ಆನಂದ ತುಂದಿಲರಾಗಿ ದಿಗ್ಗನೆದ್ದು ತಮ್ಮ ಪಿತಾಶ್ರೀಯವರ ಪಾದಾರವಿಂದಗಳಿಗೆ ಪೊಡಮಟ್ಟು ರಾಜೀನಾಮೆ ಎಂಬ ನೇಣಿನಿಂದ ಹೊರಬರುವ ಮಾರ್ಗಗಳನ್ನು ಅರಸತೊಡಗಿದರು.



ಕೃಪೆ: ಪ್ರಜಾವಾಣಿ

ರೈತ ಸಮಾಲೋಚನೆ V/s ಗ್ರಾಮ ವಾಸ್ತವ್ಯ

ರೈತ ಸಮಾಲೋಚನೆ ಎಂಬ ದಿವ್ಯ ಮಂತ್ರವನ್ನು ಯಾರು ಕುಮಾರಸ್ವಾಮಿಯವರ ಕಿವಿಯಲ್ಲಿ ಜಪಿಸಿದರೋ ಕುಮಾರಸ್ವಾಮಿ ಯವರಿಗೆ ಮಾತ್ರ ಗೊತ್ತು. ಪ್ರತಿಜಿಲ್ಲೆಯಿಂದಲೂ ಕೃಷಿ ಇಲಾಖೆ ಅಧಿಕಾರಿಗಳು 'ಆರಿಸಿದ' ರೈತರನ್ನು ಕರೆಸಿ ಸಂವಾದ. ಅವರ ಪಿತಾಶ್ರೀಯವರಿಂದ ಇದು ಪ್ರಜಾತಂತ್ರದಲ್ಲಿಯೇ ಅತಿ ಅಪೂರ್ವ ಪ್ರಯೋಗ ಎಂಬ ಸರ್ಟಿಫೀಕೆಟ್ ಬೇರೆ. ಅಧಿಕಾರಿಗಳು ಕರೆದುಕೊಂಡು ಬಂದ ಈ ರೈತರ ಸಭೆ ಪ್ರಜಾಪ್ರಭುತ್ವಕ್ಕೆ ಮಾದರಿಯಾಗಿ ಬಿಟ್ಟರೆ ಇವರಿಗೆ ಎಂತಹ ಪ್ರಜಾಪ್ರಭುತ್ವ ಬೇಕು ಎನ್ನುವುದು ಜಗಜ್ಜಾಹಿರಾಗುತ್ತದೆ. ಆದರೆ ಒಂದು ಆಶ್ಚರ್ಯ ಎಂದರೆ ಇಲ್ಲಿಯವರೆಗೆ ಕರ್ನಾಟಕದ 20 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, ಕೆಲವು ಜಿಲ್ಲೆಗಳಲ್ಲಿ ಎರಡು ಮೂರು ಗ್ರಾಮಗಳಲ್ಲಿ ವಾಸ್ತವ್ಯ ಮಾಡಿದ ಕುಮಾರಸ್ವಾಮಿಯವರಿಗೆ ಆಗ್ರಾಮಗಳಲ್ಲಿ ಎಲ್ಲೂ ರೈತರ ಭೇಟಿಯೇ ಆಗಲಿಲ್ಲವೇ? ರೈತರ, ಕೃಷಿಯ ಸಮಸ್ಯೆಗಳು ಈ ಗ್ರಾಮಗಳಲ್ಲಿ ಎಲ್ಲೂ ಕುಮಾರಸ್ವಾಮಿಯವರಿಗೆ ಎದುರಾಗಲಿಲ್ಲವೇ ಅಥವಾ ಕೃಷಿಯ ಸಮಸ್ಯೆಗಳ ಬಗ್ಗೆ ರೈತರ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳುವುದು ಗ್ರಾಮ ವಾಸ್ತವ್ಯದ ಉದ್ದೇಶವಾಗಿರಲಿಲ್ಲವೇ? ಹಾಗಾದರೆ ಗ್ರಾಮ ವಾಸ್ತವ್ಯ ಎಂಬುದೊಂದು ನಾಟಕವೋ? ರೈತರೊಂದಿಗೆ ಸಂವಾದ ಎಂಬುದು ಮತ್ತೊಂದು ನಾಟಕವೋ? ಅಥವಾ ಎರಡೂ ಕೂಡ ನಾಟಕವೋ? ಆಳುವ ವರ್ಗಕ್ಕೆ ಅವರ ಪಕ್ಷಗಳಿಗೆ, ನಾಯಕರಿಗೆ ಪ್ರಜಾಪ್ರಭುತ್ವವೇ ಒಂದು ರಾತ್ರಿ ಬೆಳಗಾನ ನಡೆಯುವ ನಾಟಕದಂತೆ ಕಾಣುತ್ತಿದೆ. ಕೇರಳದ ಮುಖ್ಯಮಂತ್ರಿ ಅಚ್ಯುತಾನಂದನ್, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು, ಬುದ್ದದೇವ್‌ರವರಿಗೆ ಈ ಗ್ರಾಮ ವಾಸ್ತವ್ಯ, ರೈತರೊಂದಿಗೆ ಸಂವಾದ ಎಂಬ ಈ ಪ್ರಜಾಪ್ರಭುತ್ವ ಪಾಪ ಗೊತ್ತೇ ಇಲ್ಲ!!!

ಕೃಷಿಯ ಸಮಸ್ಯೆಗಳೂ ರೈತರ ಆತ್ಮಹತ್ಯೆಗೆ ಕಾರಣಗಳೂ

ಇನ್ನು ಕೃಷಿಯ ನಿಜವಾದ ಸಮಸ್ಯೆಗಳಿಗೆ ಬರೋಣ. ಆರು ಉಪ ಸಮಿತಿ, ಒಂದು ಮುಖ್ಯ ಸಮಿತಿಗಳು ಸೇರಿ ಅಧ್ಯಯನ ಮಾಡಿ ಕೃಷಿ ನೀತಿಯನ್ನು ರೂಪಿಸಿದ ಸರ್ಕಾರಕ್ಕೆ ಕೃಷಿಯ ಸಮಸ್ಯೆಗಳ ಅರಿವು ಇನ್ನೂ ಆಗಿಲ್ಲವೇ? ಹಾಗಾದರೆ ಕೃಷಿ ನೀತಿ ಎಂದು ರೂಪಿಸಿದ್ದಾರಲ್ಲ ಅದಕ್ಕೂ ಕೃಷಿಯ ಸಮಸ್ಯೆಗಳಿಗೂ ಏನಾದರೂ ಸಂಬಂಧವಿದೆಯೋ ಇಲ್ಲವೋ? ಈಗ್ಗೆ ಒಂದೆರಡು ವಾರಗಳ ಹಿಂದೆ ಕೇಂದ್ರ ಸರ್ಕಾರ ಕೃಷಿ ಬಿಕ್ಕಟ್ಟಿನ ಪರಿಹಾರಕ್ಕೆ ಸಂಬಂಧಿಸಿದ ಮುಖ್ಯಮಂತ್ರಿಗಳ ಸಭೆಯಲ್ಲಿ ರಾಜ್ಯ ಸರ್ಕಾರ ಮಂಡಿಸಿದ್ದಾದರೂ ಏನು? ಈ ಎಲ್ಲಾ ಪ್ರಶ್ನೆಗಳೂ ಪುಂಖಾನು ಪುಂಖವಾಗಿ ಮೇಲೇಳುತ್ತವೆ.

ರೈತರು ಎತ್ತಿದ ಪ್ರಶ್ನೆಗಳೇನು?

ಇಷ್ಟೆಲ್ಲಾ ಪ್ರಶ್ನೆಗಳ ನಂತರವೂ ಸಂವಾದದಲ್ಲಿ ರೈತರು ಎತ್ತಿದ ಸಮಸ್ಯೆಗಳೇನು?

ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ರೈತರು ಬೆಳೆದ ಬೆಳೆಗಳಿಗೆ ಬೆಲೆ, ಲಾಭದಾಯಕ ಬೆಲೆ, ಬೆಂಬಲ ಬೆಲೆ, ಅದನ್ನು ಖಾತರಿಗೊಳಿಸುವ ವ್ಯವಸ್ಥೆ, ಮಾರುಕಟ್ಟೆಯ ಪ್ರಶ್ನೆ, ಇದರ ಜೊತೆಗೆ ಸಾಲ, ಬ್ಯಾಂಕ್, ಸಹಕಾರಿ ಹಾಗೂ ಖಾಸಗಿ ಸಾಲಗಳು ಅವುಗಳ ಬಡ್ಡಿ, ವಸೂಲಾತಿಯ ಪ್ರಶ್ನೆ, ಕೃಷಿ ಪರಿಕರ, ನೀರಾವರಿ ವಿದ್ಯುತ್ ಮೊದಲಾದ ಮೂಲಭೂತ ಸೌಕರ್ಯಗಳ ಪ್ರಶ್ನೆ, ವಿದ್ಯುತ್ ಸರಬರಾಜು ಹಾಗೂ ದರಗಳ ಪ್ರಶ್ನೆ ಇತ್ಯಾದಿ, ಇತ್ಯಾದಿ. ಇವೆಲ್ಲವೂ ದೇಶದ ಅತಿ ದೊಡ್ಡ ರೈತ ಸಂಘಟನೆಯಾದ ಅಖಿಲ ಭಾರತ ಕಿಸಾನ್ ಸಭಾ, ಅದರ ಕರ್ನಾಟಕ ಘಟಕವಾದ ಕರ್ನಾಟಕ ಪ್ರಾಂತ ರೈತ ಸಂಘ ಎತ್ತುತ್ತಿರುವ ಪ್ರಶ್ನೆಗಳೇ ಆಗಿವೆ. ಸಿಪಿಐ(ಎಂ) ಪಕ್ಷ ಹೊಸ ಆರ್ಥಿಕ ನೀತಿ ಜಾರಿಗೆ

ಸಾಲದ ಬಾಧೆ ತಾಳದೆ ನೇಣು ಬಿಗಿದುಕೊಂಡ ಹಬ್ಬಳ್ಳಿಯ ಕೃಷಿಕ ಲಕ್ಕಪ್ಪ ಲಕ್ಕಪ್ಪನವರ್ ದೇಹದ ಮುಂದೆ ರೋಧಿಸುತ್ತಿರುವ ಕುಟುಂಬವರ್ಗ



ಫೋಟೋ ಕೃಪೆ: ವಾರ್ತಾಭಾರತಿ

ಪುಟ 15 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಕೋ-ಜಾ ಸರ್ಕಾರದ ಗದ್ದುಗೆ ಪೀಠಕ್ಕೆ 300 ರೈತರ ಬಲಿ

ರೈತರ ಕಷ್ಟಗಳ ಪರಿಹಾರದ ಬಗ್ಗೆ ನಮ್ಮ ಸರ್ಕಾರ ಏನೇ ಭರವಸೆ ನೀಡಿದರೂ ಸಹ ಕರ್ನಾಟಕ ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ನಿಂತಿಲ್ಲ. ಬದಲಿಗೆ ಹೆಚ್ಚುತ್ತಲೇ ಬರುತ್ತಿವೆ. ಕಳೆದ 5 ವರ್ಷಗಳ ಅವಧಿಯಲ್ಲಿ ಸರ್ಕಾರದ ಅಂಕಿ ಸಂಖ್ಯೆಗಳೇ ಸಾರುತ್ತಿರುವಂತೆ 1,168 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಬಿಜೆಪಿ-ಜೆಡಿ(ಎಸ್)ಗಳ ಈ ಜೆಡಿಎಫ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ 16 ತಿಂಗಳ ಅವಧಿಯಲ್ಲಿ 300 ಕ್ಕೂ ಹೆಚ್ಚು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಬಯಲು ಸೀಮೆ, ಮಲೆನಾಡು, ಕರಾವಳಿ, ಎಂಬ ಬೇಧವೇನಿಲ್ಲ ಎಲ್ಲ ಕಡೆ ಎಲ್ಲ ಪ್ರದೇಶಗಳಲ್ಲೂ ರೈತರು ಆತ್ಮಹತ್ಯೆಗೆ ಮುಂದಾಗಿದ್ದಾರೆ. ಅಂದರೆ ಕೃಷಿ ಬಿಕ್ಕಟ್ಟಿನ ಆಳ ಅಗಲಗಳನ್ನು ಅರಿಯುವಲ್ಲಿ ಬಿಕ್ಕಟ್ಟಿನ ಮೂಲವನ್ನು ಗುರುತಿಸುವಲ್ಲಿ ನಮ್ಮ ಕೇಂದ್ರ ರಾಜ್ಯ ಸರ್ಕಾರಗಳು 'ಸಫಲವಾಗಿಲ್ಲ'. ಸಫಲವಾಗಿಲ್ಲ ಎಂದರೆ ಅದು ಅವರಿಗೆ ಬೇಕಿಲ್ಲ ಎಂಬುದು ಅದರ ನಿಜವಾದ ಅರ್ಥ.



ಸಾಲದ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ನವಲೂರಿನ ರೈತ ಶಿವಪ್ಪ ಯಲ್ಲಪ್ಪ ಇಟ್ಟಿಗಟ್ಟಿ ಮನೆಗೆ ತೆರಳಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಧಾರವಾಡ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಆರ್.ಎಚ್.ಐ. ನೇತೃತ್ವದಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಬಿ.ಎಸ್. ಸೊಪ್ಪಿನ ಹಾಗೂ ಬಿ.ಐ.ಈಳಿಗೇರ ಅವನ್ನೊಳಗೊಂಡ ಪಕ್ಷದ ನಿಯೋಗ ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿತು.



ಮುಖ್ಯಮಂತ್ರಿಗಳ ತವರೂರೇ ಆತ್ಮಹತ್ಯೆಗಳಿಗೂ ತವರು

ಮಾಜಿ ಪ್ರಧಾನಿಗಳು ತಮ್ಮನ್ನು ಸಿಂಹ ಎಂದೂ ತಮ್ಮ ಕುಮಾರ ಕಂಠೀರವನನ್ನು ಸಿಂಹದ ಮರಿ ಎಂದೂ ಗುಟುರು ಹಾಕಿದ್ದಾರೆ. ಆದರೆ ಅವರ ತವರು ಜಿಲ್ಲೆ ಹಾಸನವು ರೈತರ ಆತ್ಮಹತ್ಯೆಗಳಲ್ಲಿ ಪ್ರಥಮ ರ್‍ಯಾಂಕ್‌ಗೆ ಯಾಕೆ ಬಂದಿದೆ.

ಕಳೆದ 5 ವರ್ಷಗಳಲ್ಲಿ ಹಾಸನದಲ್ಲಿ 152 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಳಗಾವಿಯಲ್ಲಿ 111 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸನ್ಮಾನ್ಯ ಎಚ್.ಡಿ. ಕುಮಾರಸ್ವಾಮಿ ಯವರು ಮುಖ್ಯಮಂತ್ರಿಗಳಾದ ಮೇಲೆ ಬೀದರ್‌ನಲ್ಲಿ 25, ಬೆಳಗಾವಿಯಲ್ಲಿ 24, ಚಿಕ್ಕಮಗಳೂರು 23, ತುಮಕೂರಿನಲ್ಲಿ 18, ಶಿವಮೊಗ್ಗ 23, ದಾವಣಗೆರೆಯಲ್ಲಿ 15 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಇದೇನು ಅಂತಿಮ ಅಂಕಿ ಸಂಖ್ಯೆಗಳೇನಲ್ಲ ಏಕೆಂದರೆ ಈ ವರದಿ ಸಿದ್ದವಾಗುತ್ತಿರುವ ದಿನಗಳಲ್ಲೇ ಬೀದರ್, ಧಾರವಾಡ ಮುಂತಾದ ಜಿಲ್ಲೆಗಳಿಂದ ಕಬ್ಬು ಬೆಳೆಗಾರರು ಇತರ ಕೃಷಿಕರೂ ಸಾಲು ಸಾಲಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವರದಿಗಳು ಬರುತ್ತಲೇ ಇವೆ. ಇನ್ನು ಈ ಪತ್ರಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಚಿತ್ರ ಏನಾಗಿರುತ್ತದೋ ಏನೋ!

ಸಿ.ಎಂ. ಸಂವಾದ ಕಾರ್ಯಕ್ರಮಕ್ಕೆ ಬಹಿಷ್ಕಾರ, ಪ್ರತಿಭಟನೆಗೆ ನಿರ್ಧಾರ

ಜೂನ್ 14ರಂದು ಮುಖ್ಯಮಂತ್ರಿ ಕುಮಾರಸ್ವಾಮಿ ನಡೆಸಿದ 'ರೈತರೊಂದಿಗೆ ಸಂವಾದ' ಕಾರ್ಯಕ್ರಮವನ್ನು ಕರ್ನಾಟಕ ಪ್ರಾಂತ ರೈತ ಸಂಘವು ಬಹಿಷ್ಕರಿಸಿ ಪ್ರತಿಭಟನೆ ನಡೆಸಿತು.

ಅಲ್ಲದೆ, ರಾಜ್ಯ ಸರ್ಕಾರದ 'ಕೃಷಿ ನೀತಿ 2006'ನ್ನು ಮುಖ್ಯಮಂತ್ರಿಗಳ ಎದುರೇ ಹರಿದು ಹಾಕಲಾಯಿತು. ಈ ಸಂವಾದ ಕಾರ್ಯಕ್ರಮದಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಸಹ ಕಾರ್ಯದರ್ಶಿ ಯು.ಬಸವರಾಜ್ ಹಾಗೂ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಈ ಸಂವಾದದಲ್ಲಿ ಭಾಗವಹಿಸಿದ್ದರು. ಆದರೆ ಇಂತಹ ಕಾರ್ಯಕ್ರಮ ಆಯೋಜಿಸಿದ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಉದ್ದೇಶಪೂರ್ವಕವಾಗಿಯೇ ಸರ್ಕಾರವನ್ನು ಟೀಕೆಗೆ ಗುರಿ ಮಾಡುವವರನ್ನು ಮಾತನಾಡಿಸಲು ನಿರಾಕರಿಸಿದ್ದರು. ಕೇವಲ ಸರ್ಕಾರವನ್ನು ಹೊಗಳುವ, ಮುಖ್ಯಮಂತ್ರಿಗಳನ್ನು ಹೊಗಳಿ ಅಟ್ಟಕ್ಕೇರಿಸುವವರಿಗೆ ಮಾತ್ರ ಮಾತನಾಡಲು ಅವಕಾಶ ನೀಡಲಾಗಿತ್ತು.

ಸರ್ಕಾರದ ಈ ಪ್ರಯತ್ನವನ್ನು ತೀವ್ರವಾಗಿ ಖಂಡಿಸಿದ ಪ್ರಾಂತ ರೈತ ಸಂಘದ ಮುಖಂಡರು ಈ ಸಂವಾದಕ್ಕೆ ಬಹಿಷ್ಕಾರ ಹಾಕಿ ಪ್ರತಿಭಟಿಸಿದರು. ಅಲ್ಲದೆ ಜೂನ್ 25ರಂದು ಸರ್ಕಾರ ರೂಪಿಸಿರುವ ರೈತ ವಿರೋಧಿ ಕೃಷಿ ನೀತಿ ಕೈಬಿಡಬೇಕು ಮತ್ತು ರೈತಪರ ನೀತಿ ರೂಪಿಸಬೇಕೆಂದು ಆಗ್ರಹಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಪ್ರಾಂತ ರೈತ ಸಂಘ ಕರೆ ನೀಡಿದೆ.



ದಿನಾ ಸಾಯುವವರಿಗೆ ಅಳುವವರು ಯಾರು ?

ಪತ್ರಿಕೆಗಳಲ್ಲಿ ಖಾಯಂ ಆಗಿ ಪ್ರಕಟವಾಗುವ ಜ್ಯೋತಿಷ್ಯ, ವಾಸ್ತು, ಸಂಪಾದಕೀಯ, ಸಿನಿಮಾ, ಹಾಸ್ಯ, ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದ ಸ್ಥಿರ ಶೀರ್ಷಿಕೆಗಳು, ಅಂಕಣಗಳು ಇರುತ್ತವೆ.

ಈ ಸಾಲಿಗೆ ಮುಂದೆ ಮತ್ತೊಂದು ಶೀರ್ಷಿಕೆ ಸೇರಿಸಿಕೊಳ್ಳಬಹುದು. ಅದಕ್ಕೆ 'ಅನ್ನದಾತನ ಆತ್ಮಹತ್ಯೆ' ಅಂತ ಹೆಸರೂ ಕೊಡಬಹುದು.

ಇಂದು ಜಗಕ್ಕೆ ಅನ್ನ ನೀಡುವ ರೈತ ಹುಳು ಹಪ್ಪಟಗಳಿಂದ ಕಡೆಯಾಗಿ ಸಾಯುತ್ತಿದ್ದಾನೆ. ದಿನವೂ ಸಾಲು ಸಾಲಾಗಿ ಸಾವು ಸಂಭವಿಸುತ್ತಿವೆ. ದಿನವೂ ಸಾಯುವವರಿಗೆ ಅಳುವವರು ಯಾರು?

ಇದೇ ನಮ್ಮ ಬಹುತೇಕ ಪತ್ರಿಕೆಗಳ ಧೋರಣೆಯಾದಂತಿದೆ. ಆಗೀಗ ಆ ಕೃಷಿ ಬಿಕ್ಕಟ್ಟಿನ ಕುರಿತು ಲೇಖನ, ವರದಿಗಳು ಪ್ರಕಟಗೊಂಡಿದ್ದರೂ ದಿನ ನಿತ್ಯ ಸಂಭವಿಸುತ್ತಿರುವ ರೈತರ ಆತ್ಮಹತ್ಯೆಗಳ ಆಳಕ್ಕಿಳಿದು ಕಾರಣ ಹುಡುಕುವ ತುಡಿತ, ಸತ್ಯದ ಹುಡುಕಾಟದ ತಹ ತಹ ಹೆಚ್ಚಿನ ಪತ್ರಿಕೆಗಳಿಗೆ ಇಲ್ಲವೇ ಇಲ್ಲ.

ಹೆಚ್ಚಿನ ಸಂದರ್ಭದಲ್ಲಿ ಪೋಲೀಸ್ ಠಾಣೆಯಲ್ಲಿ ಆತ್ಮಹತ್ಯೆ ಕುರಿತು ಸಿಗುವ ಎರಡು ಸಾಲು, ಅಕ್ಷರಶಃ ಎರಡೇ ಸಾಲು ಸುದ್ದಿಯಿಂದಲೇ ಇವರು ಸಂತೃಪ್ತರು. ಕಳೆದ ಎರಡು ವಾರಗಳ ಪತ್ರಿಕೆಗಳನ್ನು ಒಮ್ಮೆ ತಿರುವಿ ಹಾಕಿದರೆ ಕಾಣುವ ಚಿತ್ರ ಆಘಾತಗೊಳಿಸುತ್ತದೆ. ಅದರಲ್ಲೂ ನಮ್ಮ ನಾಡಿನಲ್ಲಿ ಅತ್ಯಧಿಕ ಪ್ರಸಾರ ಹೊಂದಿರುವ ಎರಡು ಮುಂಚೂಣಿ ಕನ್ನಡ ಪತ್ರಿಕೆಗಳಲ್ಲೆ ಹೀಗೆ.

ಜೂನ್ 10 ರಂದು ಜಮಖಂಡಿಯ ಮುಂಡಗನೂರಿನ ಮಾಳಪ್ಪಮಲ್ಲಪ್ಪ ಕುಂಬಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರ ಬಗೆಗೆ ವಿಜಯ ಕರ್ನಾಟಕದಲ್ಲಿ ಪ್ರಕಟವಾಗಿರುವುದು ಮೂರೇ ವಾಕ್ಯ. ಅದೇ ದಿನ ಚಿಕ್ಕೋಡಿ ತಾಲ್ಲೂಕಿನ ಜೈನಾಪುರ ದುಂಡಪ್ಪ ಗಟ್ಟಿಗೆಪ್ಪ ಆತ್ಮಹತ್ಯೆ ಮಾಡಿಕೊಂಡರೆ ಅದು ಎರಡೇ ವ್ಯಾಕದ ಸುದ್ದಿ. ಆದರೆ ಅದರ ಪಕ್ಕದಲ್ಲಿ ರಾರಾಜಿಸುತ್ತಿದೆ, ಒಂದು ದೊಡ್ಡ ಫೋಟೋ - ಶ್ರೀ ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆಶ್ರಮದಲ್ಲಿ ಪಾಪ್‌ಗಾಯಕಿ ಉಷಾ ಉತುಫ್ ಅವರು ಹಾಡುತ್ತಿರುವ ಚಿತ್ರ. ಅದೂ 3 ಕಾಲಂ ನಷ್ಟಗಲ. ಹಾಸನದಲ್ಲಿ ಆಲೂಗಡ್ಡೆ ಬಿತ್ತನೆ ಬೀಜದ ಬೆಲೆ ಏರಿಕೆ ವಿರುದ್ಧ ರೈತರು ನಡೆಸಿದ ತೀವ್ರ ಪ್ರತಿಭಟನೆ ಇಲ್ಲಿ ಎರಡು ವಾಕ್ಯದ ಸುದ್ದಿ. ಅದರ ಪಕ್ಕದಲ್ಲೇ 'ಅದೇ ಗುರೂಜಿಯವರು 'ಬೆಂಗಳೂರು ಮಿರರ್' ಎಂಬ ಪತ್ರಿಕೆ ಬಿಡುಗಡೆ ಮಾಡುತ್ತಿರುವುದಕ್ಕೆ ಸಂಬಂಧಿಸಿದಂತೆ ಬಣ್ಣದ ಫೋಟೋಗಳು. ಅದೂ ಅಗತ್ಯವೇ ಇಲ್ಲದ್ದು. ಬಣ್ಣದ ಫೋಟೋ ಎರಡು ಮುದ್ರಣ ಗೊಂಡಿವೆ. 6 ಕಾಲಂನಷ್ಟು ಅಗಲಕ್ಕೆ ಅವು ಚಾಚಿಕೊಂಡಿವೆ.

ಚಿಕ್ಕಬಳ್ಳಾಪುರ ಸಮೀಪದ ಅಜ್ಜಾವರ ಗ್ರಾಮದ ನಾರಾಯಣಸ್ವಾಮಿ ಸಾಲಬಾಧೆ ತಾಳದೆ ಆತ್ಮಹತ್ಯೆ ಮಾಡಿಕೊಂಡರೆ, ಮೂಡಿಗೆರೆ ಸಮೀಪದ ಕೊಟ್ಟಕೆರೆಯ ಕಾಫಿ ಬೆಳೆಗಾರ ಕರುಣಾಕರ ಅವರು ಸಾಲದ ಹೊರೆ ತಾಳದೇ ನೇಣು ಬಿಗಿದುಕೊಂಡರೆ ಅವು ಒಂದು ಹುಲ್ಲು ಕಡ್ಡಿಯಷ್ಟು ಉದ್ದ ಸುದ್ದಿಯೂ ಅಲ್ಲ. ಚಿಕ್ಕಮಗಳೂರಿನ ಕಡೂರು ಬಳಿಯ ಕಬ್ಬಳಿ ಗ್ರಾಮದ ಲಂಬೋದರ, (30) ವಿಷ ಸೇವಿಸಿ ಸತ್ತರೆ, ಶಿರಾ ಸಮೀಪದ ಪಂಜಗಾನ ಹಳ್ಳಿಯ 36 ವರ್ಷದ ಪಿ.ಜಿ. ರಮೇಶ ಬೆಳೆ ವೈಫಲ್ಯದಿಂದ ಹೊಲದಲ್ಲೇ ನೇಣು ಹಾಕಿ ಕೊಂಡರೆ ಅವಕ್ಕೆ 3-4 ಸಾಲು ಮಾತ್ರ ಜಾಗ ಸಿಗುತ್ತದೆ ಇಲ್ಲಿ.

ಆದರೆ 'ಲೋಕ ಕಲ್ಯಾಣ'ಕ್ಕಾಗಿ ಶೃಂಗೇರಿಯ ಪೀಠಾಧೀಶ ಶ್ರೀ ಭಾರತೀ ತೀರ್ಥ ಸ್ವಾಮೀಜಿ ವಿಜಯಯಾತ್ರೆ ನಡೆಸುತ್ತಾ ಬಿಜಾಪುರಕ್ಕೆ ಬಿಜಯಂಗೈದರೆ ಅದು 3 ಕಾಲಂ ಆವರಿಸು ವಷ್ಟಗಲದ ಬಣ್ಣದ ಫೋಟೋ ಸಹಿತವಾದ ವಿವರವಾದ ವರದಿಯಾಗುತ್ತದೆ.



ಗುಲ್ಬರ್ಗಾ ಜಿಲ್ಲೆಯ ಹುಣಸಗಿಯ 30 ವರ್ಷದ ಮಲ್ಲಪ್ಪ ಬಸಪ್ಪ ಡಂಗಿ ಬೆಳೆ ಕೈಕೊಟ್ಟು ವಿಷ ಕುಡಿದು ಸತ್ತರೆ 2 ವಾಕ್ಯದ ಸುದ್ದಿ. ಅದೇ ಸುದ್ದಿಯ ಪಕ್ಕದಲ್ಲೇ ಬಿಜಾಪುರದಲ್ಲಿ ಯಾರೋ ಮೂರು ವರ್ಷದ ಗೌರಿ(ದನ)ಗೆ ಸೀಮಂತ ಮಾಡಿ 200 ಜನಕ್ಕೆ ಮೃಷ್ಟಾನ್ನ ಭೋಜನ ಬಡಿಸಿದರೆ ಅದರ ಬಣ್ಣದ ಚಿತ್ರ ಸಹಿತವಾದ ವರದಿ ಬರುತ್ತದೆ.

ಚಿತ್ರನಟ ರವಿಚಂದ್ರನ್ ಅವರಿಗೆ 47ನೇ ವರ್ಷದ ಹುಟ್ಟುಹಬ್ಬ ಬಂದರೆ 9 ವರ್ಣ ಚಿತ್ರವಿರುವ ಸಚಿತ್ರ ವರದಿ ಮುಕ್ಕಾಲು ಪುಟವನ್ನು ಆವರಿಸಿಕೊಳ್ಳುತ್ತದೆ. ಆದರೆ ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಯ ಸೂತಕದ ಛಾಯೆಯನ್ನು ಬಿಂಬಿಸುವ ಒಂದಾದರೂ ಚಿತ್ರ ಪತ್ರಿಕೆಗಳಲ್ಲಿ ಕಾಣಬರುವುದಿಲ್ಲ. ಬದುಕಿ ಉಳಿದವರ ದುಃಖ ದುಮ್ಮಾನಗಳಿಗೆ ಈ ಪತ್ರಿಕೆಗಳಲ್ಲಿ ಧ್ವನಿ ಎಲ್ಲಿ ಎಂದು ಹುಡುಕಬೇಕಾಗಿದೆ. ಯಾವುದೇ ವರದಿಗಾರರ ಇಲ್ಲಿಗೆ ಭೇಟಿಕೊಟ್ಟಿದ್ದಕ್ಕೆ ಈ ಪತ್ರಿಕೆಗಳಲ್ಲಿ ಯಾವ ಸಾಕ್ಷಿಯನ್ನೂ ದೊರೆಯುವುದಿಲ್ಲ. ಆದರೆ ಫ್ಯಾಷನ್ ಟೆಕ್ನಾಲಜಿಗೆ ಸಂಬಂಧಿಸಿದ ಎನ್.ಐ.ಎಫ್.ಟಿ.ಯು. ಸಂಸ್ಥೆ ನಡೆಸಿದ ಫ್ಯಾಷನ್ ಮೇಳಕ್ಕೆ ವರದಿಗಾರರು ಭೇಟಿ ಕೊಟ್ಟಿದ್ದಕ್ಕೆ ಖಚಿತ ಸಾಕ್ಷಿ ಇದೆ. ಏಕೆಂದರೆ ಈ ಷೋನಲ್ಲಿ ಪಾಲ್ಗೊಂಡ ಲಲನೆಯರ ವಯ್ಯಾರ, ಅವರ ಬಣ್ಣ ಬಣ್ಣದ ಉಡುಪುಗಳ ಥಳುಕು, ಅಲ್ಲಿನ ಕಣ್ಣು ಕೋರೈಸುವ ಬೆಳಕಿಗೆ ಈ ಪತ್ರಿಕೆಗಳಲ್ಲಿ ಧಾರಾಳ ಜಾಗ ಇದೆ. 'ಮನೆ ಮನೆಯು ಕತ್ತಲು, ಪ್ರತಿ ಕಣ್ಣು ಕಣ್ಣೀರು' ಎಂಬ ಹಾಡನ್ನು ನೆನಪಿಸುವ ರೈತರ ಆತ್ಮಹತ್ಯೆಗಳನ್ನು ಹಾಕಿದರೆ ಏನು ಚೆನ್ನ ಎಂಬುದೇ ಈ ಪತ್ರಿಕೆಗಳ ಧೋರಣೆ?





ಕೆ.ನೀಲಾ

ಉಳ್ಳವರ ಹಗೆಯ ತೆಗೆವನ್ನಬರ.....

ಇಂಜಿನಿಯರ್ರು ತದೇಕಚಿತ್ತದಿಂದ ಕಾರು ಓಡಿಸುತ್ತಿದ್ದರು. ಅಂಥ ಯಾವ ಅಪಾಯ ತಮಗೆ ತಟ್ಟುವ ಆತಂಕ ಕಾಡುತ್ತಿಲ್ಲ ಎಂಬಂತೆ "ಹಳ್ಳಿ ಖೇಡ್ ಸಕ್ರಿ ಕಾರಖಾನಿದಾಗ ನಾವು ಸೀನಿಯರ್ ಶೇರ್ ಹೊಲ್ಡರ್. ನಮ್ಮ ಕಬ್ಬ ಜಲ್ದಿ ಹೋಗ್ತಾದ ಅಂತ ಭರೋಸಾ ಅದಾ" ಹೇಳಿದರು. ಆದರೆ...........

ಮಾರ್ಚ್ ತಿಂಗಳ ಬಿಸಿಲು-ಕೈಯಲ್ಲಿ ಉರಿವ ಪಂಜು ಹಿಡಿದು ಉಧೋ ಉಧೋ ಎನ್ನುತ್ತಿತ್ತು. ಬಸವಣಕಲ್ಯಾಣ ತಾಲ್ಲೂಕಿನ ಖೇರ್ಡಾ ಎಂಬ ಹಳ್ಳಿಯ ಅಭಿಮನ್ಯುವ್ಯೂಹದಂತ ಹಾದಿ ಸೀಳುತ್ತಾ ನಮ್ಮ ಪುರಾತನ ಮಾಡೆಲ್ಲಿನ ಅಂಬಾಸಿಡರ್ ಕಾರು ನುಗ್ಗುತ್ತಲೇ ಇತ್ತು. ಸಾರಥಿಯಾದ ಸಹಾಯಕ ಇಂಜನಿಯರ್‌ರು ಫಟ್ಟಂತ ಕಾರು ನಿಲ್ಲಿಸಿ ಬಲಕ್ಕೆ ಬೆರಳು ಮಾಡಿ'ಅಕ್ಕಾರೇ, ನೋಡ್ರಿ, ಅದೇ ನಮ್ಮ ಹೊಲಾ, ಈ ಬಾರಿ ಇಪ್ಪತ್ತೆಕ್ರಿ ಪೂರಾ ಕಬ್ಬ ಹಾಕಿನ್ರೀ. ಚಲೋರೇಟ್ ಬಂದ್ರ ಟೈಮಿನ ಮ್ಯಾಲು ಕಬ್ಬ ಹೋದ್ರ ಗೆದ್ದಂಗ' ಹೆಮ್ಮೆಯಿಂದ ಹೇಳಿದರು. ಸಣ್ಣ ಗಾಳಿ ಸುಳಿದಾಗೊಮ್ಮೆ ಹರಿತ ತುದಿಯ ಕಬ್ಬಿನವಾಡಿಯು ಸರ್ರ್ರ್ರ ಎಂದು ಶಬ್ಧ ಹೊರಡಿಸುತ್ತಿತ್ತು. ಅಗಾಧ ಸಿಹಿಯೊಡಲ ಕಬ್ಬು ಸೊಕ್ಕಿ ಬೆಳೆದಿತ್ತು. ಒಕ್ಕಲುತನದಲ್ಲಿ ತೀವ್ರ ಆಸಕ್ತಿ ಇರುವ ಇಂಜನಿಯರ್ ರವಿವಾರ ಮತ್ತು ರಜೆ ದಿನಗಳಲ್ಲಿ ಧಾವಿಸಿ ಬರುವುದು ಈ ಹಳ್ಳಿಯ ಹೊಲಕ್ಕೇ. ಬೀದರ್ ಜಿಲ್ಲೆಯಲ್ಲಿ ಕಬ್ಬು ಅರೆಯುವ ಮೂರು ಕಾರ್ಖಾನೆಗಳಿವೆ. 'ಈ ಸಲ ರೇಟ್ ಬಂದಾತು ಬಿಡ್ರಿ..' ನಾನು ಅಳುಕುತ್ತಲೇ ಹಾರಿಕೆಯ ಮಾತಾಡಿದೆ. ಆದರೆ ಮನದ ಮೂಲೆಯಲ್ಲಿ ಮಾತ್ರ ಉದಾರೀಕರಣ, ಜಾಗರೀಕರಣ ಒಡ್ಡಿದ ಅಪಾಯದ ಗಂಟೆ ಹೊಡೆಯುತ್ತಿತ್ತು. ಹಿಂದಿನ ಎನ್.ಡಿ.ಎ. ಸರ್ಕಾರ ಪಾಕಿಸ್ತಾನದಿಂದ ಸಕ್ಕರೆ ಆಮದು ಮಾಡಿಕೊಳ್ಳಲು ಪರವಾನಿಗಿ ಕೊಟ್ಟಾಗಿಂದ ದೇಶದ ಕಬ್ಬು ಬೆಳೆಗಾರರು ಮತ್ತೂ ಸಂಕಟದ ಕುಂಡದಲ್ಲಿ ಬೇಯುತ್ತಿರುವುದು ಯಾರಿಗೆ ಗೊತ್ತಿಲ್ಲ. ಉದಾರೀಕರಣಕ್ಕೆ ರತ್ನಗಂಬಳಿ ಹಾಸಿದ ವಾಜಪೇಯಿಯವರ ಪಕ್ಷವಾದ ಬಿಜೆಪಿಯೇ ಈಗ ರಾಜ್ಯದಲ್ಲಿ ಹಿತ್ತಲು ಬಾಗಿಲಿನಿಂದ ಅಧಿಕಾರದ ಗದ್ದುಗೆಯರ್ಧಕ್ಕೇರಿದೆ.

''ಯಾನೋ ಚಿಂತಿ ಮಾಡಲತಿರಲ್ಲ ಅಕ್ಕಾರೇ...?'' ಇಂಜಿನಿಯರ್ ದನಿಗೆ ಹೊರಳಿದೆ. "ಯಾನಬೀ ಇಲ್ಲ. ಕಬ್ಬಿಗೆ ರೇಟ್ ಬರಂಗಯಾನರೇ ಧಡ ಫಡ ಮಾಡಬೇಕಾಗ್ತದ. ಸರ್ಕಾರದ ನೀತಿ ಒಕ್ಕಲಗೇರ ಪರ ಇಲ್ಲ. ಟನ್ನಿಗೆ ಎಂಟ ನೂರ ರೂಪಾಯಿ ಅಂದ್ರ ಖರೆ ರೈತರು ಬೀದಿಗೆ ಬರ್ತಾರ. ಸೈಡ್ ಒಕ್ಕಲತನ ಮಾಡಾ ನಿಮ್ಮಂಥೋರಿಗೆ ಹ್ಯಾಂಗರೇ ನಡೀತದ. ರೇಟ್ ಹೆಚ್ಚ ಆದಾತು ಅಂತ ಕನಸ ಕಾಣಲತೀರಿ. ಬೆಳದೋಟು ಕಬ್ಬ ಅರಿಲಾಕ ಯಾನೂ ಪೂರ್ವಯೋಜನಾ ಆಗಿಲ್ಲ. ಈ ಸಾರಿನೂ ರೈತರಿಗೆ ಪರೇಶಾನಿ ಕಟ್ಟಿಟ್ಟ ಬುತ್ತಿ ಯಾನೋ ಅನಸ್ತದ".

ಇಂಜನಿಯರ್ರು ತದೇಕಚಿತ್ತದಿಂದ ಕಾರು ಓಡಿಸುತ್ತಿದ್ದರು. ಅಂಥ ಯಾವ ಅಪಾಯ ತಮಗೆ ತಟ್ಟುವ ಆತಂಕ ಕಾಡುತ್ತಿಲ್ಲ ಎಂಬಂತೆ 'ಹಳ್ಳಿ ಖೇಡ್ ಸಕ್ರಿ ಕಾರಖಾನಿದಾಗ ನಾವು ಸೀನಿಯರ್ ಶೇರ್ ಹೊಲ್ಡರ್. ನಮ್ಮ ಕಬ್ಬ ಜಲ್ದಿ ಹೋಗ್ತಾದ ಅಂತ ಭರೋಸಾ ಅದಾ' ಹೇಳಿದರು.

ಇಡೀ ದಿನ ಸಭೆ, ಅದು ಇದು ಅಂತ ಮುಗಿಸಿ ಕಲ್ಬುರ್ಗಿಗೆ ಧಾವಿಸಿದೆ. ಮುಂಜಾನೆದು ಪತ್ರಿಕೆ ತಿರುವಿದರೆ ಎದೆ ಝಲ್ಲೆನ್ನುವಂಥ ಸುದ್ದಿ! ಕಬ್ಬು ಬೆಳೆಗಾರನ ಆತ್ಮಹತ್ಯೆ!! ಮತ್ತೆರಡು ದಿನಗಳು ಸರಿದವು. ಮತ್ತೆ ಅಂಥದ್ದೇ ಇನ್ನೊಂದು ಸುದ್ದಿ. ಬೀಯಕ್ಕೆ ಭತ್ತವಿಲ್ಲದೆ ಬಳಲುವ ರೈತನ ಮನೆಗೆ ಮಾರಿ ಹೊಕ್ಕಿತ್ತು. ಬೆವಸಾಯದ ಲಾಭ ಸುಲಿವ ಕಾರಖಾನೆ ಮಾಲೀಕರು ಮತ್ತು ಸರಕಾರ ಮೋಜಿನಲ್ಲಿ ಮೆರೆಯುತ್ತಿತ್ತು. ಅಕಟಕಟಾ ಗುಹೇಶ್ವರನೆತ್ತ ಹೋಗುವುದೀಗ? ನನ್ನ ಪ್ರಶ್ನೆಗೆ ಉತ್ತರಿಸಲು ಈಗ ಅಲ್ಲಮ ಪ್ರಭು ಇಲ್ಲ.

ಒಂದು ಬೆಳಗು ಮುಂಜಾನೆ ತಾಳಮಡಗಿಯಿಂದ ಗೆಳತಿ ಅಂಬುಬಾಯಿ ಫೋನು ಮಾಡಿದಳು. 'ಕಬ್ಬಿನ ಸಾಲಾ ಮಾಡಿದ ರೈತನೊಬ್ಬ; ಹೊಲದಾಗ ಕಬ್ಬು ಒಣಗಿ ಹೋಗಾದು ನೋಡಿ, ಏಟ್ ಕೇಳಕೊಂಡರೂ, ಕಾರಖಾನಿದವ್ರು ಕಟಾವ್ ಮಾಡಿ ತಗೊಂಡು ಹೋಗಲಾರದಕ್ಕ ಎದಿ ಒಡದು ಹುಣಚಿ ಮಾರಕ್ಕ ಫಾಸಿ(ನೇಣ) ಹಾಕ್ಕೊಂಡಾನ. ಸಂಘದ ಹೆಣಮಕ್ಕಳು ಮತ್ತ ಊರ ಮಂದಿ ರಾಜ್ಯದ ಹೆದ್ದಾರಿ ಬಂದ್ ಮಾಡ್ಯಾರ....' ಅಂತ.



ಮಧ್ಯಾಹ್ನದ ತನಕ ಪ್ರಕ್ಷುಬ್ಧ ವಾತಾವರಣವಿತ್ತು. ಕಾನಸ್ಟೆಬಲ್ಲುಗಳ ಪಡೆ ಕೈ ಕೈ ಹಿಡಿದು ನಿಂತಿತ್ತು. ಕೊಂಚವೇ ಮೇಲಿನ ಇನ್ಸ್‌ಪೆಕ್ಟರ್‌ಗಳು. ಹಣೆಯ ಬೆವರು ಒರೆಸಿಕೊಳ್ಳುತ್ತ ಬಾರು ಬಾರಿಗೆ ಸೊಂಟದ ಬೆಲ್ಟು ಬಿಗಿಗೊಳಿಸುತ್ತಾ ಠಳಾಯಿಸುತ್ತಿದ್ದರು. ಸತ್ತ ರೈತನ ಮನೆಗೆ 1 ಲಕ್ಷ ಪರಿಹಾರ ರವಾನಿಸುವ ಘೋಷಣೆಯಾಯಿತು. ಜನ ಇನ್ನೂ ಪಟ್ಟು ಹಿಡಿದಾಗ ಒಣಗುವ ಮೊದಲೇ ಕಬ್ಬು ಒಯ್ಯುವ ಆಶ್ವಾಸನೆ ಸಿಕ್ಕಿತು ಜನ ಚದುರಿದರು. ಜಗತ್ತಿನ ಚರಾಚರ ಜೀವಿಗಳ ಹೊಟ್ಟೆ ತುಂಬಿಸುವ ರೈತನ ಜೀವದ ಬೆಲೆ 1 ಲಕ್ಷ!

ದಿನಾಂಕ:22ರಂದು ರಾಜ್ಯದ ಆಶ್ವಾಸನಾ ಪ್ರವೀಣ, ಗಿಮಿಕ್ ರಾಜನಾದ ಮುಖ್ಯಮಂತ್ರಿಗಳು ಹುಮನಾಬಾದಿಗೆ ಬಿಜಯಂಗೈದರು. ಜನವಾದಿ ಮಹಿಳಾ ಸಂಘಟನೆ ಮತ್ತು ಕರ್ನಾಟಕ ಪ್ರಾಂತ ರೈತ ಸಂಘಗಳ ನೇತೃತ್ವದಲ್ಲಿ ರೈತ ಮಹಿಳೆಯರ ದಂಡು ಘೇರಾವ್ ಮಾಡಿತು. ಪ್ರತಿ ಎಕರೆ ಕಬ್ಬಿಗೆ ಪರಿಹಾರ ಧನ 25 ಸಾವಿರ ಕೊಡಲು ಒತ್ತಾಯಿಸಲಾಯಿತು. ಕಬ್ಬು ಅರೆಯುವ ಸಾಮರ್ಥ್ಯ ಹೆಚ್ಚುಗೊಳಿಸಲು ಪೂರ್ವಯೋಜನೆ ಮಾಡಲಾರದ್ದಕ್ಕೆ ಉತ್ತರ ಕೊಡಿ ಎಂದು ಕೇಳಿದಾಗ ಪಕ್ಕದಲ್ಲೇ ನಿಂತ ಕೃಷಿ ಮಂತ್ರಿ ಬಂಡೆಪ್ಪ ಕಾಸೆಂಪುರ ನಿರುತ್ತರದಿಂದ ಬಂಡೆಗಲ್ಲಂತಾದರು. "ಇಡೀ ರಾಜ್ಯದಲ್ಲಿ 20 ಲಕ್ಷ ಟನ್‌ದಷ್ಟು ಕಬ್ಬು ಗದ್ದೆಯಲ್ಲೇ ಒಣಗಿ ಹೋಗುತ್ತಿದೆ. ಇದಕ್ಕೆ ಪರಿಹಾರವೇನು? ಬೀದರ್ ಜಿಲ್ಲೆಯೊಂದರಲ್ಲಿಯೇ 2 1/2 ಲಕ್ಷ ಟನ್ ಕಬ್ಬು ಸೊರಗುತ್ತಿದೆ. ನಿಮಗೆಲ್ಲ ಸಿಹಿ ಉಣಿಸುವ ರೈತನ ಬದುಕಿಗೆ ಕಹಿಕೊಡಲು ನಿಮಗ್ಯಾವ ಹಕ್ಕಿದೆ...?' ಎಂದು ಜನ ಮುಗಿಬಿದ್ದು ಕೇಳುವಾಗ ಪ್ರೇತ ಕಳೆಯಂಥ ಮುಖಭಾವ ಹೊತ್ತ ಕುಮಾರಸ್ವಾಮಿ, 'ಪ್ಯಾಕೇಜ್ ಘೋಷಣೆ ಮಾಡೀವಿ' ಎಂದು ನುಸುಳಿಕೊಳ್ಳಲು ಯತ್ನಿಸಿದರು. ಪ್ರತಿಭಟನೆಯ ನಡುವೆ ಒಬ್ಬ ಶಾಸಕ ಇಬ್ಬರು ಮಂತ್ರಿಗಳು ಕಂಗಾಲಾದರೂ, ಬಂಡತನಕ್ಕೆ ಬಿದ್ದಂತೆ ನಾಚಿಗ್ಗೇಡಿ ಮುಖಹೊತ್ತು ನಿಂತಿದ್ದರು.

ಈ ನಾಚಿಗ್ಗೇಡಿ ಸಂಸ್ಕೃತಿಯಲ್ಲಿ ಅಸಹ್ಯ ಪಾತ್ರ ವಹಿಸಿದವರು ಕಾರಖಾನೆಯ ಮಾಲೀಕರೂ ಹೌದು. ಶ್ರೀಮಂತರ, ತಮ್ಮ ಹಿಂಬಾಲಕರ ಕಬ್ಬು ಕಟಾವ್ ಮಾಡಿ, ಸೀನಿಯರ್ ಶೇರುದಾರರಾದ ಸಾಮಾನ್ಯರ ಬಡ ರೈತರ ಕಬ್ಬು ಹೊಲದಲ್ಲೇ ಒಣಗಿಸಿದ ದೂರಾಚಾರದ ಕಾರಖಾನೆ ಮಾಲೀಕರು ಹೊರ ರಾಜ್ಯದ ಕಬ್ಬಿಗೂ ಮಣೆ ಹಾಕಿರುವುದು ದ್ರೋಹವಲ್ಲದೆ ಮತ್ತೇನು? ಈ ಕಾರಖಾನೆಗಳು ತನಿಖೆಗೆ, ಶಿಕ್ಷೆಗೆ ಯೋಗ್ಯವಾಗಲೇಬೇಕಲ್ಲ. ಅಷ್ಟು ಮಾತ್ರವಲ್ಲ, ಶೋಷಿಸುವಲ್ಲಿ ಪಾಲುದಾರರಾದ ಆಡಳಿತ ವರ್ಗವೇ 'ಕಬ್ಬು ಬೆಳೆಗಾರರನ್ನು ಉಳಿಸಿ' ಎಂಬ ನಾಟಕದ ರ್‍ಯಾಲಿಯೂ ನಡೆಸಿರುವುದು ಅಪಹಾಸ್ಯದ ಪ್ರಕರಣವೇ ಸರಿ. "ಇದ್ದಕ್ಕಿದ್ದಂತೆ ಕಬ್ಬು ಅರೆಯುವುದಿಲ್ಲ ಕಾರಖಾನೆ ಮುಚ್ಚುತ್ತೇನೆ" ಎಂದ ಮಾಜಿ ಮಂತ್ರಿ ಗುರುಪಾದಪ್ಪ ನಾಗಮಾರಪಳ್ಳಿ ಅಪ್ಪಟ ರೈತ ವಿರೋಧಿಯಾಗಿ ವಿಜೃಂಭಿಸಿದರು.

ಹೋರಾಟ ಮುಗಿಸಿ ನಿಟ್ಟುಸಿರು ಬಿಡುವ ಮುನ್ನವೇ ಗೆಳತಿಯ ಫೋನು ಎಂಜಿನಿಯರ್ ಹೆಂಡತಿ. ಯಾಕೆಂದು ಅವರ ಬಂಗಲೆಗೆ ಧಾವಿಸಿದರೆ ಇಪ್ಪತ್ತರಲ್ಲಿ ಹತ್ತೆಕರೆ ಕಬ್ಬು ಒಣಗಿ ಎಂಜಿನಿಯರ್ ಸಾಹೇಬರು ಎದೆ ಒಡೆದು ಹಾಸಿಗೆಯಲ್ಲಿ ನಿಸ್ತೇಜರಾಗಿ ಮಲಗಿದ್ದರು. ಸೈಡ್ ಒಕ್ಕಲತನವೂ ಮೂಲೆ ಹಿಡಿವ ಸ್ಥಿತಿ! 'ಎದಿ ಒಡಿಬ್ಯಾಡ್ರಿ, ಗಟ್ಟಿ ಇದ್ರ ಒಕ್ಕಲತನ ಖಡಿ ಮಾಡಲಾಕ ಆಗ್ತದ. ಬಿತ್ತಾದು ಬೆಳ್ಯಾದು ಇಂಜಿನಿಯರ್‌ಗಿರಿಕ್ಕಿಂತ ಕಠಿಣ ಅಂತ ನಿಮಗೇ ಖಿನಾ ಅದಾ. ನಿಮ್ಮಂಥೋದು ಬಡ ರೈತರ ಸಂಗಾಟ ನಿಂತ್ರ ಅವ್ರನೂ ಸಾಯದಿಲ್ಲ. ನೀವ್‌ನೂ ಹಿಂಗ್ ಹಾಸಿಗೆ ಹಿಡ್ಯಾದಿಲ್ಲ. ಎಲ್ರೂ ಸೇರಿ ಸರಕಾರಕ್ಕ ಹಿಡದ ಕೇಳಾಣಾ. ನಿರಾಶ ಆಗೋದು ಬ್ಯಾಡ ...." ಅಂತ ಅನ್ನುವಾಗಲೂ ಯಾಕೋ ಎದೆಯ ಮೂಲೆಯಲ್ಲಿ ಕಂಬನಿ ತೊಟ್ಟಿಕ್ಕುತ್ತಿತ್ತು. ರೈತ ಚಳುವಳಿ ದುಡಿವ ವರ್ಗದ ಚಳುವಳಿ ದುರ್ಬಲವಾಗಿರುವ ಈ ಕೆಂಪು ಭೂಮಿಯಲ್ಲಿ ಇನ್ನು ಎಷ್ಟು ಅನಾಹುತಗಳು ಘಟಿಸಬೇಕು...? ಜನ ಚಳುವಳಿ ಸೆಟೆದು ನಿಂತರೆ ಮಾತ್ರ ಸ್ವಾಭಿಮಾನದ ಬದುಕು. ಇಲ್ಲದಿದ್ದರೆ ಬೆವಸಾಯ (ಕೃಷಿ) ಘೋರವೇ ಸರಿ.

ಸುರಿವ ರಾಶಿ ಬಿಸಿಲಿಗೆ ಛತ್ರಿ ಹಿಡಿದು ಅಭ್ಯಾಸವಿಲ್ಲದ್ದರಿಂದ ಒಬ್ಬಳೇ ಬಿಸಿಲ ಝಳ ತಳ್ಳುತ ಬಸ್‌ಸ್ಟ್ಯಾಂಡ್ ತಲುಪಿದೆ. ಗಂಟು ಮೂಟೆ ಹೊತ್ತ ಜನ ಬಸ್ ಸ್ಟ್ಯಾಂಡಿನುದ್ದಕ್ಕೂ ಹರಡಿಕೊಂಡಿದ್ದರು. ಗೇಣು ಹೊಟ್ಟೆಯನ್ನು ಅಂಗೈಯಲ್ಲಿಟ್ಟು ಕೊಂಡು ತುತ್ತು ಕೂಳರಸಿ ಹೊರಟಿದ್ದರು. ಕೂಳು ಬೆಳೆವ ರೈತ ನೇಣಿಗೆ ಸಜ್ಜಾಗುತ್ತಿದ್ದಾನೆ. ಎರಡು ವರ್ಷದಲ್ಲಿ ಬೀದರ್ ಜಿಲ್ಲೆಯೊಂದರಲ್ಲೇ 47 ಜನ! ರೈತರು ನೇಣಿಗೆರಿದ್ದಾರೆ. 1991ರಿಂದ ಇಡೀ ದೇಶದಲ್ಲಿ 9.26 ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ-ಇಲ್ಲ ಸರ್ಕಾರದ ಹೊಸ ಆರ್ಥಿಕ ನೀತಿಯ ಕಾರಣವಾಗಿ ಕೊಲ್ಲಲ್ಪಟ್ಟಿದ್ದಾರೆ. ಈ ವರ್ಷದ ಆರ್ಥಿಕ ವೃದ್ಧಿಯ ದರ ಶೇ.9.4ರಷ್ಟು ಎಂದು ಪೇಠ ಎತ್ತಿ ಬೀಗುವ ಪ್ರಧಾನಿ ಮನಮೋಹನ ಸಿಂಗರು ಇದು ಯಾರ ಆರ್ಥಿಕ ವೃದ್ಧಿ ಎಂಬುದಕ್ಕೆ ಉತ್ತರ ಕೊಡುವರೇ....?

ಕಿಟಕಿಯಾಚೆಗೆ ದಿಟ್ಟಿ ಚೆಲ್ಲಿದೆ. ಬಸ್ಸಿನ ವೇಗಕ್ಕೆ ಕೆಮ್ಮಣ್ಣು ಹೊಗೆಯಂತೆ ಮೇಲೇಳುತ್ತಿತ್ತು. ಅಕ್ಕಮಹಾದೇವಿಯ ವಚನವೊಂದು ಬೆಳ್ಳಿಯಂತೆ ಹೊಳೆವ ಮುಗಿಲಿಗೆ ಅಕ್ಷರ ಕೊರೆಯುತ್ತಿತ್ತು.

ಉಳ್ಳವರ ಹಣೆಯ ತೆಗೆವನ್ನ ಬರ
ಬಡವರ ಹರಣ ಹೋದಂತಾಯಿತು...

> ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿರ್ದಡೆ ಆ
> ಬೆವಸಾಯದ ಘೋರವೇತಕಯ್ಯ?
> ಕ್ರಯ ವಿಕ್ರಯವ ಮಾಡಿ ಮನೆಯ ಸಂಚ ನಡೆಯದನ್ನಕ್ಕ
> ಆ ಕ್ರಯ ವಿಕ್ರಯದ ಘೋರ ವೇತಕಯ್ಯಾ?.....................
> ಭಕ್ತನಾಗಿ ಭವಂ ನಾಸ್ತಿಯಾಗದಿರ್ದಡೆ;
> ಆ ಉಪದೇಶವ ಕೊಟ್ಟ ಗುರು, ಕೊಂಡ ಶಿಷ್ಯ,
> ಇವರಿಬ್ಬರ ಮನೆಯಲ್ಲಿ 'ಮಾರಿ' ಹೋಗಲಿ,
> ಗುಹೇಶ್ವರನೆಂಬವನತ್ತಲೇ ಹೋಗಲಿ
>
> **- ಅಲ್ಲಮಪ್ರಭು**

ಕ್ಯಾತೆ

ಗಾಳಿ ಸುದ್ದಿ
ಬೆಟ್ಟಿಂಗ್ ಜಾಲ ಪತ್ತೆ

ವಿಶ್ವಕಪ್ ಕ್ರಿಕೆಟ್ ಬೆಟ್ಟಿಂಗ್ ಜಾಲದ ನಂತರ ಇದೀಗ ಇನ್ನೊಂದು ಭಾರಿ ಬೆಟ್ಟಿಂಗ್ ಜಾಲ ಪತ್ತೆಯಾಗಿದೆ. ವಿಶ್ವಕಪ್‌ನಲ್ಲಿ ಭಾರತ ಹೊರ ಬಿದ್ದಿದ್ದರಿಂದ ಬೆಟ್ಟಿಂಗ್ ದಂಧೆಗೆ ಅಂಥ ಹೆಚ್ಚಿನ ವ್ಯಾಪಾರವಾಗಿಲ್ಲದೆ ಇರಬಹುದು. ಆದರೆ ಈಗ ರಾಜ್ಯದಲ್ಲಿ ಅತ್ಯಂತ ಕುತೂಹಲದ ವಿದ್ಯಮಾನದ ಬಗ್ಗೆ ಬೆಟ್ಟಿಂಗ್ ದಂಧೆ ಜೋರಾಗಿದೆ.


ಸನ್ಮಾನ್ಯ ಉಪಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿ ಯಾಗುತ್ತಾರೋ ಇವಲ್ಲವೋ ಎಂಬ ವಿಚಾರವಾಗಿ ಭಾರೀ ಬೆಟ್ಟಿಂಗ್ ನಡೆಯುತ್ತಿದೆ. ಅವರಿಗೆ ಮುಖ್ಯಮಂತ್ರಿ ಹುದ್ದೆ ತಪ್ಪಿದರೆ ಜೆಡಿ(ಎಸ್) ನವರಿಂದ ತಪ್ಪುತ್ತದೋ ಬಿಜೆಪಿಯುವರಿಂದಲೋ ಎಂಬ ವಿಚಾರ ವಾಗಿಯೂ ಉಪ ಬೆಟ್ಟಿಂಗ್ ನಡೆಯುತ್ತಿದೆ ಎಂಬ ವರದಿಗಳು ಬರುತ್ತಿವೆ.

ನಿರುದ್ಯೋಗಿ ಮಠ ಸ್ಥಾಪನೆ : ಪೂಜ್ಯ ಶ್ರೀ ಶ್ರೀ ನಿರುದ್ಯೋಗಾನಂದ ಸ್ವಾಮಿಯವರ ನೇತೃತ್ವದಲ್ಲಿ 'ನಿರುದ್ಯೋಗಿ ಮಠ' ಸ್ಥಾಪನೆಯಾಗಿದೆ. ಪ್ರಸ್ತುತ ಕಲಬೆರಿಕೆ ಸರ್ಕಾರ ಮುಂದಿನ ಬಜೆಟ್‌ನಲ್ಲಿ ಮಠಮಾನ್ಯಗಳಿಗೆ ಇನ್ನೂ ಹೆಚ್ಚಿನ ದಾನ ಧರ್ಮಗಳನ್ನು ಮಾಡುವ ಸೂಚನೆ ಇದೆ. ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಯಾವ ಕಾರ್ಯಕ್ರಮಗಳೂ ಕಾಣುತ್ತಿಲ್ಲ. ಆದ್ದರಿಂದ ಮಠ ಸ್ಥಾಪನೆ ಅಗತ್ಯವಾಯಿತೆಂದು ಪೂಜ್ಯ ಶ್ರೀ ಶ್ರೀ ನಿರುದ್ಯೋಗಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಲಾಟರಿ ನಿಷೇಧದಿಂದ ನಿರುದ್ಯೋಗಿಗಳಾದವರಿಗಾಗಿ ಶ್ರೀ ಶ್ರೀ ಲಾಟರೀಶ್ವರ ಭಾರತಿಯವರ ನೇತೃತ್ವದಲ್ಲಿ 'ಲಾಟ್ರಿ ಮಠ' ಸ್ಥಾಪನೆ ಮಾಡಿದ್ದಾರೆ. ಲಾಟ್ರಿ ನಿಷೇಧವಾಗಿದ್ರೂ ಲಾಟರಿಗೊಬ್ಬ ಮಂತ್ರಿ ಇರುವುದನ್ನು ಮಠ ಸ್ವಾಗತಿಸಿದೆ. ಲಾಟ್ರಿ ಮಠ ಉದ್ಘಾಟನೆಗೆ ಲಾಟ್ರಿ ಮಂತ್ರಿಯವರನ್ನು ಕರೆಯಲು ಮಠ ನಿರ್ಧರಿಸಿದೆ.

ಸರಾಯಿ ನಿಷೇಧದಿಂದ ನಿರುದ್ಯೋಗಿಗಳಾದವರಿಗಾಗಿ ಶ್ರೀಶ್ರೀ ನಿಷೇದಾನಂದ ಗುರೂಜಿಯವರ ನೇತೃತ್ವದಲ್ಲಿ ಪ್ರತ್ಯೇಕ ಮಠ ಸ್ಥಾಪನೆಯಾಗಿದೆ. ಸರ್ಕಾರ ವಿವಿಧ ಮಠಗಳಿಗೆ 'ಪ್ರಸಾದ' ಹಂಚುವುದರಿಂದ ಪ್ರತ್ಯೇಕ ಮಠಗಳಾದಷ್ಟೂ ಅನುಕೂಲವೆಂದು ಪೂಜ್ಯ ಶ್ರೀಗಳು ತಿಳಿಸಿದ್ದಾರೆ.

ವಿ.ಶ್ರೀನಿವಾಸ, ಶಿವಮೊಗ್ಗ



ಎದೆ ಕುದಿ ಹೊತ್ತುಬಂದರು ರಾಜಧಾನಿಗೆ ದಲಿತರು


ದಲಿತರ ಬೃಹತ್ ಧರಣಿ

ಶೋಷಿತರಲ್ಲೇ ಅತ್ಯಂತ ಹೆಚ್ಚು ಶೋಷಿತರು ದಲಿತರು. ದಲಿತರು ಸಂಘಟಿತರಾಗಬೇಕು. ಜಾತಿ ತಾರತಮ್ಯ ಅಸ್ಪೃಶ್ಯತೆಯಂತಹ ಅಪಮಾನವನ್ನು ತೊಡೆದು ಹಾಕಿ ಗೌರವ ಪೂರ್ಣವಾದ ಸ್ವಾಭಿಮಾನಿ ಬದುಕು ದಲಿತರಿಗೆ ಸಿಗಬೇಕೆಂದು ಸಮಾನತೆ ಪ್ರಜಾಪ್ರಭುತ್ವ ಬಯಸುವ ಎಲ್ಲರ ಆಸೆ. ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರೂ ಇದು ಕೈಗೂಡಿಲ್ಲ. ಮೇಲ್ನೋಟಕ್ಕೆ ನೋಡಿದರೆ ಜಾತಿಯತೆ ಮತ್ತು ಅಸ್ಪೃಶ್ಯತೆ ಮುಖ್ಯವಾಗಿ ಈ ಸಾಮಾಜಿಕ ಪ್ರಶ್ನೆಯಂತೆ ಕಾಣುತ್ತವೆ. ಆದರೆ ಪದ್ಧತಿಗಳ ಒಳಗೆ ಆಳವಾಗಿ ನೋಡಿದರೆ ದಲಿತರಿಗೆ ಆಸ್ತಿ ವಂಚಿಸುವ ಅವರಿಂದ ಬಿಟ್ಟಿ ದುಡಿಮೆ ದುಡಿಸಿಕೊಳ್ಳುವ, ಅವರಿಂದ ನಿಕೃಷ್ಟ ಕೆಲಸ ಮಾಡಿಸುವ ಹುನ್ನಾರಗಳಿರುತ್ತವೆ. ಸತ್ಯದ ಈ ವಿವಿಧ ಮುಖವನ್ನು ಸಮಗ್ರವಾಗಿ ಗ್ರಹಿಸಿ, ದಲಿತರಿಗೆ ದೇವಸ್ಥಾನದ ಪ್ರದೇಶದ ಹಕ್ಕು, ಊರಿನ ಕೆರೆ ಬಾವಿ ನೀರು ಬಳಸುವ ಹಕ್ಕು, ಕ್ಷೌರ ದಂಗಡಿ, ಹೋಟೇಲ್ ಮುಂತಾದ ಸೇವೆಗಳನ್ನು ಬಳಸಿಕೊಳ್ಳುವ ಹಕ್ಕುಗಳಿಗಾಗಿ ಹೋರಾಟ ನಡೆಸುವುದರ ಜೊತೆಗೆ, ಭೂ ಹೀನ ದಲಿತರಿಗೆ ಭೂಮಿ, ಶಿಕ್ಷಣ, ಉದ್ಯೋಗ, ನ್ಯಾಯಬದ್ಧವಾದ ಕೂಲಿ ವೇತನ ಎಲ್ಲದ್ದಕ್ಕೂ ಹೋರಾಟವನ್ನು ಜೊತೆ ಜೊತೆಗೆ ನಡೆಸಬೇಕಿದೆ.



ಈ ಸಮಗ್ರ ದೃಷ್ಟಿಯೊಂದಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ರಾಷ್ಟ್ರ ವ್ಯಾಪಿ ಆಂದೋಲನವನ್ನು ಯೋಜಿಸಿದೆ. ಕರ್ನಾಟಕ ರಾಜ್ಯದಲ್ಲಿಯೂ ಇಂತಹ ಹೋರಾಟ ನಡೆದಿದೆ. ಈ ಸಂಬಂಧ 15 ಪ್ರಮುಖ ಬೇಡಿಕೆಗಳಿಗಾಗಿ ಆಗ್ರಹಿಸಿ ಇದೇ ಜೂನ್ 14 ರಂದು ರಾಜ್ಯಮಟ್ಟದ ಬೃಹತ್ ಪ್ರತಿಭಟನಾ ಧರಣಿಯನ್ನು ನಡೆಸಲಾಯಿತು. ಬೆಂಗಳೂರಿನ ರೈಲ್ವೆ ನಿಲ್ದಾಣದಿಂದ ಹೊರಟ ಮೆರವಣಿಗೆ ಪ್ರಮುಖ ರಸ್ತೆಗಳನ್ನು ಹಾಯ್ದು ಬನಪ್ಪ ಪಾರ್ಕ್ ಮೈದಾನದಲ್ಲಿ ಸಭೆ ಸೇರಿತು. ಬನಪ್ಪ ಪಾರ್ಕ್‌ನಲ್ಲಿ ಧರಣಿ. ಬಹಿರಂಗ ಸಭೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸೇರಿದಂತೆ ವಿವಿಧ ಮುಖಂಡರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಅಧ್ಯಕ್ಷತೆ ವಹಿಸಿದ ಕಾರ್ಯಕ್ರಮದಲ್ಲಿ ಸರ್ಕಾರದ ಪರವಾಗಿ ಆಯುಕ್ತರಾದ ತ್ರಿಪಾಠಿ ಮನವಿ ಸ್ವೀಕರಿಸಿದರು.

ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ. ಗುರುಶಾಂತ್, ರಾಜ್ಯಸಮಿತಿ ಸದಸ್ಯರಾದ ಸೈಯದ್ ಮುಜೀಬ್, ಹಿರಿಯ ಮುಖಂಡರಾದ ಮಹಮ್ಮದ್ ದಸ್ತಗೀರ್ ಮುಂತಾದವರಿದ್ದರು. ರಾಜ್ಯ ಸಮಿತಿ ಸದಸ್ಯರಾದ ಯು.ಬಸವರಾಜು ಕಾರ್ಯಕ್ರಮ ನಿರ್ವಹಿಸಿದರು. □



'ಒಂದು ರೂಪಾಯಿ ಸರ್ಕಾರದ ಖರ್ಚಿನಲ್ಲಿ 10 ಪೈಸೆಯೂ ದಲಿತರಿಗೆ ಸಿಗುತ್ತಿಲ್ಲ'

ದೇಶದಲ್ಲಿ ಸುಮಾರು 20 ಕೋಟಿ ದಲಿತರಿದ್ದಾರೆ. ಕೇಂದ್ರ ರಾಜ್ಯ ಸರ್ಕಾರಗಳು ನೂರೆಂಟು ಯೋಜನೆಗಳಲ್ಲಿ ದಲಿತರಿಗೆಂದು ತೆಗೆದಿಟ್ಟ ಹಣದಲ್ಲಿ ಒಂದು ರೂಪಾಯಿಯಲ್ಲಿ 10 ಪೈಸೆಯೂ ತಲುಪುತ್ತಿಲ್ಲ. 90 ಪೈಸೆ ನುಂಗಣ್ಣನವರ ಬಾಯಿಗೆ ಹೋಗುತ್ತಿದೆ. ದಲಿತರಿಗೆ ಇನ್ನು ನಿಜವಾದ ಸ್ವಾತಂತ್ರ್ಯ ಸಿಕ್ಕಿಲ್ಲ. ವಿಮೋಚನೆ ಸಿಕ್ಕಿಲ್ಲ.

1990 ರ ನಂತರದಲ್ಲಿ ದಲಿತರ ಪರಿಸ್ಥಿತಿ ಇನ್ನೂ ಕೆಟ್ಟಿದೆ. ಜಾಗತೀಕರಣ, ಉದಾರೀಕರಣ, ನೀತಿಗಳು ಜಾರಿಯಾಗುತ್ತಿರುವಾಗ ದಲಿತರ ಸಂಕಷ್ಟ ಇನ್ನಷ್ಟು ಹೆಚ್ಚಾಗಿವೆ. ದಲಿತರಿಗೆ ಭೂಮಿ ಇಲ್ಲ. ಶಿಕ್ಷಣ ಇಲ್ಲ. ಸತ್ತವರನ್ನು ಹೂಳಲು ಸ್ಮಶಾನವೂ ಇಲ್ಲ. ದೇಶದ ಯಾವುದೇ ಮೂಲೆಯಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದರೂ ಕೆಂಬಾವುಟ ಹಿಡಿದು ಹೋರಾಟ ಮಾಡಲು ಸಿಪಿಐ(ಎಂ) ನಿರ್ಧರಿಸಿದೆ. ಚೆನ್ನೈನಲ್ಲಿ ನಿನ್ನೆ 25,000 ಜನ ದಲಿತರ ರ್‍ಯಾಲಿ ನಡೆಯಿತು. ಸಿಪಿಐ(ಎಂ)ನ ಈ ರ್‍ಯಾಲಿಯಲ್ಲಿ ವಿವಿಧ ದಲಿತ ಸಂಘಟನೆಗಳೂ ಪಾಲ್ಗೊಂಡಿದ್ದವು. 'ಮೂರು ಬಣ್ಣಗಳ ಬಾವುಟದ ಪಕ್ಷ, ಎರಡು ಬಣ್ಣಗಳ ಬಾವುಟದ ಪಕ್ಷ, ಹಿಂದೂಗಳೆಲ್ಲಾ ಒಂದಾಗಬೇಕೆನ್ನುವ ಪಕ್ಷ ಎಲ್ಲವನ್ನೂ ನಾವು ನೋಡಿದ್ದೇವೆ. ರಾಜಕೀಯವಾಗಿ ನಿಜವಾಗಿಯೂ ದಲಿತರ ಪರವಾಗಿ ಹೋರಾಡುತ್ತಿರುವವರು ಸಿಪಿಐ(ಎಂ) ಪಕ್ಷ ಮಾತ್ರ' ಎಂದು ಅವರು ಹೇಳಿದರು.

"ನಿನ್ನೆ ದೇವದಾಸಿ ಮಹಿಳೆಯರ ಪರವಾಗಿ ಮನವಿ ಕೊಡಲು ಹೋದಾಗ ಮುಖ್ಯಮಂತ್ರಿಗಳು 'ಮತ್ತೆ ಯಾಕೆ ಬಂದಿರಿ' ಎಂದು ಅಸಹನೆಯಿಂದ ವರ್ತಿಸಿದ್ದಾರೆ. ಮೆರವಣಿಗೆ ಪ್ರತಿಭಟನೆ ಮಾಡುವುದು ಜನರ ಪ್ರಜಾಪ್ರಭುತ್ವ ಹಕ್ಕು. ಏನು ಬಿಸಿಲು ಹೆಚ್ಚಾಗಿ ಮುಖ್ಯಮಂತ್ರಿಗಳು ಹೀಗಾಡ್ತಾ ಇದಾರೋ ಅಥವಾ ಬಿಜೆಪಿ ಯವರ ಸಹವಾಸದಿಂದ ಹೀಗಾಗಿದೆಯೋ ಗೊತ್ತಿಲ್ಲ.

'ಕೆಲವು ಆಕಳು ಹಾಡು ಹೇಳಿದರೆ, ಹಾಲು ಕೊಡುತ್ತವೆ. ಇನ್ನು ಕೆಲವು ಅದರ ಮುಂದೆ ನೃತ್ಯ ಮಾಡಿದರೆ ಹಾಲು ಕೊಡುತ್ತವೆ. ಇದಾವುಕ್ಕೂ ಹಾಲು ಕೊಡದಿದ್ದರೆ ಕಾಲು ಕಟ್ಟಿ ಹಾಕಿ ಸರಿಯಾಗಿ ನಾಲ್ಕು ಜಡಿದರೆ ಹಾಲು ಕೊಡುತ್ತವೆ' ಎಂದು ತಮಿಳಿನಲ್ಲಿ ಒಂದು ಮಾತಿದೆ. ಹಾಗೆ ಸರ್ಕಾರಗಳು ದಲಿತರಿಗೆ ಅಗತ್ಯವಾದದನ್ನು ನೀಡದೇ ಹೋದರೆ ಜನರು ತಾವೇ ಅದನ್ನು ಪಡೆದುಕೊಳ್ಳುತ್ತಾರೆ".

ಕೆ.ವರದರಾಜನ್

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು

'ಕೆರೆ ನೀರಿಗೆ ಹೋದರೆ ಅಟ್ಟಿಸಿಕೊಂಡು ಬರುತ್ತಾರೆ'

"ಎಲ್ಲ ದಲಿತರಿಗೆ ಭೂಮಿ ಸಿಗುವಂತಾಗಬೇಕು. ಶ್ರೀಮಂತರು, ದೊಡ್ಡ ಗೌಡರು, ಮೇಲ್ಜಾತಿಯ ಜನರು ಭೂಮಿ ಕಾನೂನಿಗೆ ವಿರುದ್ಧವಾಗಿ 200, 300, 1000, 2000 ಎಕರೆ ಜಮೀನನ್ನು ಕಳ್ಳತನದಲ್ಲಿ ಇಟ್ಟುಕೊಂಡಿದ್ದಾರೆ. 10,000 ಎಕರೆ ಒಂದೇ ಕುಟುಂಬದ್ದು ಇರುವುದೂ ಇದೆ. ಜಗದೀಶ್ ಶೆಟ್ಟರ್‌ರವರೇ, ಕುಮಾರಸ್ವಾಮಿಯವರೇ ಇದು ನಿಮಗೆ ಕಾಣುತ್ತಿಲ್ಲವೆ? ಸಂವಿಧಾನದಲ್ಲಿ ಅಸ್ಪೃಶ್ಯತೆ ನಿಷೇಧಿಸಲಾಗಿದೆ. ದಲಿತರು ಕೆರೆ ನೀರು ಕುಡಿಯಲು ಹೋದರೆ ಅಟ್ಟಿಸಿಕೊಂಡು ಬರುತ್ತಾರೆ.ರಾಜ್ಯ ಬಜೆಟ್‌ನಲ್ಲಿ ದಲಿತ ಸಬಲೀಕರಣಕ್ಕಾಗಿ ಇಟ್ಟ 4500 ಕೋಟಿ ರೂ. ಎಲ್ಲಿಗೆ ಹೋಗುತ್ತಿದೆ. ದಲಿತ ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ದನಗಳು ತಿನ್ನುವಂತಾ ಆಹಾರ ಕೊಡುತ್ತಿದ್ದೀರಿ. ಪಶ್ಚಿಮ ಬಂಗಾಳದಲ್ಲಿ ಭೂ ಹೀನರಿಗೆ ಹಂಚಲಾಗಿರುವ ಭೂಮಿಯಲ್ಲಿ ಅರ್ಧಕ್ಕರ್ಧ ದಲಿತರಿಗೆ ಸಿಕ್ಕಿದೆ. ದಲಿತ ಸಬಲೀಕರಣ ಹೇಗೆಂದು ಗೊತ್ತಿಲ್ಲವಾದರೆ ಸಿಪಿಐ(ಎಂ) ಕೇಳಿ ಹೇಳಿಕೊಡುತ್ತೇವೆ".

- ಜಿ.ಎನ್.ನಾಗರಾಜ್,

ಸಿಪಿಐ(ಎಂ) ಕಾರ್ಯದರ್ಶಿ

★

ದಲಿತರ ಹೆಸರಲ್ಲೇ ಎಲ್ಲಾ

"ಎಲ್ಲ ಪಕ್ಷಗಳು ದಲಿತರು, ಬಡವರ ಹೆಸರಿನಲ್ಲಿ ಓಟು ಕೇಳುತ್ತೇವೆ. ಅಂಬೇಡ್ಕರ್ ಜಯಂತಿ, ಇತರರ ಜಯಂತಿ ಮಾಡುತ್ತೇವೆ. ದಲಿತರ ಕೋಟಾದಲ್ಲಿ ಮಂತ್ರಿಗಳಾಗುತ್ತಾರೆ, ಶಾಸಕರಾಗುತ್ತಾರೆ. ಆದರೆ ದಲಿತರ ಸಮಸ್ಯೆಗಳ ಪರಿಹಾರಕ್ಕೆ ಕಾರ್ಯಕ್ರಮ ರೂಪಿಸುವುದಿಲ್ಲ. ದಲಿತರಿಗೆ ಮನೆ ಇಲ್ಲ, ಉದ್ಯೋಗ ಇಲ್ಲ. ಆಶ್ರಯ ಯೋಜನೆಯಲ್ಲಿ ಕೆಲವೊಮ್ಮೆ ದಲಿತರು, ಬಡವರು ಮನೆ ಕಟ್ಟಿಕೊಳ್ಳಲು 20 ಸಾವಿರ ನೀಡಲಾಗುತ್ತಿದೆ. ಆದರೆ ಮಂತ್ರಿಗಳು ಶಾಸಕರಿಗೆ ಬಚ್ಚಲು ಮನೆ ಕಟ್ಟಿಕೊಳ್ಳಲು 5 ಲಕ್ಷ, ವೆಚ್ಚ ಮಾಡುತ್ತಾರೆ. ಆಶ್ರಯ ಮನೆಗೆ ನೀಡುವ ಹಣವನ್ನು 50 ಸಾವಿರಕ್ಕೆ ಹೆಚ್ಚಿಸಿ ಎಂದರೆ ಸರ್ಕಾರ ಹಣವಿಲ್ಲ ಎನ್ನುತ್ತದೆ. ಆದರೆ ಜಾತಿ ಮಠಗಳಿಗೆ ಗುಡಿ, ಗೋಪುರಗಳಿಗೆ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ನೀಡುತ್ತದೆ".

- ಜಿ.ವಿ.ಶ್ರೀರಾಮರೆಡ್ಡಿ

ಶಾಸಕರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

★

"ನಮ್ಮ ಮಕ್ಕಳು ದೇವಸ್ಥಾನದೊಳಕ್ಕೆ ಹೋದರೆ ಲಿಂಗಾಯಿತರು, ಮೇಲ್ಜಾತಿ ಯವರು ನಾವು ಪೂಜೆ ಮಾಡುವ ದೇವಸ್ಥಾನಕ್ಕೆ ನುಗ್ಗಿದ್ದಾವೆಂದು ಹೊಡೆದು ಕೊಂಡು ಬಂದು ನಮ್ಮ ಮಕ್ಕಳನ್ನು ಮನೆಗೆ ತಂದು ಬಿಡುತ್ತಾರೆ".

- ಮಾಳಮ್ಮ

ಅಧ್ಯಕ್ಷರು, ಕ.ರಾ. ದೇವದಾಸಿಯರ ವಿಮೋಚನಾ ಸಂಘ

★

"ನಾವು ಕೇಳುವ ಬೇಡಿಕೆಯನ್ನು ಸರ್ಕಾರ ಹೆಂಗೆ ಈಡೇರಿಸೋದಕ್ಕೆ ಸಾಧ್ಯ ಅಂತ ನಿಮಗೂ ಅನ್ನಿಸಬಹುದು. ಆದರೆ ಜನಕ್ಕೆ ಗೊತ್ತಿಲ್ಲದಂತೆ, ಬೆಂಕಿ ಪೊಟ್ಟಣ, ಅಕ್ಕಿ, ಬೇಳೆ, ಕಾಳು ಎಲ್ಲದರಲ್ಲೂ ಜನರಿಂದ ಸರ್ಕಾರ ತೆರಿಗೆ ಕಿತ್ತುಕೊಳ್ಳುತ್ತೆ. ನಾವು ಕೇಳಿರೋದು ನಮ್ಮದೇ ದುಡ್ಡು"

- ಪ್ರಸನ್ನ ಕುಮಾರ್

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

★

"ರಾಜ್ಯದಲ್ಲಿ ಬಿಜೆಪಿ, ಜೆಡಿ(ಎಸ್) ಸರ್ಕಾರ ಬಂದ ಮೇಲೆ ದೌರ್ಜನ್ಯ ತುಂಬಾ ಹೆಚ್ಚಾಗಿದೆ. ಮಾನವ ಅಭಿವೃದ್ಧಿ ವರದಿಯ ಮಾಹಿತಿಯಂತೆ ಇತರ ಸಮುದಾಯದ ಜನರಿಗೆ 500 ಗ್ರಾಂ, ಆಹಾರ ದೊರೆಯುತ್ತಿದ್ದರೆ, ದಲಿತರಿಗೆ ಕೇವಲ 300 ಗ್ರಾಂ ಮಾತ್ರ ದೊರೆಯುತ್ತಿದೆ. ಹಲವಾರು ಪ್ರದೇಶಗಳಲ್ಲಿ ದಲಿತರು ಕ್ಷೌರ ಮಾಡಿಸಿಕೊಳ್ಳಲು ಬೇರೆ ಊರಿಗೆ 30 ರಿಂದ 40 ಕಿ.ಮೀ. ಹೋಗಿ ಬರಬೇಕಾಗಿದೆ. ಇಂಥ ಪರಿಸ್ಥಿತಿಯ ನಿವಾರಣೆಗಾಗಿ ಸಿಪಿಐ(ಎಂ) ನಿಂದ 15 ಪ್ರಮುಖ ಬೇಡಿಕೆ ಆಧರಿಸಿ ಈ ಹೋರಾಟ ರೂಪಿಸಲಾಗಿದೆ"

- ಮಾರುತಿ ಮಾನ್ಪಡೆ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

ದೇವದುರ್ಗ: ಕೂಲಿ ಕೊಡದ ಅಧಿಕಾರಿಗೆ ದಿಗ್ಬಂಧನ


ದೇವದುರ್ಗ ತಾಲ್ಲೂಕಿನ ಚಿಂಚೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ ಕೂಲಿಕಾರರಿಗೆ ತಕ್ಷಣ ಕೂಲಿ ಕೊಡಲು ಒತ್ತಾಯಿಸಿ ಡಿವೈಎಫ್ಐ ನೇತೃತ್ವದಲ್ಲಿ ತಾಲ್ಲೂಕು ಪಂಚಾಯತ್ ಅಧಿಕಾರಿಗೆ ದಿಗ್ಬಂಧನ ಹಾಕಿ ಪ್ರತಿಭಟಿಸಲಾಯಿತು.

ಕೂಲಿ ಕೊಡುವವರೆಗೆ ನಾವು ಹೋಗುವುದಿಲ್ಲ ನಿಮ್ಮನ್ನು ಹೋಗಲು ಬಿಡುವುದಿಲ್ಲ ಎಂದ ಪ್ರತಿಭಟನಾಕಾರರು ಅಧಿಕಾರಿಯನ್ನು ಕೋಣೆಯಲ್ಲಿ ಕೂಡಿಹಾಕಿ ಬಾಗಿಲ ಮುಂದೆ ಧರಣಿ ಕುಳಿತಾಗ ಪರಿಸ್ಥಿತಿ ಕೈಮೀರಿ ಹೋಗುವುದನ್ನು ಅರಿತ ಪೊಲೀಸ್ ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಸುಮಾರು ಆರು ಗಂಟೆಗಳವರೆಗೆ ಸುದೀರ್ಘ ಮಾತುಕತೆ ನಡೆದು ಗ್ರಾ.ಪಂ.ಕಾರ್ಯದರ್ಶಿಯನ್ನು ತಕ್ಷಣ ಅಮಾನತುಗೊಳಿಸಲಾಗುವುದು. ಮತ್ತು ಒಂದು ವಾರದೊಳಗೆ ಎಲ್ಲಾ ಕೂಲಿಕಾರರಿಗೆ ಕೂಲಿ ನೀಡುವುದಾಗಿ ಲಿಖಿತ ಭರವಸೆ ಕೊಟ್ಟ ನಂತರ ಹೋರಾಟವನ್ನು ಹಿಂತೆಗೆದುಕೊಳ್ಳಲಾಯಿತು.

ಈ ಹೋರಾಟದ ನೇತೃತ್ವವನ್ನು ಡಿವೈಎಫ್ಐ ಜಿಲ್ಲಾಧ್ಯಕ್ಷ ಸಿ.ಎಸ್.ನಾಡಗೌಡ, ಆನಂದ ಚಂದ್ರಶೇಖರ ಅಂಬಿಗೇರ, ಬಸಮ್ಮ ಲಿಂಗದಳ್ಳಿ, ತಾಯಮ್ಮ ದುರಗಮ್ಮ ಯಲ್ಲಮ್ಮ ಮುಂತಾದವರು ವಹಿಸಿದ್ದರು.

ವರದಿ : **ಚಂದ್ರಶೇಖರ ನಾಡಗೌಡ**

ಯುನಿಟ್ ಪದ್ಧತಿ ರದ್ಧತಿಗೆ ಒತ್ತಾಯ




ಮೊದಲಿನಂತೆ ರೇಶನ್ ವ್ಯವಸ್ಥೆ ಮುಂದುವರೆಸಬೇಕೆಂದು ಹಾಗೂ ಇನ್ನುಳಿದ ಬಡವರಿಗೆ ಕೂಡಲೇ ಬಿಪಿಎಲ್ ಪಡಿತರ ಚೀಟಿ ವಿತರಿಸಲು ಒತ್ತಾಯಿಸಿ ಸಿಪಿಐ(ಎಂ) ನೇತೃತ್ವದಲ್ಲಿ ರಾಮದುರ್ಗದಲ್ಲಿ ಪ್ರತಿಭಟನೆ ನಡೆಯಿತು. ಇಡೀ ರೇಷನ್ ವ್ಯವಸ್ಥೆಯನ್ನು ಬುಡಮೇಲು ಮಾಡಿ ಲಕ್ಷಾಂತರ ಬಡವರ ಹೊಟ್ಟೆ ಮೇಲೆ ಕಾಲುಕೊಟ್ಟ ಸರ್ಕಾರದ ನೀತಿಯನ್ನು ಸಿಪಿಐ(ಎಂ) ಮುಖಂಡ ಗೈಬು ಜೈನೆಖಾನ್ ಖಂಡಿಸಿದರು.

ಭಾಗ್ಯನಗರದಿಂದ ಹೊರಟ ಮೆರವಣಿಗೆ ತಹಶೀಲ್ದಾರ ಕಚೇರಿಯಲ್ಲಿ ಸಮಾವೇಶಗೊಂಡ ಬಳಿಕ ಸಭೆ ನಡೆಯಿತು.

ಯೂನಿಟ್ ಪದ್ಧತಿ ರದ್ದಾಗಿ ಮೊದಲಿನಂತೆ ರೇಷನ್ ಪೂರೈಸಬೇಕು ಹಾಗೂ ಸಮೀಕ್ಷೆಯಲ್ಲಿ ಉಳಿದ ಬಡವರಿಗೆ ಹಳದಿ ಕಾರ್ಡು ಪೂರೈಸಬೇಕೆಂದು ಸಿಪಿಐ(ಎಂ) ಕಾರ್ಯಕರ್ತರು ಸರಕಾರಕ್ಕೆ ಒತ್ತಾಯಿಸಿದರು.

ಜಿಲ್ಲಾ ಸಮಿತಿ ಸದಸ್ಯರಾದ ನಾಗಪ್ಪ ಸಂಗೊಳ್ಳಿ, ಸ್ವಾಗತಿಸಿ ಕೊನೆಯಲ್ಲಿ ವಂದನಾರ್ಪಣೆ ಮಾಡಿದರು. ಶೆಟ್ಟೆಪ್ಪ ಸಂಗೊಳ್ಳಿ, ವೀರಭದ್ರ ಕಂಪ್ಲಿ, ಫಕ್ರುಸಾಬ ನದಾಫ, ಕೆಂಪಣ್ಣ ಬಂಡಿವಡ್ಡರ ಮತ್ತು ಗಫೂರ ಪಠಾಣ ಮೆರವಣಿಗೆಯ ನೇತೃತ್ವದ ವಹಿಸಿದ್ದರು.



ತುರನೂರು ಪಂಚಾಯ್ತಿ ಉಪ ಚುನಾವಣೆ

ಕಾಂ: ಗೈಬು ಜೈನೆಖಾನ್ ವಿಜಯ

ಇತ್ತೀಚಿಗೆ ನಡೆದ ಉಪ ಚುನಾವಣೆಯಲ್ಲಿ ಬೆಳಗಾಂ ಜಿಲ್ಲೆ ರಾಮದುರ್ಗ ತಾಲ್ಲೂಕಿನ ತುರನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಇತ್ತೀಚಿಗೆ ನಡೆದ ಉಪ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಗೈಬು ಜೈನೆಖಾನ್ ಅವರು ವಿಜಯಿಯಾಗಿದ್ದಾರೆ. ಚಲಾವಣೆಯಾದ ಒಟ್ಟು 879 ಮತಗಳಲ್ಲಿ ಗೈಬು ಅವರು 408 ಮತಗಳಿಸಿ ನಿಕಟವರ್ತಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು 150 ಮತಗಳಿಂದ ಸೋಲಿಸಿದ್ದಾರೆ. ಈ ಕ್ಷೇತ್ರದಲ್ಲಿ ಹಿಂದೆಯೂ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಹನುಮಂತ [illegible] ಗೆದ್ದಿದ್ದರು. ಅವರ ನಿಧನದಿಂದಾಗಿ [illegible]. ಗೈಬು ಜನರ ನಡುವೆ [illegible]

ಹಾಸನ : ದುಡಿವ ಜನರ ಸೃಜನಶೀಲತೆಯ ಅನಾವರಣ

ಕಾರ್ಮಿಕರು ಸ್ಥಳೀಯವಾಗಿ ರೈತರೊಂದಿಗೆ, ಕೃಷಿ ಕೂಲಿಕಾರರೊಂದಿಗೆ ಐಕ್ಯತೆ ಸಾಧಿಸಲು ಹಾಗೂ ತಮ್ಮ ಮತ್ತು ಇತರ ಜನವಿಭಾಗಗಳೊಂದಿಗೆ ಮುಕ್ತ ಸಂವಾದಕ್ಕೆ ಇತ್ತೀಚಿಗೆ ಹಾಸನದಲ್ಲಿ ನಡೆದ ಸಿಐಟಿಯುವಿನ 37ನೇ ಸ್ಥಾಪನಾ ದಿನಾಚರಣೆಯು ವೇದಿಕೆಯಾಯಿತು.

ಮೇ ದಿನಾಚರಣೆಯಲ್ಲಿ ಮಾತ್ರ ಇಂತಹ ಅವಕಾಶ ಇದುವರೆಗೂ ನಿರ್ಮಿಸಲ್ಪಡುತ್ತಿತ್ತು. ಇದೇ ಮೊದಲ ಬಾರಿಗೆ ಸಿಐಟಿಯುನ ಸ್ಥಾಪನಾ ದಿನಾಚರಣೆಯನ್ನು ಹಾಸನದಲ್ಲಿ ಸಿಐಟಿಯು ಸಂಘಟಿಸಿತ್ತು. ಈಗ ತಾನೆ ಮುಂಗಾರು ಆರಂಭವಾಗಿದ್ದು, ಬಿತ್ತನೆ ಕಾರ್ಯ ವೇಗವಾಗಿ ನಡೆಯುತ್ತಿದ್ದರೂ ರೈತರು ಹಾಗೂ ಕೃಷಿ ಕೂಲಿ ಕಾರ್ಮಿಕರು, ಗ್ರಾಮ ಪಂಚಾಯತಿ ಸಂಘಟನೆಯ ಸದಸ್ಯರುಗಳು, ಅಂಗನವಾಡಿ ನೌಕರರು ಬಿಸಿಯೂಟದ ಕಾರ್ಯಕರ್ತರು, ಔಷಧ ಮಾರಾಟಗಾರರು ಮತ್ತು ಪ್ರತಿನಿಧಿಗಳು, ವಿಶೇಷ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ತೋಟ ಕಾರ್ಮಿಕರು ಅತ್ಯುತ್ಸಾಹದಲ್ಲಿ ಪಾಲ್ಗೊಂಡಿದ್ದ ಈ ಕಾರ್ಯಕ್ರಮಕ್ಕೆ ಜನಪದ ನೃತ್ಯಗಳು, ಕೋಲಾಟ, ಕರಗ, ಡೊಳ್ಳುಕುಣಿತ, ಚಿಟ್ಟಮೇಳ ಇನ್ನಷ್ಟು ಮೆರಗು ತುಂಬಿದವು. ಇಷ್ಟೆಲ್ಲಾ ಇದ್ದ ಮೇಲೆ ಕಾರ್ಮಿಕರು ಸುಮ್ಮನಿರುತ್ತಾರೆಯೇ? ಎರಡು ಕಿ.ಮೀ.ನಷ್ಟಿದ್ದ ಈ ಮೆರವಣಿಗೆಯಲ್ಲಿ ಮೊದಲೇ ಅತ್ಯುತ್ಸಾಹದಲ್ಲಿದ್ದ ಕಾರ್ಮಿಕರಿಗೆ ಡೊಳ್ಳು, ಚಿಟ್ಟ, ಕರಗ, ಕೋಲಾಟ ಇನ್ನಷ್ಟು ಉತ್ಸಾಹ ತುಂಬಿದವು. ಮೊದಲೇ ಇಡೀ ರಸ್ತೆಯೇ ಕೆಂಪಾಗಿದ್ದುದರ ಜೊತೆಗೆ ಕೆಂಬಾವುಟ ಹಿಡಿದ ಕಾರ್ಮಿಕರು ವಾದ್ಯಕ್ಕೆ ತಕ್ಕಂತೆ ಹೆಜ್ಜೆ ಹಾಕಿದರು. ಒಬ್ಬರಿಗೊಬ್ಬರು ಉತ್ಸಾಹ ತುಂಬುತ್ತಾ ಮೆರವಣಿಗೆಯುದ್ದಕ್ಕೂ ಕುಣಿ ಕುಣಿದು ದಣಿದರು. ಕಾರ್ಮಿಕರ ಕೆಂಬಾವುಟದ ನರ್ತನಕ್ಕೆ ಆ ಸೂರ್ಯ ಮರೆಯಾದ, ತುಂತುರು ಮಳೆ ಶುರುವಾಯ್ತು.



ಸಿಐಟಿಯು ಸ್ಥಾಪನಾ ದಿನಾಚರಣೆ

ಸಮಾರಂಭ ನಡೆದ ಹಾಸನ ನಗರದ ಕನ್ನಡ ಸಾಹಿತ್ಯ ಭವನದೊಳಗೆ ಕಾರ್ಮಿಕರ ಕಲಾ ಪ್ರತಿಭೆಗೆ ಹೆಚ್ಚಿನ ಕಾಲಾವಕಾಶ ನೀಡಲಾಗಿತ್ತು. ವರ್ಷವಿಡೀ ದುಡಿಯುವ, ಬದುಕಿನ ಚಿಂತೆಯಲ್ಲೇ ಕಾಲನೂಕುವ ಇವರು ಇಂತಹ ಅವಕಾಶವನ್ನು ಹಣ್ಣಾಗಿಸಿಕೊಂಡರು. ಸ್ಪರ್ಧೆ ಇರಲಿಲ್ಲವಾದರೂ ಪೈಪೋಟಿ ಮೇಲೆ ಪ್ರದರ್ಶನ ನೀಡಿದರು. ಹಾಡು, ಕುಣಿತ, ಕೋಲಾಟ; ವ್ಹಾಹ್! ಸಾರ್ವಜನಿಕರು ಕೂಲಿಕಾರರಲ್ಲಿಯೂ ಇಂತಹ ಪ್ರತಿಭೆ ಇದೆಯಾ ಎನ್ನುತ್ತಿದ್ದರು. ಅಮೋಘ ಪ್ರದರ್ಶನದ ಮೂಲಕ ಕಾರ್ಮಿಕರು 'ಸ್ವಾಮಿ ಈ ಸಂಸ್ಕೃತಿಯ ನಿಜವಾದ ವಾರಸುದಾರರು ನಾವೇ' ಅಂತ ನಿರೂಪಿಸಿಬಿಟ್ಟರು.

ಕಾರ್ಯಕ್ರಮದಲ್ಲಿ ಎಸ್ಎಫ್ಐ, ಡಿವೈಎಫ್ಐ, ಸಿಐಟಿಯುನ ಸಂಘಗಳು, ಇದೀಗ ರೂಪುಗೊಳ್ಳುತ್ತಿರುವ 'ಸಮುದಾಯ' ಭಾಗವಹಿಸಿದ್ದರು ಮತ್ತು ಅರುಣ್ ಪೈಪ್ ಫ್ಯಾಕ್ಟರಿ ಕಾರ್ಮಿಕರು ಇದ್ದರು.

ಸಿಐಟಿಯುನ ಜಿಲ್ಲಾಧ್ಯಕ್ಷ ವಿ.ಸುಕುಮಾರ್, ಜಿಲ್ಲಾಪ್ರಧಾನ ಕಾರ್ಯದರ್ಶಿ ಧರ್ಮೇಶ್, ಔಷಧ ಮಾರಾಟ ಪ್ರತಿನಿಧಿಗಳ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವೀರಣ್ಣ.ಎಸ್.ಹಳ್ಳಿ, ಗ್ರಾಮ ಪಂಚಾಯತ್ ನೌಕರರ ಸಂಘದ ಮುಖಂಡ ಚಂದ್ರೇಗೌಡ, ಅಂಗನವಾಡಿ ಮತ್ತು ಅಕ್ಷರ ದಾಸೋಹ ಕೆಲಸಗಾರರ ಸಂಘದ ಸಂಚಾಲಕಿ ಸುನೀತಾ ಪಿ.ಹೆಬ್ಬಾರ್, ಮಂಜಮ್ಮ ತೋಟ ಕಾರ್ಮಿಕ ಸಂಘದ ಅಂತೋಣಿಯಮ್ಮ ರಾಘುಶೆಟ್ಟಿ ಇದ್ದರು.


■ **ಲಿಂಗರಾಜು**, ಹಾಸನ

ವಿಕಲ ಚೇನತ ಮಕ್ಕಳ ಶಿಕ್ಷಕರ ಬೇಡಿಕೆ ಈಡೇರಿಸುವ ಭರವಸೆ

ರಾಜ್ಯದಲ್ಲಿ ವಿಶೇಷ ಅಗತ್ಯತೆಯುಳ್ಳ (ವಿಕಲಚೇತನ) ಮಕ್ಕಳಿಗೆ ಸಮನ್ವಯ ಶಿಕ್ಷಣ ನೀಡುತ್ತಿರುವ ಸುಮಾರು 2000 ಕ್ಕೂ ಹೆಚ್ಚು ಸಂಪನ್ಮೂಲ ಶಿಕ್ಷಕರು ಸೇವಾಭದ್ರತೆ, ಸಮರ್ಪಕ ಸಂಬಳ ಸೌಲಭ್ಯಗಳಿಲ್ಲದೆ ತೀವ್ರ ತೊಂದರೆಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ 28 ಮೇ 2007ರಿಂದ ಅನಿರ್ಧಿಷ್ಟಾವದಿ ಧರಣಿ ಕಾರ್ಯಕ್ರಮವನ್ನು ರಾಜ್ಯ ಸಂಪನ್ಮೂಲ ಶಿಕ್ಷಕರ ಸಂಘ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ) ಸಂಘಟನೆಗಳು ಬೆಂಗಳೂರಿನ ಬನ್ನಪ್ಪ ಪಾರ್ಕ್‌ನಲ್ಲಿ [illegible].

[illegible] ಅಧಿಕಾರಿಗಳೊಂದಿಗೆ ಮಾತುಕತೆ [illegible] ಬೇಡಿಕೆಗಳ ಬಗೆಗೆ [illegible] ಈಡೇರಿಸುವ ಭರವಸೆ ದೊರೆತಿದೆ ಹಾಗೂ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಈ ಯೋಜನೆಯನ್ನು ದುರುಪಯೋಗ ಪಡಿಸಿಕೊಂಡಿದೆ.

ಭ್ರಷ್ಟಾಚಾರವೆಸಗಿರುವವರ ವಿರುದ್ಧ ತನಿಖೆ ನಡೆಸುವುದಾಗಿ ತಿಳಿಸಿದ್ದಾರೆ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಸಂಪನ್ಮೂಲ ಶಿಕ್ಷಕರಿಗೆ ಅನಗತ್ಯ ಕಿರುಕುಳ ನೀಡಿದರೆ ಅವರ ವಿರುದ್ಧ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು. ಹಾಗಾಗಿ ಈ ಮೇಲಿನ ಅಧಿಕಾರಿಗಳ ಭರವಸೆಯ ಮೇರೆಗೆ ನಮ್ಮ ಚಳುವಳಿಯನ್ನು ವಾಪಸ್ಸು ಪಡೆದು ಮುಂದಿನ ದಿನಗಳಲ್ಲಿ ಜಿಲ್ಲಾ ಹಾಗೂ ರಾಜ್ಯಮಟ್ಟದ ಸಮಾವೇಶವನ್ನು ನಡೆಸಿ ಹೋರಾಟವನ್ನು ವಿಸ್ತಾರಗೊಳಿಸುವುದರ ಮುಖಾಂತರ ಉಳಿದ ಬೇಡಿಕೆಗಳನ್ನು ಈಡೇರಿಸಲು ತೀರ್ಮಾನಿಸಲಾಗಿದೆ.



ಹೆಸರು ದಲಿತೋದ್ಧಾರ, ಆರೆಸ್ಸೆಸ್‌ಗೆ ಶಿಶುಗಳನ್ನು ಸೆಳೆಯುವ ಹುನ್ನಾರ

ನಾಲ್ಕನೇ ತರಗತಿಯಲ್ಲಿ ಶೇಕಡಾ 60ಕ್ಕಿಂತ ಅಧಿಕ ಅಂಕಗಳಿಸಿರುವ ಪರಿಶಿಷ್ಟ ಜಾತಿಮತ್ತು ಪರಿಶಿಷ್ಟ ವರ್ಗ ಮಕ್ಕಳನ್ನು ಪ್ರತಿಷ್ಠಿತ ಶಾಲೆಗಳಿಗೆ ಸೇರಿಸುವ ಯೋಜನೆಯನ್ನು ರಾಜ್ಯ ಸರ್ಕಾರ 2007-08ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಿ ಈಗ ಅದನ್ನು ಜಾರಿಗೊಳಿಸುತ್ತಿದೆ. ಪ್ರತಿಷ್ಠಿತ ಶಾಲೆಗಳಲ್ಲಿ ಓದಬೇಕು, ಆದರೆ ಆರ್ಥಿಕ ಸ್ಥಿತಿ ಸರಿಯಿಲ್ಲದ ಕಾರಣ ಅದು ಸಾಧ್ಯವಾಗುತ್ತಿಲ್ಲ ಎನ್ನುವ ಮಕ್ಕಳಿಗಾಗಿ ಈ ವಿಶೇಷ ವ್ಯವಸ್ಥೆ ಎಂದು ಕೋ-ಜಾ ಸರ್ಕಾರದ ಉಪಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವ ಯಡಿಯೂರಪ್ಪ ಹೇಳಿದ್ದಾರೆ. ಮೇಲ್ನೋಟಕ್ಕೆ ಇದು ಸರಿ ಎನಿಸಿದರೂ ಇದರ ಅಂತರಾಳದಲ್ಲಿ ಕೋಮುವಾದಿಗಳ ಹುನ್ನಾರ ಎಂಬುದನ್ನು ಅರಿಯಬೇಕಾಗಿದೆ.

ಪ್ರತಿ ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳಲ್ಲಿನ ಪ್ರತಿಷ್ಠಿತ ಶಾಲೆಗಳನ್ನು ಗುರುತಿಸಿ ಅಲ್ಲಿ ಆ ಮಕ್ಕಳನ್ನು ಆ ಶಾಲೆಗಳಿಗೆ ಸೇರಿಸಲಾಗುವುದು. ರಾಜ್ಯದಲ್ಲಿನ 1000 ಎಸ್.ಸಿ./ಎಸ್.ಟಿ. ಮಕ್ಕಳು ಅಂದರೆ ಪ್ರತಿ ಶಾಲೆಯ ಎಸ್.ಸಿ.ಯ 15 ಗಂಡು. 10 ಹೆಣ್ಣು ಹಾಗೂ ಎಸ್.ಟಿ.ಯ 15 ಗಂಡು ಹಾಗೂ 10 ಹೆಣ್ಣು ಮಕ್ಕಳನ್ನು ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು ಎನ್ನಲಾಗುತ್ತಿದೆ. ಪ್ರತಿ ಮಗುವಿಗೆ ವರ್ಷಕ್ಕೆ 20,000 ರೂಪಾಯಿಗಳು (ಇಪ್ಪತ್ತು ಸಾವಿರ) ಖರ್ಚಾಗುತ್ತದೆ. ಈ ಹಣವನ್ನು ಸಮಾಜ ಕಲ್ಯಾಣ ಇಲಾಖೆಯು ಮಕ್ಕಳು ಸೇರುವ ಶಾಲೆಗಳ ಮ್ಯಾನೇಜ್‌ಮೆಂಟ್‌ಗಳಿಗೆ ಕೊಡುತ್ತದೆ.

ಆದರೆ, ಜಿಲ್ಲೆಗಳಲ್ಲಿ ಪ್ರತಿಷ್ಠಿತ ಶಾಲೆಗಳನ್ನು ಗುರುತಿಸುವ ಜವಾಬ್ದಾರಿ ಡಿಡಿಪಿಐ ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಸಮಿತಿ ಮಾಡುತ್ತಿದೆ.ಆ ರೀತಿ ಆಯ್ಕೆಯಾಗುವ ಪ್ರತಿಷ್ಠಿತ ಶಾಲೆಗಳೆಲ್ಲವೂ ಖಾಸಗಿ ಅನುದಾನಿತ, ಅನುದಾನರಹಿತ ಸಂಸ್ಥೆಗಳಾಗಿವೆ ಎಂಬುದು ಅದರಲ್ಲೂ ಕೋಮುವಾದಿ ಹಿನ್ನೆಲೆಯುಳ್ಳ ಸಂಸ್ಥೆಗಳ ಹಿಡಿತದಲ್ಲಿ ಅವು ಇವೆ ಎಂಬುದು ಗಮನಿಸಬೇಕಾದ ಅಂಶ.

ಚಡ್ಡಿಗಳ ಹುನ್ನಾರ

ಪ್ರತಿಷ್ಠಿತ ಶಾಲೆಗಳು ಎನ್ನುವ ನೆಪದಲ್ಲಿ ಅಂತಹ ಮಕ್ಕಳನ್ನು ತಮ್ಮ ಸಂಸ್ಥೆಗಳಿಗೆ ಸೇರಿಸಿಕೊಂಡು ಅವರನ್ನು ಕೋಮುವಾದಿಗಳನ್ನಾಗಿ ಮಾಡುವುದು ಚಡ್ಡಿಗಳ ಹುನ್ನಾರವಾಗಿದೆ ಎಂಬುದು ಗುಟ್ಟಾಗೇನೂ ಉಳಿದಿಲ್ಲ. ಏಕೆಂದರೆ ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಅಂತಹ ಎರಡು ಶಾಲೆಗಳನ್ನು ಗುರುತಿಸಿಲಾಗಿದೆ. ಅವುಗಳ ಹಿನ್ನೆಲೆಯನ್ನು ಗಮನಿಸಿದರೆ ಕೋಮುವಾದಿಗಳ ಹುನ್ನಾರ ಏನೆಂಬುದು ಗೊತ್ತಾಗುತ್ತದೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ರಾಷ್ಟ್ರೋತ್ಥಾನ ವಿದ್ಯಾಲಯ ಎಂಬ ಸಂಸ್ಥೆ ಕಳೆದ 25 ವರ್ಷಗಳಿಂದ ಇದೆ. ಇಡೀ ರಾಜ್ಯದಲ್ಲಿನ ಆರ್.ಎಸ್.ಎಸ್.ನ ಎರಡನೇ ಕೇಂದ್ರವೂ ಇದೇ ಆಗಿದೆ. ಪ್ರತಿ ವರ್ಷವೂ ಆರ್.ಎಸ್.ಎಸ್.ನ ಓ.ಟಿ.ಸಿ. ಕ್ಯಾಂಪ್ ನಡೆಯುವುದೂ ಇದೇ ಸಂಸ್ಥೆಯಲ್ಲಿ. ಇಲ್ಲಿನ ಬಹುತೇಕ ಶಿಕ್ಷಕರು ದಿನವೂ ಚಡ್ಡಿ ಧರಿಸಿ ಲಾಠಿ ತಿರುಗಿಸಿ ಶಾಖೆ ನಡೆಸುತ್ತಾರೆ. ಈ ಸಂಸ್ಥೆಯು ಪ್ರತಿ ವರ್ಷವೂ ಮಕ್ಕಳಿಂದ ಲಕ್ಷಾಂತರ ರೂಪಾಯಿಗಳ ಡೊನೇಷನ್ ವಸೂಲಿ ಮಾಡುವುದರ ಜೊತೆಗೆ ಹಿಂದೂ ಮತೀಯವಾದ ಪ್ರಸರಣ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ.

ಇಂತಹ ಕೇಂದ್ರಕ್ಕೆ ದಲಿತ ಸಮುದಾಯದ ಮಕ್ಕಳು ಮೊದಲ ವರ್ಷ 50 ಎರಡನೇ ವರ್ಷ 50 ಒಟ್ಟು 100 ಹೀಗೆ 6ನೇ ವರ್ಷಕ್ಕೆ ಮೊದಲು ಸೇರಿದ ಮಕ್ಕಳು ಎಸ್.ಎಸ್.ಎಲ್.ಸಿ.ಗೆ ಬರುವ ವೇಳೆಗೆ ಆ ಸಂಸ್ಥೆಯಲ್ಲಿ 300 ಮಕ್ಕಳಿರುತ್ತಾರೆ. ಆರು ವರ್ಷಗಳ ಅವಧಿಯವರೆಗೆ ದಲಿತ ಸಮುದಾಯದ ಮಕ್ಕಳು ಆರ್.ಎಸ್.ಎಸ್.ನ ಹಿಡಿತಕ್ಕೆ ಸಿಕ್ಕರೆ ಅವರಲ್ಲಿ ಕನಿಷ್ಠ ಶೇ 50 ಮಕ್ಕಳಾದರೂ ಆರ್‌ಎಸ್‌ಎಸ್ ವಿಚಾರಧಾರೆಗೆ ಬದ್ಧರಾದರೂ ಭಾವೀ ಸಮಾಜದ ಗತಿ ಏನಾಗಬಹುದು ಎಂಬುದನ್ನು ಕಲ್ಪಿಸಿಕೊಂಡರೆ ಭಯವಾಗುತ್ತದೆ.

ಕೂಡ್ಲಿಗಿ ತಾಲ್ಲೂಕಿನ ಗುಡೇಕೋಟೆಯ ಸರ್ವೋದಯ ಶಾಲೆ ಎಂಬುದು ಕೂಡಾ ಪ್ರತಿಷ್ಠಿತ ಶಾಲೆ ಎಂದು ಆಯ್ಕೆಯಾಗಿದೆ. ಆ ಸಂಸ್ಥೆಯನ್ನು ಈಚೆಗೆ ಉಡುಪಿಯ ಪೇಜಾವರ ಮಠಾಧೀಶರು ತೆಗೆದುಕೊಂಡಿದ್ದಾರೆ ಎಂಬುದು ಗಮನಿಸಬೇಕಾದ ಅಂಶ.

ಒಂದೇ ಜಿಲ್ಲೆಯಲ್ಲಿ ಆಯ್ಕೆಯಾದ ಎರಡು ಕೇಂದ್ರಗಳೂ ಹಿಂದೂ ಮತೀಯವಾದಿಗಳ ಹಿಡಿತದಲ್ಲಿ ಇರುವುದನ್ನು ಗಮನಿಸಿದರೆ ಇಡೀ ರಾಜ್ಯದಲ್ಲಿ ಅದೆಷ್ಟು ಶಾಲೆಗಳು ಇಂತಹದ್ದಾಗಿವೆ ಎಂಬುದು ಇನ್ನೂ ಲೆಕ್ಕಕ್ಕೆ ಸಿಗದ ವಿಚಾರವಾಗಿದೆ.

ಸರ್ಕಾರ ಈ ಸಂಸ್ಥೆಗಳಿಗೆ ಹಣಕೊಟ್ಟು ಮಕ್ಕಳನ್ನು ಕೊಟ್ಟು ಖಾಸಗೀಕರಣ ಹಾಗೂ ಕೋಮುವಾದಿಕರಣಕ್ಕೆ ತನ್ನ ಬಹಿರಂಗ ಬೆಂಬಲ ನೀಡುತ್ತಿದೆ ಎಂಬುದು ಸ್ಪಷ್ಟ.

ರಾಜ್ಯದಲ್ಲಿನ 6 ರಿಂದ 10ನೇ ತರಗತಿಯವರೆಗೆ ಪ್ರತಿ ವರ್ಷ 1000 ಮಕ್ಕಳಂತೆ ಆರ್‌ಎಸ್‌ಎಸ್‌ನ ಕ್ಯಾಂಪ್‌ಗಳಿಗೆ ಸರ್ಕಾರಿ ಹಣದಲ್ಲಿ ಮಕ್ಕಳನ್ನು ಕೊಡುವುದು ಚಡ್ಡಿಗಳ ಹುನ್ನಾರವಲ್ಲದೇ ಬೇರಿನ್ನೇನು ಆಗಿರಲು ಸಾಧ್ಯ.

ಈ ಕೋಮುವಾದಿ ಸಂಚಿನಿಂದ ಕೂಡಿದ ಯೋಜನೆ ಕೂಡಲೇ ರದ್ದಾಗಬೇಕು.

ಪ್ರತಿಷ್ಠಿತ ಶಾಲೆಗಳ ಆಯ್ಕೆಗೆ ಮಾನದಂಡಗಳೇನು? ಖಾಸಗಿ ಸಂಸ್ಥೆಗಳೇ ಅದರಲ್ಲೂ ಆರ್‌ಎಸ್‌ಎಸ್ ಹಿನ್ನೆಲೆಯ ಶಾಲೆಗಳೇ ಪ್ರತಿಷ್ಠಿತ ಶಾಲೆಗಳೇ?

ಸರ್ಕಾರಿ ಶಾಲೆಗಳಾವುವೂ ಪ್ರತಿಷ್ಠಿತ ಶಾಲೆಗಳಲ್ಲವೇ? ಇಂತಹ ಹಲವಾರು ಪ್ರಶ್ನೆಗಳಿಗೆ ಉತ್ತರ ಪಡೆಯಲು ಸಾಮೂಹಿಕ ಪ್ರಯತ್ನ ಅಗತ್ಯ.

■ **ಸಮತ**

ದುಡಿಯುವ ವರ್ಗದ ಹೋರಾಟದ ಕಹಳೆ

ದೇಶದ ದುಡಿಯುವ ಜನರನ್ನು ಹಿಂಡಿ ಹಿಪ್ಪೆ ಮಾಡುವ ನೀತಿಗಳನ್ನು ಏನಾದರೂ ಸರಿ ನಾವು ಬಿಡೆವು ಎನ್ನುವುದು ನಮ್ಮ ಆಳುವ ಸರ್ಕಾರದ ಹಠ. ತಮ್ಮ ಬದುಕಿಗೆ ಮಾತ್ರವಲ್ಲ ದೇಶದ ಭದ್ರತೆಗೆ, ಸ್ವಾತಂತ್ರ್ಯ, ಸಾರ್ವಭೌಮತೆಗೆ ಮಾರಕವಾದ ಆರ್ಥಿಕ ಸುಧಾರಣೆಗಳನ್ನು ಜಾರಿ ಮಾಡಲು ಬಿಡೆವು ಎಂಬುದು ಕಾರ್ಮಿಕ ವರ್ಗದ ಹೋರಾಟ. ಇಂತಹ ಕಾರ್ಮಿಕ ವಿರೋಧಿ ದೇಶವಿರೋಧಿ ನೀತಿಗಳು ಹೆಚ್ಚಾದಂತೆ ಪ್ರತಿರೋಧವೂ ಹೆಚ್ಚುತ್ತಿದೆ. ಇಂತಹ ಪ್ರತಿರೋಧದ ಒಂದು ದೊಡ್ಡ ಧ್ವನಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಸಂಘಟನೆ.

ಈ ಸಿಐಟಿಯುನ ಜನರಲ್ ಕೌನ್ಸಿಲ್ ಸಭೆಯು ಮೇ 27ರಿಂದ 30ರವರೆಗೆ ಪಶ್ಚಿಮ ಬಂಗಾಳದ ರಾಜಧಾನಿ ಕೊಲ್ಕೊತ್ತಾದಲ್ಲಿ ನಡೆದಿದೆ. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ಮಂಗಲ್‌ಪಾಂಡೆ' ನೇತೃತ್ವದ ದಂಡಾಯದ ಜೊತೆ ಸಂಬಂಧಹೊಂದಿದ ಪ್ರದೇಶದಲ್ಲಿ ಈ ಸಭೆಯು ಅದರ ಸ್ಮರಣೆಯಲ್ಲಿ ನಡೆಯಿತು.

ರಾಜಸ್ಥಾನದ ಗುಜ್ಜಾರ ಸಮಾಜದ ಚಳುವಳಿಯನ್ನು ಹತ್ತಿಕ್ಕಲು ಬಿಜೆಪಿ ಸರ್ಕಾರ ನಡೆಸಿದ ದಬ್ಬಾಳಿಕೆ, ಗೋಲಿಬಾರ್, ನಂದಿಗ್ರಾಮದಲ್ಲಿ ಇಂದಿಗೂ ಮುಂದುವರಿದಿರುವ ಎಡರಂಗ ವಿರೋಧಿಗಳ ಹಿಂಸಾಚಾರ ಸೇರಿದಂತೆ ಹಲವಾರು ವಿಷಯಗಳನ್ನು ಕುರಿತು ಸಭೆಯು ಚರ್ಚಿಸಿದೆ.

ಬೀಡಿ, ಅಂಗನವಾಡಿ, ಅಸಂಘಟಿತ, ಗುತ್ತಿಗೆ ಕಾರ್ಮಿಕರು, ಸಾರ್ವಜನಿಕ ವಲಯ ಹೀಗೆ ಕಾರ್ಮಿಕ -ದುಡಿಯುವ ಜನರ ಬದುಕಿನ ಮೇಲೆ ಪರಿಣಾಮ ಬೀರುವ ಪ್ರಶ್ನೆಗಳ ಬಗೆಗೆ ಚರ್ಚಿಸಿ ಹಲವು ತೀರ್ಮಾನಗಳನ್ನು ಸಭೆಯು ಕೈಗೊಂಡಿದೆ.

ಪ್ರಧಾನ ಕಾರ್ಯದರ್ಶಿ ಆಯ್ಕೆ

ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಂ. ಚಿತ್ತಬ್ರತ ಮಜುಂದಾರ್‌ರ ಸಾವಿನ ನಂತರ ಆ ಸ್ಥಾನಕ್ಕೆ ಕಾಂ. ಮಹಮ್ಮದ್ ಅಮೀನ್ ಅವರನ್ನು ಸರ್ವಾನುಮತದಿಂದ ಸಭೆ ಆರಿಸಿತು. ತೆರವಾದ ಕಾಂ. ಅಮೀನರ ಜಾಗಕ್ಕೆ ಅಂದರೆ ಸಂಘಟನೆಯ ಉಪಾಧ್ಯಕ್ಷರಾಗಿ ಕಾಂ. ಬಸುದೇವ ಆಚಾರ್ಯ ಅವರು ಆಯ್ಕೆಯಾದರು. ಸಂಘಟನೆ ಬಲಪಡಿಸುವುದೂ ಸೇರಿದಂತೆ ವಿವಿಧ ನಿರ್ಣಯ ಕೈಗೊಳ್ಳಲಾಗಿದೆ. ○

ಬಹಿರಂಗ ಸಭೆಯಲ್ಲಿ ದುಡಿಯುವ ವರ್ಗದ ಚಳುವಳಿಯ ಹಿರಿಯ ನೇತಾರರಾದ ಎಂ.ಕೆ.ಪಂಧೆ, ಜ್ಯೋತಿಬಸು, ಬುದ್ಧದೇವ ಭಟ್ಟಾಚಾರ್ಯ ಇತರರು



ಬಹಿರಂಗ ಸಭೆಯಲ್ಲಿ ಕೆಂಬಾವುಟ, ಕೆಂಪುಕೊಡೆಗಳ ಚಿತ್ತಾರ



ಮುಂದಿನ ಹೋರಾಟದ ತೀರ್ಮಾನಗಳು

- ■ ಬೋನಸ್ ಮಿತಿ ಹೆಚ್ಚಿಸಲು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲು ಒತ್ತಾಯಿಸಿ 19.6.2007 ಪ್ರತಿಭಟನೆ.
- ■ ಅಂಗನವಾಡಿ ನೌಕರರ ಅಖಿಲ ಭಾರತ ಮುಷ್ಕರ 10.7.2007
- ■ ಅಸಂಘಟಿತ ಕಾರ್ಮಿಕರ ಬೇಡಿಕೆಗಳಿಗಾಗಿ ಹೋರಾಟ 8.8.2007
- ■ ಬೀಡಿ ಕಾರ್ಮಿಕರ ಸ್ವತಂತ್ರ ಚಳುವಳಿಗೆ ಕರೆ(ಮಾಲೀಕರ ಚಳುವಳಿಗೆ ಬೆಂಬಲವಿಲ್ಲ)
- ■ ಕಾರ್ಮಿಕರ ರೈತ, ಕೃಷಿ ಕೂಲಿಕಾರರ ಅಖಿಲ ಭಾರತ ಸಮಾವೇಶ ಸೆಪ್ಟೆಂಬರ್ 2007
- ■ ಗುತ್ತಿಗೆ ಕಾರ್ಮಿಕರ ಅಖಿಲ ಭಾರತ ಸಮಾವೇಶ
- ■ ಸಾಮೂಹಿಕ ಕ್ಷೇತ್ರದ ಕಾರ್ಮಿಕರ ಐಕ್ಯ ಹೋರಾಟ ಬಲಪಡಿಸಲು ಕರೆ.
- ■ ನಂದಿಗ್ರಾಮ ಘಟನೆಗಳ ವಾಸ್ತವಗಳನ್ನು ರಾಷ್ಟ್ರೀಯ ಪ್ರಚಾರ, ಎಡರಂಗ ಸರ್ಕಾರದ ಜನಪರ ನೀತಿಗಳ ಪ್ರಚಾರ
- ■ ಸಿಐಟಿಯು ಸದ್ಯಸ್ಯತ್ವ 50 ಲಕ್ಷ ಗುರಿ ಸಾಧನೆ ಕರೆ
- ■ ಸಿಐಟಿಯುನ ಪ್ರಥಮ ಪ್ರಧಾನ ಕಾರ್ಯದರ್ಶಿ ಕಾಂ.ಪಿ.ರಾಮಮೂರ್ತಿ ಜನ್ಮ ಶತಮಾನೋತ್ಸವದ ಅರ್ಥಪೂರ್ಣ ಆಚರಣೆ.

ಜಗದಗಲ

ಶರತ್‌ಚಂದ್ರ

ಸಿರಿವಂತ ದೇಶಗಳ ಮತ್ತು ಜನರ ಮುಖಾಮುಖಿ

ರಣಾಂಗಣವಾದ ಜಿ.8 ಸಭೆ

ಇತ್ತೀಚಿಗೆ ಜರ್ಮನಿಯ ಹೈಲಿಗೆಂಡಮ್ ನಲ್ಲಿ ನಡೆದ ಶ್ರೀಮಂತ 8 ದೇಶಗಳ (ಜಿ-8) ಗುಂಪಿನ ಶೃಂಗಸಭೆ ಭಾರೀ ಪ್ರತಿಭಟನೆಗಳ ನಡುವೆ ನಡೆದು, ಯಾವುದೇ ಗಮನಾರ್ಹ ನಿರ್ಧಾರಗಳನ್ನು ತೆಗೆದುಕೊಳ್ಳದೆ ಮುಕ್ತಾಯವಾಯಿತು. ಜಿ-8 ಶ್ರೀಮಂತ ದೇಶಗಳ, ದೈತ್ಯ ಕಂಪನಿಗಳ, ಶ್ರೀಮಂತರ ಶ್ರೀಮಂತಿಕೆ ಮತ್ತು ಹಿತಾಸಕ್ತಿಗಳನ್ನು ಕಾಪಾಡುವ ಬಗ್ಗೆ, ಚರ್ಚಿಸಿ ನೀತಿ ರೂಪಿಸುವ ಸಭೆ. ಆದರೆ ಅದು ಜಗತ್ತಿನ ಪ್ರಮುಖ ಸಮಸ್ಯೆಗಳ ಪರಿಹಾರದ ಬಗ್ಗೆ ಜಾಗತಿಕ ನೀತಿ ರೂಪಿಸಲು ಸೇರಿದ್ದೇವೆ ಎನ್ನುವ ಮೋಸು ಕೊಡುತ್ತದೆ. ಜಗತ್ತಿನ ಆರ್ಥಿಕದ ಶೇಕಡ 60 ಹೊಂದಿರುವ ಜಿ-8 ದೇಶಗಳ ನಾಯಕರು ರೂಪಿಸುವ ನೀತಿಗಳು ಹೆಚ್ಚಾಗಿ ಜಗತ್ತಿನ ಮತ್ತು ಜನತೆಯ ಸಮಸ್ಯೆಗಳನ್ನು ಇನ್ನಷ್ಟು ಉಲ್ಬಣಗೊಳಿಸುತ್ತವೆ. ಜಿ-8 ಸಭೆಯ ನಿಜವಾದ ಈ ಸ್ವರೂಪ ಹೆಚ್ಚೆಚ್ಚು ಜನರಿಗೆ ಅರ್ಥವಾಗುತ್ತಿದ್ದು, ಈ ವ್ಯಾಪಕ ಪ್ರತಿಭಟನೆಗಳ ರೂಪ ಪಡೆದಿದೆ.

ಭಾರಿ ಪ್ರತಿರೋಧ


ಪೊಲೀಸರ ಹಿಂಸಾಚಾರ

ಜಿ-8 ಶೃಂಗಸಭೆ ನಡೆದ ಬಾಲ್ಟಿಕ್ ಸಮುದ್ರತೀರದ ವಿರಾಮಧಾಮ ಈ ಒಂದು ವಾರ ರಣಾಂಗಣದಂತೆ ಇತ್ತು. ಪ್ರತಿಭಟನೆಕಾರರು ಜಿ-8 ಶೃಂಗಸಭೆ ನಿಲ್ಲಿಸಲು ಹಲವು ಪ್ರಯತ್ನಗಳನ್ನು ಮಾಡಿದರು. ವಿಕೇಂದ್ರಿತವಾಗಿ ಹಲವು ಕಡೆ ವಿರಾಮಧಾಮದ ಸುತ್ತ ನಿರ್ಮಿಸಿದ ಉಕ್ಕಿನ ಕೋಟೆಯನ್ನು ಭೇದಿಸಲು ಪ್ರಯತ್ನಿಸಿದರು. ವಿರಾಮಧಾಮಕ್ಕೆ ಹೋಗುವ ಹಾದಿಗಳೆಲ್ಲೆಲ್ಲಾ (ರಸ್ತೆ, ರೈಲು) ತಡೆ ಒಡ್ಡಿದ್ದರು. ಯುರೋಪಿನ ಮತ್ತು ಜಗತ್ತಿನ ಎಲ್ಲೆಡೆಯಿಂದ ಬಂದ ಸಾವಿರಾರು ಪ್ರತಿಭಟನೆಕಾರರು ಈ ನೇರ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು. ಪ್ರತಿಭಟನಾಕಾರರಲ್ಲಿ ಪರಿಸರವಾದಿಗಳು, ಬಡತನ ನಿರ್ಮೂಲನ, ಬಂಡವಾಳಶಾಹಿಗೆ ಬದಲಿ ಬೆಳವಣಿಗೆ, ಸಾಮ್ರಾಜ್ಯಶಾಹಿ-ವಿರೋಧಿ, ಯುದ್ಧ-ವಿರೋಧಿ, ಎಡ-ಪ್ರಗತಿಪರ - ಇತ್ಯಾದಿ ಚಳುವಳಿಗಳ ಕಾರ್ಯಕರ್ತರು, ಬೆಂಬಲಿಗರು ಇದ್ದರು. ಒಂದು ಲಕ್ಷಕ್ಕೂ ಹೆಚ್ಚು ಪ್ರತಿಭಟನಾಕಾರರು ಬೇರೆ ಬೇರೆ ರೂಪದ ಪ್ರತಿಭಟನೆಗಳಲ್ಲಿ ಭಾಗವಹಿಸಿದರು.

ಜಿ-8 ನಾಯಕರನ್ನು ಹೆಲಿಕಾಪ್ಟರ್‌ಗಳಲ್ಲಿ ಸಾಗಿಸಬೇಕಾಯಿತು. ಅವರು, ಅವರ ಸಿಬ್ಬಂದಿ, ಮಾಧ್ಯಮದವರು ಹೆಚ್ಚು ಕಡಿಮೆ ದಿಗ್ಬಂಧನ ಅನುಭವಿಸಬೇಕಾಯಿತು. ಪೋಲೀಸರು ರಾಸಾಯನಿಕ ಸ್ಪ್ರೇ, ಜಲ ಫಿರಂಗಿ, ಲಾಠೀಪ್ರಹಾರ - ಮುಂತಾದ ಅವರ ಬತ್ತಳಿಕೆಯಲ್ಲಿದ್ದ ಎಲ್ಲಾ ಅಸ್ತ್ರಗಳನ್ನು, ಹಿಂಸಾತ್ಮಕ ವಿಧಾನಗಳನ್ನು ಬಳಸಿದರು. ಹಲವು ಕಡೆ ಪೋಲೀಸರ ಹಿಂಸಾಚಾರಕ್ಕೆ ಪ್ರತಿಕ್ರಿಯೆಯಾಗಿ ಪ್ರತಿಭಟನಾಕಾರರೂ ಹಿಂಸಾಚಾರಕ್ಕೆ ಇಳಿದರು. 'ಜಿ-8 ನಿಲ್ಲಿಸಿ', 'ವಿಶ್ವಶಾಂತಿ ಈಗ ಇಲ್ಲೇ', 'ಇನ್ನೊಂದು ಜಗತ್ತು ಸಾಧ್ಯ', 'ಹವಾಮಾನ ಬದಲಾವಣೆ ತಡೆಯಲು ಕಾರ್ಯಾಚರಣೆ ಈಗಲೇ' - ಇತ್ಯಾದಿ ಪ್ರತಿಭಟನಾಕಾರರ ಘೋಷಣೆಗಳಾಗಿದ್ದವು. ಜಾಗತಿಕ ಸಮಸ್ಯೆಗಳನ್ನು - ಹವಾಮಾನ ಬದಲಾವಣೆ, ಬಡ ದೇಶಗಳ ಸಾಲದ ಹೊರೆ, ಇರಾಕ್ ಆಕ್ರಮಣ, ಸಾಮೂಹಿಕ ನಾಶದ ಮಾರಕಾಸ್ತ್ರಗಳ ಅಪಾಯ, ಬಡ ದೇಶಗಳಿಗೆ ಆರ್ಥಿಕ ನೆರವು, ನ್ಯಾಯಯುತ ಜಾಗತಿಕ ವ್ಯಾಪಾರ ಒಪ್ಪಂದ - ಜನಪರ ದೃಷ್ಟಿಯಿಂದ ಚರ್ಚಿಸಿ ಪರಿಹಾರ ಹುಡುಕುವ ಪ್ರಯತ್ನ ಮಾಡುವ - ಬದಲಿ ಶೃಂಗಸಭೆ ಸಹ ನಡೆಯಿತು.

ಬಿಕ್ಕಟ್ಟು ಬಯಲು

ಜಿ-8 ಶೃಂಗಸಭೆ ಮೊದಲೇ ಚೆಕ್ ಗಣರಾಜ್ಯದಲ್ಲಿ ನಾಟೋ ರಾಡಾರ್ ಉದ್ಘಾಟನೆಗೆ ಬುಶ್ ಭೇಟಿ, ರಶ್ಯಾದ ಅಧ್ಯಕ್ಷ ಪುಟಿನ್ ತೀವ್ರ ಪ್ರತಿಭಟನೆ, ಶೀತಲ ಸಮರ ಪುನಃ ಆರಂಭವಾಗುವ ಬೆದರಿಕೆ - ಇವುಗಳಿಂದ ಜಿ-8 ರ ಅನೈಕ್ಯತೆ, ಬಿಕ್ಕಟ್ಟು ಬಯಲಾಗಿತ್ತು. ಈಗ ತೀವ್ರ ಗಂಭೀರ ಸ್ವರೂಪ ಪಡೆದಿರುವ ಹವಾಮಾನ ಬದಲಾವಣೆ ಬಗ್ಗೆ ತುರ್ತು ಕ್ರಮದ ಅಭಾವ ಜಿ-8 ಜಾಗತಿಕ ಸಮಸ್ಯೆಗಳ ಪರಿಹಾರದಲ್ಲಿ ಪರಿಣಾಮಕಾರಿಯಾಗಿಲ್ಲ ಎಂಬುದನ್ನು ಇನ್ನೊಮ್ಮೆ ಸಿದ್ಧಪಡಿಸಿದೆ. ಹಿಂದೆ ಕ್ಯೋಟೋದಲ್ಲಿ ಹವಾಮಾನ ಬದಲಾವಣೆ ತಡೆಯಲು ಕಲ್ಮಶಕಾರಿ ಅನಿಲಗಳಲ್ಲಿ ಕಡಿತ ಜಾರಿ ಮಾಡಲು ನಿರಾಕರಿಸುವ ಬುಶ್ ಹಠಮಾರಿತನ ಇಂತಹ ತುರ್ತು ಕ್ರಮಕ್ಕೆ ದೊಡ್ಡ



ಜನರ ಪ್ರತಿರೋಧ

ತಡೆಯಾಗಿತ್ತು. ಕಲ್ಮಶಕಾರಿ ಅನಿಲಗಳ ಉತ್ಪಾದನೆಯಲ್ಲಿ ಅಮೆರಿಕಾದ ಸಿಂಹಪಾಲು ಇದು, ಕಡಿತದಲ್ಲೂ ಅದು ದೊಡ್ಡ ಪಾಲು ತೆಗೆದುಕೊಳ್ಳಬೇಕು. ತನ್ನ ಕಡಿತಕ್ಕೆ ಚೀನಾ, ಭಾರತದಂತಹ ವೇಗವಾಗಿ ಬೆಳೆಯುತ್ತಿರುವ ದೇಶಗಳ ಕಡಿತದೊಂದಿಗೆ ಕೊಂಡಿ ಹಾಕಿ ಬುಶ್ ಹಠಮಾರಿತನವನ್ನು ಜಿ-8 ಸಭೆಯಲ್ಲೂ ಮುಂದುವರಿಸಿದರು. ಪುನಃ ವಿಶ್ವಸಂಸ್ಥೆಯ ಚೌಕಟ್ಟಿನೊಳಗೆ ಈ ಬಗ್ಗೆ ಒಪ್ಪಂದಕ್ಕೆ ಬರಲು ಅಮೆರಿಕ ಒಪ್ಪಿದ್ದು ಒಂದೇ ಜಿ-8 ಸಾಧನೆಯಾಯಿತು. 2050 ರ ಹೊತ್ತಿಗೆ ಕಲ್ಮಶಕಾರಿ ಅನಿಲಗಳನ್ನು ಅರ್ಧದಷ್ಟು ಕಡಿತ ಮಾಡುವ ಜಿ-8 ಘೋಷಣೆ ಹಿಂದೆ ನಿಜವಾದ ಕಾರ್ಯಕ್ರಮ ಇಲ್ಲ. ಆಫ್ರಿಕನ್ ಬಡ ದೇಶಗಳಿಗೆ, ಏಡ್ಸ್ ಪೀಡಿತರಿಗೆ ನೆರವು ಮುಂತಾದ ಎಂದೂ ಜಾರಿಯಾಗದ ಔಪಚಾರಿಕ ಘೋಷಣೆಗಳಲ್ಲಿ ಪೀಚಾಗಿ ಜಿ-8 ಕೊನೆಗೊಂಡಿತು.

ಅಮೆರಿಕಾ - ಕಲ್ಮಶ


ಕಳೆದ ಕೆಲವು ವರ್ಷಗಳಿಂದ ಜಿ-8 ಸಭೆಗೆ ಜನಸಂಖ್ಯೆ ಮತ್ತು ಜಾಗತಿಕ ಆರ್ಥಿಕ-ರಾಜಕೀಯದಲ್ಲಿ ಗಮನಾರ್ಹ ಸ್ಥಾನ ಪಡೆದಿರುವ ಚೀನಾ, ಇಂಡಿಯಾ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾಗಳಿಗೆ ವಿಶೇಷ ಆಹ್ವಾನ ಇದೆ. ಹೊರನೋಟಕ್ಕೆ ಈ ದೇಶಗಳ ಅಭಿಪ್ರಾಯ ಕೇಳುವ ಹಾಗೆ ಕಾಣುತ್ತದೆ. ಆದರೆ ನಿಜವಾದ ಉದ್ದೇಶ ಜಾಗತಿಕ ಸಮಸ್ಯೆಗಳ ಜವಾಬ್ದಾರಿಯನ್ನು ಅವುಗಳ ತಲೆ ಮೇಲೆ ಕಟ್ಟುವುದು. ಅಮೆರಿಕ ತನ್ನ ಕಲ್ಮಶಕಾರಿ ಅನಿಲಗಳಲ್ಲಿ ಕಡಿತವನ್ನು ಚೀನಾ, ಭಾರತದ ಕಡಿತಗಳೊಂದಿಗೆ ಕೊಂಡಿ ಹಾಕಿದ್ದು ಇದಕ್ಕೆ ಉತ್ತಮ ಉದಾಹರಣೆ. ವಾಣಿಜ್ಯ ಒಪ್ಪಂದದಲ್ಲೂ ಇಂತಹದೇ ಧೋರಣೆಯನ್ನು ಶ್ರೀಮಂತ ದೇಶಗಳು ಅನುಸರಿಸಿವೆ. ಜಿ-8 ಸಭೆಯ ಸಂದರ್ಭದಲ್ಲಿ ತಮ್ಮೊಳಗೆ ಚರ್ಚೆ ನಡೆಸಿದ ಈ ದೇಶಗಳು, ಬ್ರೆಜಿಲ್ ಸಲಹೆಯಂತೆ ತಮ್ಮದೇ ಶೃಂಗಸಭೆ ನಡೆಸಲು ಮುಂದಾಗಿವೆ. ಮೆಕ್ಸಿಕೋವನ್ನು ಈ ಸಭೆಗೆ ಆಹ್ವಾನಿಸಲಾಗುತ್ತಿದೆ. ಇದನ್ನು ಜಿ-5 ಎಂದು ಕರೆಯಬಹುದು. ಜಿ-8 ಸಭೆಗೆ ವ್ಯಾಪಕ ಪ್ರತಿರೋಧ, ಜಿ-5 ಸಭೆಗೆ ಪ್ರಸ್ತಾವ ಜಿ-8 ಶೃಂಗಸಭೆಗಿಂತಲೂ ಮಹತ್ವದ ಬೆಳವಣಿಗೆ ಎನ್ನಬಹುದು.

ಚೀನಾದೊಳಗೊಂದು ಇಣುಕು

ಒಂದು ಕೋಟಿ ವಿದ್ಯಾರ್ಥಿಗಳು ಬರೆದ 'ಸಿಇಟಿ'

ಚೀನಾದಲ್ಲಿ ಕಳೆದ ವಾರ ಮೂರು ದಿನಗಳ ಕಾಲ ಎಲ್ಲಾ ನಗರಗಳಲ್ಲೂ ಟ್ರಾಫಿಕ್ ಜಾಮ್. ಹದಿ ಹರೆಯದ ಹುಡುಗ-ಹುಡುಗಿಯರ ಅವರ ಪಾಲಕರ ನೂಕು ನುಗ್ಗಲು. ಸಂಭ್ರಮ. ಆತಂಕ. ಹಲವು ಕಚೇರಿಗಳಲ್ಲಿ ಕಡಿಮೆ ಹಾಜರಾತಿ. ಇದಕ್ಕೆಲ್ಲಾ ಕಾರಣ ಮೂರು ದಿನಗಳ ಕಾಲ ಚೀನಾದಲ್ಲಿ ನಡೆದ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪರೀಕ್ಷೆ - ('ಸಿಇಟಿ'ಯ ಚೀನಿ ಅವತಾರ). ಚೀನಾದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಪ್ರವೇಶ ದೊರಕಿಸಿಕೊಳ್ಳಲು ಇದು ಪಾಸ್‌ಪೋರ್ಟ್. ಮಾಧ್ಯಮಗಳ ತುಂಬಾ ಅದೇ ದೊಡ್ಡ ಸುದ್ದಿ. ಚರ್ಚೆ. ಇಡೀ ಚೀನಾ ಪರೀಕ್ಷೆಗೆ ತಯಾರಾಗುತ್ತಿದೆಯೋ ಎಂಬಂತೆ. ಪ್ರವೇಶ ಪರೀಕ್ಷೆಯಲ್ಲಿ ಇರುವ ವಿಷಯಗಳು ಸರಿಯೇ? ವಿಧಾನ ಸರಿಯೇ? ಏನಾದರೂ ಬದಲಾವಣೆ-ಸುಧಾರಣೆಗಳು ಬೇಕೆ? ವಿದ್ಯಾರ್ಥಿಗಳ-ಪಾಲಕರ ಮೇಲೆ 'ಒತ್ತಡ' ಹೇರುವದಿಲ್ಲವೇ? ಎಂಬ ಬಗ್ಗೆ ಚರ್ಚೆ. ಪಾಲಕರು 1-2 ವಾರ ರಜಾ ಹಾಕಿ, ವಿದ್ಯಾರ್ಥಿಗಳ ಜತೆಗೂಡುವ (ಕೆಲವೊಮ್ಮೆ ಒತ್ತಡ ಹೆಚ್ಚಿಸುವ!); ಪರೀಕ್ಷೆಗೆ ವಿಶೇಷ ಟ್ಯೂಟರ್, ನರ್ಸ್, ಡಾಕ್ಟರ್ ನೇಮಿಸಿದ; ಕುಟುಂಬದ ಒಂದೇ ಕುಡಿಯ ಭವಿಷ್ಯ ಹೇಗಾಗುತ್ತೋ ಎಂಬ ಆತಂಕದಲ್ಲಿ ಮಾನಸಿಕ ಒತ್ತಡದಿಂದ ಡಾಕ್ಟರುಗಳನ್ನು ನೋಡುವ ಪರಿಸ್ಥಿತಿಗೆ ಬಂದ ಕೆಲವು ಪಾಲಕರ - ಬಗ್ಗೆ ವರದಿಗಳು. ಪರೀಕ್ಷೆಯ ದಿನ ಇಡೀ ದಿನ ಪರೀಕ್ಷೆಯ ಸ್ಥಳಗಳ ಹೊರಗೆ ಕ್ಯಾಂಪ್ ಹಾಕಿದ ಆತಂಕ ಹೊತ್ತ ಪಾಲಕರ ಟೀವಿ ಚಿತ್ರಗಳು.

ಈ ವರ್ಷ ಹಿಂದೆಂದಿಗಿಂತಲೂ ಹೆಚ್ಚು ವಿದ್ಯಾರ್ಥಿಗಳು ಈ ಪ್ರವೇಶ ಪರೀಕ್ಷೆ ತೆಗೆದುಕೊಂಡರಂತೆ - ಒಂದು ಕೋಟಿ! ಕಳೆದ ವರ್ಷಕ್ಕಿಂತ ಶೇಕಡಾ 6 ರಷ್ಟು ಹೆಚ್ಚು. ದೇಶದಲ್ಲಿರುವಂತೆ ಒಟ್ಟು 57 ಲಕ್ಷ ಸೀಟುಗಳಿವೆಯಂತೆ. ಅಂದರೆ 10 ರಲ್ಲಿ 6 ವಿದ್ಯಾರ್ಥಿಗಳಿಗೆ ಸೀಟು ಸಿಗುತ್ತದೆ. ಇದು ಚೀನಾದಲ್ಲಿ ಉಚ್ಚ ಶಿಕ್ಷಣದ ವಿಸ್ತರಣೆ ಮತ್ತು ಅದನ್ನು ಪಡೆಯಲು ಸಮಾನ ಅವಕಾಶದ ಬಗ್ಗೆ ಒಂದು ಚಿತ್ರಣ ನೀಡುತ್ತದೆ. ದಾಪುಗಾಲಿನಲ್ಲಿ ಪ್ರಗತಿಹೊಂದುತ್ತಿರುವ ಆಧುನಿಕ ಚೀನಾದಲ್ಲಿ ಉಚ್ಚ ಶಿಕ್ಷಣದ ಮಹತ್ವದ ಬಗೆಗೂ ಹೇಳುತ್ತದೆ. ಉಚ್ಚ ಶಿಕ್ಷಣ ಪಡೆದವರು ಸಮಾಜದಲ್ಲಿ ಆರ್ಥಿಕ-ಸಾಮಾಜಿಕವಾಗಿ ಉನ್ನತ ಸ್ಥಾನ ಪಡೆಯುತ್ತಾರೆ. 1977 ರಲ್ಲಿ ಮನರಾರಂಭವಾದ ಈ ಪ್ರವೇಶ ಪರೀಕ್ಷೆಗೆ ಈಗ 30 ವರ್ಷ ತುಂಬಿದೆ. ಇದಕ್ಕೆ ಮೊದಲು 'ಸಾಂಸ್ಕೃತಿಕ ಕ್ರಾಂತಿ'ಯ 10 ವರ್ಷಗಳಲ್ಲಿ ಈ ಪ್ರವೇಶ ಪರೀಕ್ಷೆ ನಿಲ್ಲಿಸಲಾಗಿತ್ತಂತೆ. ಆಗ ರಾಜಕೀಯ ಮಟ್ಟ, ಪಕ್ಷ ಮತ್ತು ಇತರ ಸಂಘಟನೆಗಳ ಶಿಫಾರಸು ಆಧಾರದ ಮೇಲೆ ವಿಶ್ವವಿದ್ಯಾಲಯಕ್ಕೆ ಪ್ರವೇಶ ನಿರ್ಧಾರವಾಗುತ್ತಿತ್ತಂತೆ. 1966ರ ಮೊದಲು ಸಣ್ಣ ಪ್ರಮಾಣದಲ್ಲಿ ಈ ಪ್ರವೇಶ ಪರೀಕ್ಷೆ ಇತ್ತು.





ಆಗಸದಲ್ಲಿ ಸಾಲುಗಟ್ಟಿ ನಿಂತಿರುವ ಗ್ರಹಗಳು - ಅಪರೂಪದ ದೃಶ್ಯ

ಇದೇ ಜೂನ್ ಮಾಸದಲ್ಲಿ ನಾಲ್ಕು ಗ್ರಹಗಳು - ಗುರು, ಶುಕ್ರ, ಬುಧ ಮತ್ತು ಶನಿ - ಗೋಚರಿಸಲಿದ್ದು ಆಕಾಶ ವೀಕ್ಷಣಾ ಪ್ರಿಯರಿಗೊಂದು ರಸದೂಟವೆನಿಸಿದೆ. ಕೋಲ್ಕತ್ತಾದ ಎಂ.ಪಿ.ಬಿರ್ಲಾ ಆಕಾಶ ವೀಕ್ಷಣಾಲಯದಲ್ಲಿ ಆಕಾಶ ವೀಕ್ಷಣೆಗಾಗಿ ಅವಶ್ಯ ಏರ್ಪಾಡು ಕೂಡ ಮಾಡಲಾಗಿದೆ. ಸೌರಮಂಡಲದಲ್ಲೇ ಅತ್ಯಂತ ದೊಡ್ಡ ಗ್ರಹವೆನಿಸಿರುವ ಗುರು, ಅತ್ಯಂತ ಚಿಕ್ಕ ಗ್ರಹವೆನಿಸಿರುವ ಬುಧ ಮತ್ತು ಅತ್ಯಂತ ಪ್ರಕಾಶಮಾನ ಗ್ರಹವಾದ ಶುಕ್ರ ಗ್ರಹಗಳ ಬಲು ಅಪರೂಪದ ದೃಶ್ಯ ಸೂರ್ಯ ಮುಳುಗಿದ ನಂತರ ದೊರಕಲಿದೆ. ಬುಧ ಗ್ರಹವು ಈಗಾಗಲೇ ಜೂನ್ ಐದರಂದು ಕಾಣಿಸಿಕೊಂಡಿದ್ದು ಜೂನ್ 30ರಂದು ಶುಕ್ರ ಗ್ರಹವು ಕಾಣಿಸಿಕೊಳ್ಳಲಿದೆ.

ಅಟ್ಲಾಂಟಿಸ್ ಗಗನನೌಕೆಯಲ್ಲಿ ತೊಡಕು?

ಕಳೆದ ವಾರವಷ್ಟೆ 'ಅಟ್ಲಾಂಟಿಸ್' ಗಗನ ನೌಕೆಯಲ್ಲಿ 7 ಗಗನಯಾತ್ರಿಗಳು ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿದ್ದು, ಈ ಗಗನ ನೌಕೆಯು 11 ದಿನಗಳ ಕಾಲ ಆಕಾಶಯಾನ ಮಾಡಿಬರಲಿದೆ. ಅಟ್ಲಾಂಟಿಸ್ ಗಗನ ನೌಕೆಯ ಉಷ್ಣತಾ ಕವಚದಲ್ಲಿ ನಾಲ್ಕು ಇಂಚಿನ ಅಗಲದ ತೂತಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಉಷ್ಣತಾ ಕವಚದ ದೋಷದಿಂದ 2003ರಲ್ಲಿ ದುರಂತಕ್ಕೀಡಾದ ಕೊಲಂಬಿಯಾ ಗಗನನೌಕೆಯ ದುರ್ಘಟನೆಯನ್ನು ಇಲ್ಲಿ ಸ್ಮರಿಸಬಹುದಾಗಿದೆ. ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲೇ ಇರುವ ಭಾರತೀಯ ಮೂಲದ ಸುನೀತಾ ವಿಲಿಯಮ್ಸ್‌ರನ್ನು ಈ ನೌಕೆ ವಾಪಸು ಹೊತ್ತು ತರಲಿದೆ. ಅವರು ಕಳೆದ ಡಿಸೆಂಬರ್‌ನಲ್ಲಿ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದು ಸುಮಾರು 192 ದಿನಗಳ ನಂತರ ವಾಪಸು ಭೂಮಿಗೆ ಬರುತ್ತಿದ್ದಾರೆ.

ಸೂರ್ಯನ ಚಲನೆಗಳನ್ನು ದಾಖಲಿಸಲು ಸಹಾಯವಾಗುವಂತೆ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಸೋಲಾರ್ ವಿದ್ಯುತ್‌ನ್ನು ಉತ್ಪಾದಿಸುವ ಪೆನೆಲ್‌ಗಳನ್ನು ಅಳವಡಿಸುವುದು 'ಅಟ್ಲಾಂಟಿಸ್' ಗಗನನೌಕೆಯ ಪ್ರಮುಖ ಕಾರ್ಯವಾಗಿದೆ. ಪ್ರತಿಯೊಂದು ಸೋಲಾರ್ ಪೆನೆಲ್ 112 ಅಡಿ ಉದ್ದವಿದ್ದು, ಈ ಪೆನೆಲ್‌ಗಳು ಅಮೇರಿಕಾದ 40



ಮನೆಗಳಲ್ಲಿ ಉಪಯೋಗಿಸಲಾಗುತ್ತಿರುವಷ್ಟು ಪ್ರಮಾಣದ ಸೌರ ವಿದ್ಯುತ್‌ನ್ನು ಉತ್ಪಾದಿಸಿ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪೂರೈಕೆ ಮಾಡುತ್ತವೆ.

ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ಭೂಮಿಯ ಮೇಲ್ಮೈನಿಂದ ಸುಮಾರು 319.6 ಕಿ.ಮೀ ಗಳಿಂದ 346.9 ಕಿ.ಮೀಗಳವರೆಗಿನ ಎತ್ತರದಲ್ಲಿ ನಿರ್ಮಿಸಲಾಗುತ್ತಿದೆ. ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಯೋಜನೆಯು ವಿಶ್ವದ ಐದು ಪ್ರಮುಖ - ಅಮೇರಿಕಾ, ರಷ್ಯಾ, ಜಪಾನ್, ಯೂರೋಪ್ ಮತ್ತು ಕೆನಡಾ - ಬಾಹ್ಯಾಕಾಶ ಸಂಶೋಧನಾ ಕೇಂದ್ರಗಳ ಜಂಟಿ ಯೋಜನೆಯಾಗಿದೆ. ಇದರ ನಿರ್ಮಾಣ ಕಾರ್ಯ ಅಂದಾಜು 2010ನೇ ಇಸವಿಯಷ್ಟರಲ್ಲಿ ಪೂರ್ಣಗೊಳ್ಳಲಿದೆ. ಪ್ರಸ್ತುತ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವು ಇದುವರೆಗಿನ ಇನ್ನೆಲ್ಲ ಬಾಹ್ಯಾಕಾಶ ನಿಲ್ದಾಣಗಳಿಗಿಂತ ಹೆಚ್ಚಿನ ಸೌಕರ್ಯಗಳು ಮತ್ತು ಉಪಕರಣಗಳನ್ನು ಈಗಾಗಲೇ ಹೊಂದಿದೆ.

ಸೆಪ್ಟೆಂಬರ್ 2008ರಲ್ಲಿ 'ಹಬಲ್' ಎಂಬ ಹೆಸರಿನ ಬಾಹ್ಯಾಕಾಶ ದೂರದರ್ಶಕವನ್ನು ರಿಪೇರಿ ಮಾಡಲು ನಾಸಾ ಯೋಜಿಸಿದೆ. ○

ಕುಮಾರಸ್ವಾಮಿಯವರ ಪ್ಲಾಪ್ ಸಿನಿಮಾ ಕಥೆಯೂ....

ಪುಟ 8 ರಿಂದ

ಬಂದಾಗಲಿಂದ, ವಿಶ್ವ ವಾಣಿಜ್ಯ ಸಂಸ್ಥೆಯ ಒಪ್ಪಂದಕ್ಕೆ ಭಾರತ ಸಹಿ ಹಾಕುವ ಸಮಯದಲ್ಲಿಯೇ ಎತ್ತುತ್ತಾ ಬಂದಿರುವ ಪ್ರಶ್ನೆಗಳೂ ಆಗಿವೆ. ಭಾರತಕ್ಕೆ ಕರ್ನಾಟಕಕ್ಕೆ ಸೂಕ್ತವಾದ ಕೃಷಿ ಮಾದರಿಯ ಪ್ರಶ್ನೆಯೂ ಆಗಿದೆ. ಸಿಪಿಐ(ಎಂ) ಕೇವಲ ಸಮಸ್ಯೆಗಳನ್ನು ಮಾತ್ರ ಎತ್ತಿಲ್ಲ. ಅದಕ್ಕೆ ಪರಿಹಾರವನ್ನು ಪರ್ಯಾಯ ನೀತಿಗಳನ್ನು ಸೂಚಿಸಿದೆ. ಜನರ ಮುಂದೆ ತೆರೆದಿಟ್ಟಿದೆ.

ಅಖಿಲ ಭಾರತ ಕಿಸಾನ್ ಸಭಾ ಮತ್ತು ಸಿಪಿಐ(ಎಂ) ಪರ್ಯಾಯ ನೀತಿಗಳನ್ನು ಜಾಗತೀಕರಣದ ಮೊದಲು ಮತ್ತು ನಂತರ ಕೃಷಿಯ ಬಗೆಗಿನ ವಾಸ್ತವಾಂಶಗಳನ್ನು ಅಧ್ಯಯನ ಮಾಡಿಯೇ ಜನಪರ ಅರ್ಥಶಾಸ್ತ್ರಜ್ಞರ ಜೊತೆ ಸಮಾಲೋಚಿಸಿಯೇ ರೂಪಿಸಿದ್ದವು. ಅಂತಹ ಒಂದೆರಡು ಅಂಶಗಳ ಬಗ್ಗೆ ವಾಸ್ತವ ಮಾಹಿತಿ ಇಲ್ಲಿದೆ.


ಒಂದು ಭಾರತಕ್ಕೆ ಆಮದಾಗುತ್ತಿರುವ ಕೃಷಿ ಫಸಲುಗಳ ಪ್ರಮಾಣ ಚಿತ್ರ -1ರಲ್ಲಿದೆ. ಇದು ಬಹಳ ಸ್ಪಷ್ಟವಾಗಿ ತೋರಿಸುವಂತೆ 1994 ರಿಂದ ಏರುತ್ತಾ ಈಗ ಮೂವರಿಂದ ಐದುಪಟ್ಟು ಹೆಚ್ಚಾಗಿದೆ. 2003, 2004 ರಲ್ಲಿ ತೀವ್ರಗತಿಯಲ್ಲಿ ಏರುತ್ತಿದೆ. ಇದು ಭಾರತದಲ್ಲಿ ರೈತರು ಪಡೆಯುವ ಬೆಲೆಯನ್ನು ವಿಪರೀತ ಏರುಪೇರುಗಳಿಗೆ-ಅದರಿಂದಾಗಿ ಸಂಕಷ್ಟಗಳಿಗೆ ತುತ್ತಾಗಿಸಿದೆ.

ಎರಡು, ಕೃಷಿಗೆ ಉಪಯೋಗಿಸುವ ಪರಿಕರಗಳ ಬೆಲೆ ಮತ್ತು ಕೃಷಿಯ ಉತ್ಪನ್ನಗಳ ಬೆಲೆ ನಡುವಿನ ಸಂಬಂಧ ಚಿತ್ರ 2 ರಲ್ಲಿದೆ! 1970 ದಶಕದಲ್ಲಿ ಹಸಿರು ಕ್ರಾಂತಿಗೆ ಅನುಕೂಲವಾಗಿ ಕೃಷಿ ಲಾಭದಾಯಕವಾಗಿ ಬೆಲೆ ಸಿಗುವಂತೆ ನೀತಿಗಳನ್ನು ಏರ್ಪಡಿಸಿದ್ದ ಕೇಂದ್ರ ಸರ್ಕಾರ ನಂತರ ಅದು ಕೃಷಿಗೆ ಪ್ರತಿಕೂಲವಾಗಿ ಪರಿಣಮಿಸುವ ನೀತಿಗಳನ್ನು ಅನುಸರಿಸಿತು. ಕೃಷಿಗೆ ಬಳುಸವ ಪರಿಕರಗಳ ಬೆಲೆ ಕಡಿಮೆಯಿದ್ದು ಫಸಲುಗಳ ಬೆಲೆಯ ಪ್ರಮಾಣ 150ರಷ್ಟು ಹೆಚ್ಚಿನ ದರದಲ್ಲಿದ್ದದ್ದು 89-90 ರಿಂದ ಪ್ರತಿಕೂಲವಾಗಿ ಫಸಲುಗಳ ಬೆಲೆ ಕಡಿಮೆಯಾಗಿ ಕೃಷಿಗೆ ಬೆಳೆಸುವ ಪರಿಕರಗಳ ಬೆಲೆಯ ಪ್ರಮಾಣ

ಚಿತ್ರ 1. ಭಾರತ ಮಾಡಿಕೊಂಡ ಕೃಷಿ ಉತ್ಪನ್ನಗಳ ಆಮದು ಪ್ರಮಾಣ (ಮಿಲಿಯನ್ ಡಾಲರ್‌ಗಳಲ್ಲಿ)



ಚಿತ್ರ 2. ಕೃಷಿಗೆ ಉಪಯೋಗಿಸುವ ಪರಿಕರಗಳ ಬೆಲೆ ಮತ್ತು ಕೃಷಿಯ ಉತ್ಪನ್ನಗಳ ಬೆಲೆ ನಡುವಿನ ಸಂಬಂಧ



ಹೆಚ್ಚಾಯಿತು. ಇಡೀ ಒಂದು ದಶಕದ ಕಾಲ ಕೃಷಿಗೆ ಪ್ರತಿಕೂಲವಾಗಿಯೇ ಇದೆ. ಇದೇ ರೈತರು ಹೆಚ್ಚು ಸಾಲಕ್ಕೆ ತುತ್ತಾಗಲು ಆತ್ಮಹತ್ಯೆಗಳನ್ನು ಮಾಡಿಕೊಳ್ಳಲು ಕಾರಣ.

ಪರ್ಯಾಯ ನೀತಿ ಬೇಕು

ರೈತ ವಿರೋಧಿಯಾದ ನೀತಿಗಳನ್ನು ಅನುಸರಿಸುವುದರಲ್ಲಿ ಕೇಂದ್ರ ಸರ್ಕಾರದ ನೀತಿಗಳೇ ಪ್ರಧಾನ. ಆದರೆ ಅದೇ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು, ಜನತಾದಳದ 1994 ರಾಜ್ಯ ಸರ್ಕಾರವಾಗಲಿ ಈಗಿನ ಸಮ್ಮಿಶ್ರ ಸರ್ಕಾರವಾಗಲಿ ರೂಪಿಸಿದ ಕೃಷಿ ನೀತಿ ಕೇಂದ್ರ ಸರ್ಕಾರದ ನೀತಿಯನ್ನೇ ಅನುಸರಿಸುತ್ತದೆ. ಆ ಕುಮಾರಸ್ವಾಮಿಯವರು ತಮ್ಮದೇ ಸರ್ಕಾರ ರೂಪಿಸಿದ ಕೃಷಿ ನೀತಿಯ ಅಪಾಯಗಳನ್ನೂ ಅರಿತು ಅದನ್ನು ಕಿತ್ತೆಸೆಯಬೇಕು. ಪರ್ಯಾಯ ನೀತಿಗಳನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿಯಾದರೂ ಜಾರಿಗೆ ತರಬೇಕು.ಈ ಪರ್ಯಾಯ ನೀತಿಗಳನ್ನು ಜಾರಿಗೆ ತಂದರೆ ಆತ್ಮಹತ್ಯೆಗಳನ್ನು ನಿಲ್ಲಿಸಬಹುದೇ ಎಂಬ ಪ್ರಶ್ನೆ ಕೇಳಬಹುದು. ಈ ಪರ್ಯಾಯ ನೀತಿಗಳ ಯಶಸ್ಸು ಪಶ್ಚಿಮ ಬಂಗಾಳದಲ್ಲಿ ಜಗಜ್ಜಾಹಿರಾಗಿದೆ. ಕೇರಳದಲ್ಲಿಯೂ ಆತ್ಮಹತ್ಯೆಗಳನ್ನು ತಡೆಗಟ್ಟುವಲ್ಲಿ ಜಗಜ್ಜಾಹಿರಾಗಿದೆ. ಪಶ್ಚಿಮ ಬಂಗಾಳದಲ್ಲಿ ರೈತರ ಆತ್ಮಹತ್ಯೆಗಳೇ ಇಲ್ಲ. ಮಾತ್ರವಲ್ಲ ಇಡೀ ದೇಶದಲ್ಲಿ ಅತಿ ಹೆಚ್ಚು ಕೃಷಿ ಬೆಳವಣಿಗೆಯನ್ನು ಹೊಂದಿದ ರಾಜ್ಯವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕೊಳ್ಳುವ ಶಕ್ತಿ ಹೆಚ್ಚುತ್ತಿರುವ ರಾಜ್ಯವಾಗಿದೆ. ಆದ್ದರಿಂದ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಅದರ ಮುಖ್ಯಮಂತ್ರಿಗಳು ರಾಜ್ಯದ ಕೃಷಿ ಬಿಕ್ಕಟ್ಟನ್ನು ಪರಿಹರಿಸುವ ಬಗ್ಗೆ, ಆತ್ಮಹತ್ಯೆಗಳನ್ನು ತಡೆಗಟ್ಟುವ ಬಗ್ಗೆ ಪ್ರಾಮಾಣಿಕ ಆಸಕ್ತಿಯಿದ್ದರೆ ಈ ಪರ್ಯಾಯ ನೀತಿಗಳನ್ನು ಹಲವು ವರ್ಷಗಳಿಂದ ರೂಪುಗೊಂಡಿರುವ, ಜಾರಿ ಮಾಡಿ ಯಶಸ್ಸು ಖಾತರಿಯಾಗಿರುವ ನೀತಿಗಳನ್ನು ಅಭ್ಯಸಿಸಬಹುದು ಕೂಡಲೇ ಜಾರಿಗೆ ತರಬಹುದು. ಆದುದರಿಂದ ಕುಮಾರಸ್ವಾಮಿಯವರೇ ನಾಟಕ ನಿಲ್ಲಿಸಿ ಕೊಂಚವಾದರೂ ಪ್ರಾಮಾಣಿಕತೆ ಇರಲಿ ಎಂದು ಇಡೀ ಕರ್ನಾಟಕದ ಜನತೆ ಸಾರಿ ಹೇಳಬೇಕಾಗಿದೆ. ○

'ಸೊರಗಿದ ಬದುಕಿಗೆ ಸೂರೊಂದ ನೀಡಿ'

ಪುಟ 5 ರಿಂದ

ಎಸಿಸಿ ರೆಡಿಮಿಕ್ಸ್, ಆಟೋ ಚಾಲಕರು ಅರ್ಜಿಗಳನ್ನು ತುಂಬಿದ್ದಾರೆ. ಕಾರ್ಯಕರ್ತರು ವ್ಯಾಪಕ ತಯಾರಿಗಳಲ್ಲಿ ನಿರತರಾಗಿದ್ದಾರೆ. ಈ ಪ್ರದೇಶದಿಂದ 4000 ಜನ ಹೋರಾಟಗಳಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಇದರ ಜೊತೆಯಾಗಿ ಡಿವೈಎಫ್‌ಐ ಸದಸ್ಯತ್ವ ಕೂಡ ನಡೆಯುತ್ತಿದೆ. ಮುಖ್ಯವಾಗಿ ಈ ವಲಯಗಳಲ್ಲಿ ಡಿವೈಎಫ್‌ಐ ಈ ಹೋರಾಟದ ನೇತೃತ್ವ ವಹಿಸಿದೆ.

ಪೂರ್ವ ವಲಯ : 6000 ಅರ್ಜಿಗಳು ಈಗಾಗಲೇ ಭರ್ತಿಯಾಗಿವೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಪಟ್ಟಭದ್ರರ ಪ್ರತಿರೋಧದ ನಡುವೆಯೂ ತಯಾರಿ ಬಿರುಸಿನಿಂದ ಸಾಗಿದೆ. ಎಲ್ಲಾ ಕಡೆ ಬಹಿರಂಗ ಸಭೆಗಳು ನಡೆಯುತ್ತಿವೆ. ಹೋರಾಟದಲ್ಲಿ 2000ಕ್ಕೂ ಮಿರಿ ಜನ ಭಾಗವಹಿಸುವ ನಿರೀಕ್ಷೆ ಇದೆ.

ರಾಜಾಜಿನಗರ ವಲಯ : ಹೋರಾಟ ಸಮಿತಿಗಳು ರಚನೆಯಾಗಿ 5 ಸಾವಿರ ಅರ್ಜಿ ಭರ್ತಿ ಮಾಡಿದ್ದಾರೆ. ಜನ ಸಾಲುಗಟ್ಟಿ ಅರ್ಜಿ ತುಂಬುತ್ತಿದ್ದಾರೆ. ಹಲವಾರು ಕಡೆ ಬಹಿರಂಗ ಸಭೆಗಳು ನಡೆದಿವೆ. ಹೋರಾಟದಲ್ಲಿ 5000 ಜನ ಭಾಗವಹಿಸುವ ನಿರೀಕ್ಷೆಯಿದೆ. ಕಾರ್ಯಕರ್ತರು ಬಿರುಸಿನ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

ಯಶವಂತಪುರ ವಲಯ : 2700 ಅರ್ಜಿಗಳು ಈಗಾಗಲೇ ಕೈ ಸೇರಿದ್ದು, ಈ ಕಡೆ ಬಾಡಿಗೆದಾರರ, ಗೂಂಡಾಗಳ ಧಾಳಿಯನ್ನು ಎದುರಿಸಿ ತಯಾರಿ ನಡೆದಿದೆ. ಬಹಳ ಮುಖ್ಯವಾಗಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಬೀಡಿ ಕಾರ್ಮಿಕರು ಪ್ರತ್ಯೇಕವಾಗಿ ಅರ್ಜಿಗಳನ್ನು ತುಂಬಿದ್ದಾರೆ. ಹೋರಾಟದಲ್ಲಿ 2000 ಜನ ಭಾಗವಹಿಸುವ ಸಾಧ್ಯತೆ ಇದೆ.

ಒಟ್ಟಾರೆ ಹೋರಾಟದ ಸಿದ್ಧತೆಯಲ್ಲಿ ಸಿಪಿಐ(ಎಂ) ಹಾಗೂ ಹೊರಾಟ ಸಮಿತಿಯ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರು ಹಗಲಿರುಳೆನ್ನದೆ ದುಡಿಯುತ್ತಿದ್ದಾರೆ. ಇದೊಂದು ಪ್ರಬಲವಾದ ಚಳುವಳಿಯಾಗಲಿದ್ದು ಬೆಂಗಳೂರು ಜನತೆಯ ಹೋರಾಟದ ಹಾದಿಯಲ್ಲಿ ಈ ಹೋರಾಟ ಒಂದು ಮೈಲಿಗಲ್ಲಾಗಲಿದೆ.

■ ಲಿಂಗರಾಜು



ಕೌಟುಂಬಿಕ ಮೌಲ್ಯವನ್ನು ಬಿತ್ತುವ 'ಶಾಂತಿ ನಿವಾಸ'

'ತಾರೆಯು ಬೆಳಗೋದು, ತಂಪನು ನೀಡೋದು ಚಂದ್ರನ ಕೆಲಸವಂತೆ. ನಾನು ಚಂದ್ರನಾದೇನೇ?'. ಖಂಡಿತಾ ಸಾಧ್ಯ, ಇನ್ನೊಬ್ಬರಿಗೆ ಕೇಡನ್ನು ಬಗೆಯದೆ, ಪ್ರೀತಿ - ಸಂತೋಷಗಳನ್ನು ಹಂಚಿಕೊಂಡು ಬದುಕಿದರೆ. ಇಂತಹ ಆಶಯವುಳ್ಳ, ಮರೆತ ಮಾನವೀಯ, ಕೌಟುಂಬಿಕ ಮೌಲ್ಯಗಳು ನೆನಪಿಸುವಂತಹ ಚಿತ್ರ 'ನಂ. 72 ಶಾಂತಿನಿವಾಸ'. ಹಿಂದಿಯಲ್ಲಿ ಹೃಷಿಕೇಶ್ ಮುಖರ್ಜಿಯವರು ಸುಮಾರು ಮೂರು ದಶಕಗಳ ಹಿಂದೆ 'ಬಾವಾರ್ಚಿ' ಹೆಸರಲ್ಲಿ ತೆಗೆದ ಒಂದು ಉತ್ತಮ ಚಿತ್ರವನ್ನು ಕನ್ನಡೀಕರಿಸಿದ್ದಾರೆ ಸುದೀಪ್.

ಮಧ್ಯಮ ವರ್ಗದ ಜನರ ಬದುಕು-ಬವಣೆಗಳೇ ಹೃಷಿಕೇಶ್ ಮುಖರ್ಜಿಯವರ ಚಿತ್ರದ ಕಥೆಗಳಾಗುತ್ತಿದ್ದವು. ಲಘು ಹಾಸ್ಯದೊಂದಿಗೆ ಸರಳವಾಗಿ ನಿರೂಪಿಸುತ್ತಿದ್ದ ಅವರು ತಮ್ಮ ಚಿತ್ರಗಳಲ್ಲಿ ಮಾನವೀಯ ಮೌಲ್ಯಗಳಿಗೆ ಒತ್ತು ನೀಡುತ್ತಿದ್ದರು. ಗುಡ್ಡಿ, ಅಭಿಮಾನ್, ಆನಂದ್, ಗೋಲ್‌ಮಾಲ್, ಬಾವಾರ್ಚಿ ಇದಕ್ಕೆ ಕೆಲವು ಉದಾಹರಣೆಗಳು.

ಶಾಂತಿನಿವಾಸದ ಕಥೆ

'ಶಾಂತಿನಿವಾಸ' ಹೆಸರಿನ ಮನೆ ಅಶಾಂತಿಯ ಗೂಡಾಗಿರುತ್ತದೆ. ಮನೆಗೊಬ್ಬ ಹಿರಿಯ (ಮಾ. ಹಿರಣ್ಣಯ್ಯ), ಆತನಿಗೆ ಮೂವರು ಮಕ್ಕಳು(ಶ್ರೀನಿವಾಸಮೂರ್ತಿ, ರಮೇಶ್ ಭಟ್, ಕೋಮಲ್), ಇಬ್ಬರು ಸೊಸೆಯರು(ವೈಶಾಲಿ ಕಾಸರವಳ್ಳಿ, ಚಿತ್ರ ಶೆಣೈ), ಮೂವರು ಮಕ್ಕಳು(ಅನು ಪ್ರಭಾಕರ್, ದೀಪು, ಬಾಲ ಕಲಾವಿದ). ಯಾರಿಗೂ ಹೊಂದಾಣಿಕೆಯಿಲ್ಲ, ಅಪ್ಪನ ಆಸ್ತಿ, ಪೆಟ್ಟಿಗೆಯಲ್ಲಿರುವ ಬಂಗಾರದ ಸಲುವಾಗಿ ಅನಿವಾರ್ಯವಾಗಿ ಒಟ್ಟಾಗಿರುತ್ತಾರೆ. ಮನೆಗೆಲಸವನ್ನೂ ಮಾಡಿಕೊಳ್ಳದೆ ಮೈಗಳ್ಳರಾಗಿ ಇನ್ನೊಬ್ಬರನ್ನು ದೂಷಿಸುತ್ತಾ ನೆಮ್ಮದಿ ಕಳೆದುಕೊಂಡು ಚಡಪಡಿಸುತ್ತಿರುತ್ತಾರೆ ಆ ಕುಟುಂಬದ ಸದಸ್ಯರು. ಅವರ ಮನೆಯ ಕೆಲಸಕ್ಕೆ ಬರುವವರು ಒಂದು



ವಾರಕ್ಕಿಂತ ಹೆಚ್ಚು ದಿನ ಇರಲಾಗುವುದಿಲ್ಲ, ಅಷ್ಟಿರುತ್ತದೆ ಇವರ ಕಿರುಕುಳ. ಇಂತಹ ಮನೆಗೆ ಅಡುಗೆ ಭಟ್ಟನಾಗಿ ಬರುತ್ತಾನೆ ರಘು (ಸುದೀಪ್). ಬಿಂಕ-ಬಿಗುಮಾನ, ಒಣ ಜಂಭಗಳಿಂದ ಸೆಟೆದುಕೊಂಡಿದ್ದ ಕುಟುಂಬದ ಸದಸ್ಯರು ರಘುವಿನ ಪ್ರೀತಿಯ ಸಿಂಚನದಿಂದ ಬಿಗುಮಾನ ಬಿಟ್ಟು ಮುಗುಳ್ನಗುತ್ತಾರೆ.

'ಎಲ್ಲರೂ ಅವರವರ ಕೆಲಸ ಮಾಡಿಕೊಳ್ಳುತ್ತಾರೆ, ಒಮ್ಮೆ ಬೇರೆಯವರ ಕೆಲಸ ಮಾಡಿಕೊಡಿ. ಅದರಿಂದ ಸಿಗುವೇ ಖುಷಿಯೇ ಬೇರೆ' ಎನ್ನುವ ಸಹಕಾರದ ಮಾತುಗಳು ನೋಡುಗರಲ್ಲೂ ಪರಿಣಾಮ ಬೀರುತ್ತವೆ. ದೊಡ್ಡ ದೊಡ್ಡ ಆಸೆಗಳ ಬೆನ್ನು ಹತ್ತಿ, ಕಣ್ಣಮುಂದಿರುವ ಸಣ್ಣ ಸಣ್ಣ ಸಂತೋಷಗಳ ಖುಷಿಯನ್ನು ಕಳೆದುಕೊಳ್ಳುವುದನ್ನು ಬೊಟ್ಟು ಮಾಡಿ ತೋರಿಸಿ, ಇಂತಹ ಸಂತೋಷಗಳನ್ನು ಅನುಭವಿಸುವುದನ್ನು ಕಲಿಸಿಕೊಡುತ್ತಾನೆ.

ಪ್ರೀತಿ-ವಾತ್ಸಲ್ಯ ಎಲ್ಲರ ಮನಸ್ಸಿನಲ್ಲೂ ಇರುತ್ತದೆ. ಆದರೆ ಅಜ್ಞಾನದ ಧೂಳು ಅದನ್ನು ಆವರಿಸಿ, ಇತರರನ್ನು ಅಪನಂಬಿಕೆಯಿಂದ ನೋಡುವ ಮನೋಭಾವ ಬೆಳೆಸಿಕೊಂಡಿರುತ್ತಾರೆ. ರಘು ಆ ಧೂಳನ್ನು ಒರೆಸುವ ಕೆಲಸವನ್ನು ಮಾತ್ರ ಮಾಡುತ್ತಾರೆ. ಈ ಚಿತ್ರ ಒಂದು ಕುಟುಂಬದ ಕಥೆಯೇ ಆದರೂ, ಚಿತ್ರದ ಆಶಯವನ್ನು ಸಮಷ್ಟಿಯಾಗಿ ಭಾವಿಸುವುದರಲ್ಲಿ ತಪ್ಪೇನಿಲ್ಲ. ದ್ವೇಷ, ಅಸೂಯೆ, ನೆರೆಹೊರೆಯವರಲ್ಲಿ ಅಪನಂಬಿಕೆಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಎಲ್ಲರ ಮನದಲ್ಲಿ ಒಲವಿನ ಹಣತೆಯನ್ನು ಹಚ್ಚುವ ಪ್ರಯತ್ನ ಶ್ಲಾಘನೀಯ.

ಸುದೀಪ್ ಅವರ ಅಭಿರುಚಿ, ಒಳ್ಳೆಯದನ್ನು ನೀಡಬೇಕೆನ್ನುವ ಸಾಮಾಜಿಕ ಕಳಕಳಿ 'ಶಾಂತಿನಿವಾಸ'ದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ತಮ್ಮ ಹಿಂದಿನ ಚಿತ್ರ 'ಮೈ ಆಟೋಗ್ರಾಫ್'ನಲ್ಲೂ ಇಂತದ್ದೇ ಪ್ರಯತ್ನ ಮಾಡಿದ್ದರು. ಮುಂದೆಯೂ ತಮ್ಮ ನಿರ್ಮಾಣದ, ನಿರ್ದೇಶನದ ಚಿತ್ರಗಳು ಉತ್ತಮ ಆಶಯಗಳನ್ನು ಹೊಂದಿರುವಂತಹವೇ ಆಗಿರುತ್ತದೆಂದು ಹೇಳಿರುವ ಸುದೀಪ್ ಸಿನಿಮಾ ಕಾಳಜಿ ಮೆಚ್ಚುವಂತದ್ದು. ಇತರರು ಹಣ ಗಳಿಕೆಗಾಗಿ ಪರಭಾಷೆಯ ಕೆಟ್ಟ ಚಿತ್ರಗಳನ್ನು ಭಟ್ಟಿ ಇಳಿಸುತ್ತಿರುವುದನ್ನು ವಿರೋಧಿಸುತ್ತಲೇ ಉತ್ತಮ ಆಶಯವುಳ್ಳ ಇಂತ[illegible] ರಿಮೇಕ್ ಚಿತ್ರಗಳನ್ನು ಪ್ರೋತ್ಸಾಹಿಸಬೇಕಿದೆ.

ಸುದೀಪ್ ಭಾವಾಭಿನಯ ಮನಮುಟ್ಟುತ್ತ[illegible] ಸಾಂಪ್ರದಾಯಿಕ ಚೆಲುವೆ ದೀಪು ಗಮ[illegible] ಸೆಳೆಯುತ್ತಾಳೆ. ಹಿರಣ್ಣಯ್ಯ, ಶ್ರೀನಿವಾಸ ಮೂರ್ತಿ[illegible] ರಮೇಶ್‌ಭಟ್, ವೈಶಾಲಿ ಮುಂತಾದವರು ನಟ[illegible] ಚಿತ್ರಕ್ಕೆ ಪೂರಕವಾಗಿದೆ. ಚಿತ್ರದ ವಿಶೇ[illegible] ಆಕರ್ಷಣೆಯೆಂದರೆ ಆರಂಭದ[illegible] ಶಿವರಾಜ್‌ಕುಮಾರ್ ಚಿತ್ರದ ಪಾತ್ರಗಳ[illegible] ಪರಿಚಯಿಸುವ ರೂಪದಲ್ಲಿ ಮತ್ತು ಅಂತಿಮವಾ[illegible] ವಿಷ್ಣು ಚಿತ್ರದ ಆಶಯವನ್ನು ಪ್ರೇಕ್ಷಕರಿಗೆ ಮುಟ್ಟಿಸ[illegible] ಪಾತ್ರದಲ್ಲಿ ಗಮನ ಸೆಳೆಯುತ್ತಾರೆ.

ಏನಿದು 'ಶಿವಾಜಿ' ಗದ್ದಲ ?

ತಮಿಳು ಸೂಪರ್‌ಸ್ಟಾರ್ ರಜನಿಕಾಂತ್ ಅಭಿನಯದ ಬಹು ನಿರೀಕ್ಷಿತ ಶಿವಾಜಿ ಜೂನ್ 15ರ ಶುಕ್ರವಾರ ಭಾರಿ ಪ್ರಚಾರದೊಂದಿಗೆ ತೆರೆಕಂಡಿತು. ಅದರ ಆರಂಭವೇ ವಾತಾವರಣದಲ್ಲಿ ಸಾಕಷ್ಟು ಬಿಸಿ ಏರಿಸಿದೆ. ಶಿವಾಜಿ ಚಿತ್ರ ವಾರದ ಟಿಕೆಟ್‌ಗಳಲ್ಲಿ ಮುಂಚಿತವಾಗಿಯೇ ಮಾರಾಟವಾಗಿದ್ದವು.

ವಿದೇಶದಿಂದ ಸಾಕಷ್ಟು ಹಣ ಮಾಡಿದ ಯುವಕನೊಬ್ಬ (ಶಿವಾಜಿ) ಸಮಾಜ ಸೇವೆಯ ಹಂಬಲದೊಂದಿಗೆ ಭಾರತಕ್ಕೆ ಬರುತ್ತಾನೆ. ಆದರೆ ಇಲ್ಲಿನ ಭ್ರಷ್ಟಾಚಾರ ಅವನನ್ನು ಕಿತ್ತು ತಿಂದು ನಿರ್ಗತಿಕನನ್ನಾಗಿಸುತ್ತವೆ. ಕೋಟ್ಯಾಧೀಶನಾಗಿದ್ದ ತನ್ನನ್ನು ನಿರ್ಗತಿಕನನ್ನಾಗಿಸಿದ ಭ್ರಷ್ಟ ವ್ಯವಸ್ಥೆ ವಿರುದ್ಧ ಸವಾಲೊಡ್ಡುವ ಕತೆಯಂತೆ ಶಿವಾಜಿಯದ್ದು.

ಇದು ಸಾಮಾನ್ಯ ಮಸಾಲೆ ಚಿತ್ರವೇ. ಆದರೆ ಸೂಪರ್‌ಸ್ಟಾರ್ ರಜನಿ ಅಭಿನಯದ ಕಾರಣಕ್ಕಾಗಿಯೇ ಅದ್ಭುತ ಯಶಸ್ಸು, ಸ್ಟೈಲ್ ಕಿಂಗ್‌ನ ಅಭಿನಯವೇ ಇಡೀ ಚಿತ್ರದ ಜೀವಾಳ, ಅದರೊಂದಿಗೆ ಎ.ಆರ್.ರೆಹಮಾನ್ ಸಂಗೀತ ನೀಡಿರುವುದು ಪ್ರಮುಖ ಕಾರಣ ಎನ್ನಲಾಗಿದೆ.

ಶಿವಾಜಿ ಚಿತ್ರಕಥೆಗಿಂತ ಮುಖ್ಯವಾಗಿ ಹಲವು ವಿಭಿನ್ನ ಕಾರಣಗಳಿಂದ ಬಿಡುಗಡೆಗೆ ಮುನ್ನವೇ ಗಮನ ಸೆಳೆದಿತ್ತು. ಅದರಲ್ಲಿ ಮೊದಲನೆಯದು ಯಥಾ ಪ್ರಕಾರ ರಜನಿ ಸ್ಟೈಲ್ ವೀಕ್ಷಿಸಲು ಹಾತೊರೆಯುವ ಅಭಿಮಾನಿಗಳ ಹುಚ್ಚು ಮತ್ತು ಇದು ರಜನಿಕಾಂತ್ ಅವರ



100ನೇ ತಮಿಳು ಚಿತ್ರ ಎನ್ನುವ ಕಾರಣ. ಅಲ್ಲದೆ, ಈ ಸಿನಿಮಾದ ಅಭಿನಯಕ್ಕಾಗಿ ರಜನಿ ಬರೋಬ್ಬರಿ 40 ಕೋಟಿ ಸಂಭಾವನೆ ಪಡೆದಿರುವುದು ಇತ್ಯಾದಿ.

ಸದ್ಯ ಶಿವಾಜಿ ಜಗತ್ತಿನ 27 ದೇಶಗಳ 2900 ಚಿತ್ರಮಂದಿರಗಳಲ್ಲಿ ತೆರೆಕಂಡಿದೆಯಂತೆ. ಅದರಲ್ಲಿ ಭಾರತವೊಂದರಲ್ಲೇ 2200 ಥೇಟರ್‌ಗಳಲ್ಲಿ ಸರಿ ಸುಮಾರು ತಿಂಗಳ ಮುಂಚಿ ಟಿಕೇಟ್‌ಗಳು ಮಾರಾಟವಾಗಿವೆಯಂತೆ. ಚಿತ್ರ ಪ್ರದರ್ಶನ ವಿಳಂಬವಾಗಿದ್ದಕ್ಕೆ ಮಲೇಶ್ಯಾದಲ್ಲಿ 10 ಥಿಯೇಟರ್‌ಗೆ ಕಲ್ಲು ತೂರಲಾಗಿದೆಯಂತೆ. ಒಂದು ಥಿಯೇಟರ್‌ಗೆ ಬೆಂಕಿ ಹಚ್ಚಲಾಗಿದೆಯಂತೆ.

ಇದಲ್ಲದೆ, ಚೀನಾ 111, ಜಪಾನ್‌ನ 130, ಸಿಂಗಾಪುರ, ಮಲೇಶಿಯಾ, ಹಾಂಕಾಂಗ್, ಸೌದಿ ಅರೇಬಿಯಾ ತಲಾ 100, ಅಮೇರಿಕಾದ 80, ಇಂಗ್ಲೇಡ್‌ನ 70 ಚಿತ್ರಮಂದಿರಗಳಲ್ಲಿ ಶಿವಾಜಿ ತೆರೆಕಂಡಿದೆ.

ಶಿವಾಜಿ ಹೊರತು ಪಡಿಸಿದರೆ, 3200 ಥೇಟರ್‌ಗಳಲ್ಲಿ ತೆರೆಕಂಡ ಖ್ಯಾತಿಗೆ ಒಳಗಾದ ಚಿತ್ರವೆಂದರೆ ಕೆಸಿನೋ ರೋಮಾಲ್.

ಬೆಂಗಳೂರಿನ 12 ಸೇರಿದಂತೆ ರಾಜ್ಯದ ಒಟ್ಟು 14 ಚಿತ್ರಮಂದಿಗಳಲ್ಲಿ 'ಶಿವಾಜಿ' ತೆರೆಕಂಡಿದೆ ನಿಜ. ಆದರೆ 15 ದಿನಗಳ ಟಿಕೆಟ್ ಈಗಾಗಲೇ ಮುಂಗಡವಾಗಿ ಮಾರಾಟವಾಗಿದೆಯಂತೆ. ಇನ್ನು ಕಾಳಸಂತೆಯಲ್ಲಿ ಪ್ರತಿ ಟಿಕೆಟ್ ಮಾರಾಟದ ಬೆಲೆ ಸಾವಿರ ರೂ. ದಾಟಿದೆಯಂತೆ.


ಯಾಕಾಗಿ ಜನ ಹೀಗೆ ಇದಕ್ಕೆ ಮುಗಿ ಬೀಳುತ್ತಿದ್ದಾರೆ. ಅಂಥದ್ದೇನಿದೆ ಈ ಸಿನಿಮಾದೊಳಗೆ? ಕಾದು ನೋಡಿ, ವಿಮರ್ಶೆಗಾಗಿ ನಮಗೆ ಟಿಕೆಟ್ ಸಿಕ್ಕ ಮೇಲೆ ನೋಡಿ ಬರೆಯುತ್ತೇವೆ. ○

ಕವಿತೆ



ದಂಗೆಯ ಮೊದಲು

ಇಂದು ಈ ನಗರದಲ್ಲಿ
ಯಾಕೆ ಒಬ್ಬೊಬ್ಬನೂ ಹೆದರಿಕೊಂಡಿದ್ದಾನೆ
ಮುಖ
ಇಳಿಬಿದ್ದಿದೆ ಯಾಕೆ
ಗಲ್ಲಿ ಗಲ್ಲಿಗಳಲ್ಲಿ
ಏಕೆ ಚಲಿಸುತ್ತಿದೆ
ಮೌನ ಬೆಚ್ಚಿನ ಗಾಳಿ
ಪರಿಚಯದ ಕಣ್ಣುಗಳಲ್ಲಿಯೂ
ಅಪರಿಚಿತ ಸೂಕ್ಷ್ಮ ತೆರೆ
ನಗರ ನೀರವತೆಯ ಸರಪಳಿಯಲ್ಲಿ
ಕಟ್ಟಿಹಾಕಿದ ಕೈದಿಯಂತೆ ಕಾಣುತ್ತಿದೆ
ಅಲ್ಲೊಬ್ಬ ಇಲ್ಲೊಬ್ಬ
ದಾರಿಹೋಕ ಸರಿದು ಹೋಗುತ್ತಾನೆ
ಭಯದ ಧೂಳಿನಲ್ಲಿ
ಯಾಕೆ ಮಬ್ಬಾಗಿದೆ ಸುತ್ತಮುತ್ತ
ಒಂದು ಹೊತ್ತಿನ ಊಟಕ್ಕೆ
ಮನೆಯಿಂದ ಹೊರಬಿದ್ದ ಮಂದಿ
ಹೊರಳಿ ನೋಡುತ್ತಾರೆ ಏಕೆ ಮನೆಯತ್ತ ತಿರು[illegible]
ಇಂದು
ಪೇಟೆಯಲ್ಲಿ
ಪರಿಚಿತ ಗುಲ್ಲಿಲ್ಲ
ನೆಲ ಗಾಜಿನದೆಂಬಂತೆ
ಚಲಿಸುತ್ತಿದ್ದಾರೆ.
ಪ್ರತಿನೋಟ
ತಪ್ಪಿಸಿಕೊಳ್ಳುತ್ತಿದೆ ನೋಟದಿಂದ
ತೆರೆದ ಮಾತಿಲ್ಲ
ಉಸಿರು ಬಿಗಿ ಹಿಡಿದಂತೆ
ಪ್ರತಿಯೊಂದು
ಈ ಪಟ್ಟಣ ಭಯಗೊಂಡ ಮಗುವಂತೆ
ತನ್ನ ನೆರಳಿಗೆ ತಾನೇ ಬೆಚ್ಚುತ್ತಿದೆ
ಪಂಚಾಂಗ ನೋಡು
ಇಂದೇನೋ ಹಬ್ಬವಿರಬೇಕು



- ಜಾವೇದ ಅಖ್ತರ

JANASHAKTHI KANNADA VARA PATRIKE : Printed by G.N.NAGARAJ, No 12, 18th Cross, S.R.Nagar, BANGALORE 560027 Published by: G.N.NAGARAJ, No 12, 18th Cross, S.R.Nagar, BANGALORE 560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor: S.Y.GURUSHANTH